ಸಂಪುಟ 24 ಸಂಚಿಕೆ 51
ಡಿಸೆಂಬರ್ 22, 2002 ಬೆಲೆ ರೂ. 3.00

ದುಡಿಯುವ ಜನರ ಪ್ರಾಣ ಮಿತ್ರ


ಹುಬ್ಬಳ್ಳಿ : ಹೂಬಳ್ಳಿ ನಗರಕ್ಕೆ ಇಟ್ಟರೋ ಕೊಳ್ಳಿ





ಗುಜರಾತ್ ಚುನಾವಣೆ ತಪ್ಪಿತೇ ಬವಣೆ ?






ಐಟೆಕ್ ಆಡಳಿತದಲ್ಲಿ ನಿರುದ್ಯೋಗಿಗಳು ಹತ

ವಿಶಿಷ್ಟ ಚಾನಲ್ 'ಕೈರಳಿ' ಉತ್ಸವ

ಆಕಾಶದಿಂದ ಧರೆಗಿಳಿದ 'ಕ್ರಾಂತಿಕಾರಿ ಬಾಂಬ್'ಗಳು

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 8



ಹಿಂದಿನ ಸಂಚಿಕೆಯಲ್ಲಿ ಸೇನಾ ಜೀವನ ಭಾರತೀಯ ಸಶಸ್ತ್ರ ಪಡೆಗಳ ಮೇಲೆ ಬೀರಿದ ಪ್ರಭಾವ, ಒಂದು ಸಂಪರ್ಕ ಕೇಂದ್ರದ ಸ್ಥಾಪನೆ, ಬಾರ್ ಮ್ಯಾನೇಜರ್ ಮತ್ತು ಇಬ್ಬರು ಮಹಿಳಾ ಟಿಕೆಟ್ ಕಲೆಕ್ಟರ್‌ಗಳೊಡನೆ ಸ್ನೇಹ ಸಂಪಾದನೆ, ಬಾರ್ ರಾತ್ರಿ ಹೊತ್ತಿನ ಚಟುವಟಿಕೆಗಳ ಕೇಂದ್ರಸ್ಥಾನವಾದದ್ದು, ರೈಲನಲ್ಲಿ ಅಮೆರಿಕನ್ ಸೈನಿಕರ ಪರಿಚಯ, ಅವರಿಂದ ಪಿಸ್ತೂಲ್ ಕಾಣಿಕೆ ಮತ್ತು ಮುಸ್ಲಿಂ ರೇಸ್ ಕುದುರೆ ಮಾಲಿಕರೊಬ್ಬರ ಮನೆಯಲ್ಲಿನ ಸಭೆ ಸೇರಿದ್ದ ಬಗ್ಗೆ ಓದಿದ್ದೀರಿ. ಮುಂದೆ ಓದಿ....

ಕನ್ನಡಕ್ಕೆ: ವಿಶ್ವ ಕುಂದಾಪುರ

ಸಭೆಯಲ್ಲಿ ಕೈಗೊಂಡ ತೀರ್ಮಾನಗಳು

ಇಡೀ ಸಂಘಟನೆ ಲಂಬ ವ್ಯವಸ್ಥೆಯಲ್ಲಿರಬೇಕು. (vertical system) ಮೇಲಿನ ಒಬ್ಬ ನಾಯಕ ಮುಂದಿನ ಮುಖಂಡರಿಗೇ ಮಾತ್ರವೇ ಗೊತ್ತಿರಬೇಕು.

ಕೇಂದ್ರ ಸಂಘಟನಾ ಸಮಿತಿ ಇರುವುದನ್ನು ತನ್ನ ಮೇಲಿನವರನ್ನು ಹೊರತುಪಡಿಸಿ ಹೊರಗಡೆ ಯಾರಿಗೂ ತಿಳಿಸಬಾರದು. ಎಲ್ಲ ಸಂಘಟನಾ ಕಾರ್ಯಗಳಿಗೆ ಸ್ಥಳೀಯ ಲೇಪ ನೀಡಬೇಕು. ಹೊರಗಿನ ಯಾವುದೇ ಸಂಸ್ಥೆ ಜತೆ ಸಂಪರ್ಕ ಇರಬಾರದು.

ಯೂನಿಟ್‌ಗಳ ನಾಯಕತ್ವ ಹೊಂದಿರುವ ಅಧಿಕಾರಿಗಳು ಸ್ಥಳೀಯವಾಗಿ ರೂಪಿಸಿದ ಸಾಧನಗಳ ಮೂಲಕ ತಮ್ಮ ಬ್ರಿಟಿಷ್ ವಿರೋಧಿ ಧೋರಣೆಯನ್ನು ಸೈನಿಕರಿಗೆ ತಿಳಿಯಪಡಿಸಬೇಕು. ಇಂಥದ್ದನ್ನು ಸೈನಿಕರು ಕಾತರದಿಂದ ಎದುರು ನೋಡುತ್ತಿರುತ್ತಾರೆ.

ವೈರಿ ಜತೆಗೆ ಎಲ್ಲಾ ವ್ಯಕ್ತಿಗತ ಕೃತ್ಯಗಳು ಹಾಗೂ ಸ್ಥಳದಲ್ಲೆ ತಕ್ಷಣಕ್ಕೆ ಉದ್ಭವಿಸುವ ಸಂಘರ್ಷವನ್ನು ಕಟ್ಟುನಿಟ್ಟಾಗಿ ನಿವಾರಿಸಬೇಕು.

ಕ್ರಾಂತಿಕಾರಿ ಕೆಲಸದಲ್ಲಿ ತೊಡಗಿದವರ ಬಗ್ಗೆ ಪತ್ತೆಯಾದರೆ ಅಂಥವರು ಕೂಡಲೇ ತಲೆಮರೆಸಿಕೊಳ್ಳಬೇಕು. ಸಂಘಟನೆಯ ಸ್ಥಳೀಯ ಘಟಕ ಅವರ ಜತೆ ಸಂಪರ್ಕ ಇಟ್ಟುಕೊಳ್ಳಬೇಕು ಹಾಗೂ ಅವರನ್ನು ನೋಡಿಕೊಳ್ಳಬೇಕು.

ಯಾವುದೇ ಬಿಡಿ ಮದ್ದುಗುಂಡು, ಶಸ್ತ್ರಾಸ್ತ್ರ ಅಥವಾ ಗ್ರೆನೇಡ್‌ಗಳನ್ನು ಸುರಕ್ಷಿತವಾಗಿ ಇಡಲು ಸಾಧ್ಯವಾಗುವುದಾದರೆ ಅವುಗಳನ್ನು ಪ್ರಮುಖ ಸ್ಥಳಗಳಲ್ಲಿ ಅಡಗಿಸಿಡಬೇಕು. ಸಂಘಟನೆಯಲ್ಲಿರುವ ಮದ್ದುಗುಂಡು ಅಧಿಕಾರಿ ಮತ್ತು ಸೈನಿಕರು ಇಂಥ ಕೆಲಸವನ್ನು ನಿರ್ವಹಿಸಬೇಕು. ಬಂಡಾಯದ ವೇಳೆ ನಾಗರೀಕರನ್ನು ಶಸ್ತ್ರಸಜ್ಜಿತಗೊಳಿಸಲು ಇದು ಅಗತ್ಯ.

ಓ.ಸಿ ಸದಸ್ಯರ ಮಧ್ಯೆ ಕಡಿಮೆ ಅವಧಿಯ ಅಂತರದಲ್ಲಿ ಸಂಪರ್ಕ ಸಾಧಿಸಲು ವೈರ್‌ಲೆಸ್ ಸೆಟ್‌ಗಳನ್ನು ಪಡೆಯಬೇಕು. ಬಂಡಾಯಕ್ಕೆ ಆದೇಶ ನೀಡಬೇಕಾದ ಸಂದರ್ಭದಲ್ಲಿ ಅಥವಾ ಸದಸ್ಯರ ಬಂಧನವಾದಾಗ ಮಾತ್ರವೇ ವೈರ್‌ಲೆಸ್ ಸಂದೇಶ ನೀಡಬೇಕು. ದಿನನಿತ್ಯದ ಸಂಪರ್ಕ ಸಂದೇಶಕ್ಕಾಗಿ ಸಿಗ್ನಲ್ ಕಾರ್ಪ್ಸ್ ಹುಡುಗರ ಜತೆ ಡಬ್ಲ್ಯು.ಓ.ಸಿ(ಐ) ಹುಡುಗಿಯರನ್ನು ಸಂಪರ್ಕಿಸಬೇಕು. ಮತ್ತು ಸೇನೆಯ ಟೆಲಿಫೋನ ಜಾಲವನ್ನು ಬಳಸಿಕೊಳ್ಳಬೇಕು.

ಸಂಘಟನಾ ಸಮಿತಿಯು ಎಲ್ಲಾ ಶಾಂತಿಯುತ ರೈಲ್ವೆ ಸ್ಟೇಷನ್‌ಗಳು, ಸಾರಿಗೆ ಶಿಬಿರಗಳು ಮತ್ತು ತರಬೇತಿ ಕೇಂದ್ರಗಳಲ್ಲಿ ಅಂಬಾಲಾರಂಥ ಕೇಂದ್ರಗಳನ್ನು ಸ್ಥಾಪಿಸಬೇಕು.

ಬ್ರಿಟಿಷರ ವಿರುದ್ಧ ಸಂಘಟಿತರಾಗುವಂತೆ ಸೈನಿಕರಿಗೆ ಕರೆಕೊಡುವ ಕರಪತ್ರಗಳನ್ನು ದೊಡ್ಡ ಪ್ರಮಾಣದಲ್ಲಿ ಮುದ್ರಿಸಿ ರಹಸ್ಯವಾಗಿ ವಿತರಿಸಬೇಕು. ಕರಪತ್ರದ ಶೈಲಿ ಹೇಗಿರಬೇಕೆಂದರೆ ಒಂದು ವೇಳೆ ಇದನ್ನು ವೈರಿಗಳು ಪತ್ತೆ ಹಚ್ಚಿದರೂ ಇದನ್ನು ಶಸಸ್ತ್ರ ಪಡೆಗಳ ಹೊರಗಿನ ರಾಜಕೀಯ ಪಕ್ಷ ಮುದ್ರಿಸಿ ವಿತರಿಸಿದೆ ಎಂಬ ಭಾವನೆ ಬರುವಂತಿರಬೇಕು. ಅಂಬಾಲಾ ಕೇಂದ್ರ ಈ ಕಾರ್ಯವನ್ನು ನಿರ್ವಹಿಸಬೇಕು.

ಎಲ್ಲಾ ಸದಸ್ಯರ ಆರ್ಥಿಕ ಸಂಪನ್ಮೂಲಗಳನ್ನು ಯೂನಿಟ್ ಮಟ್ಟದಲ್ಲಿ ಕ್ರೋಡೀಕರಿಸಬೇಕು. ತೀರಾ ಗಂಭೀರ ಆರ್ಥಿಕ ಅಗತ್ಯ ಬಂದಾಗ "ಕೈಹಣ" (pocket money) ಇದ್ದವರು ನೆರವಾಗಬೇಕು. ಬ್ರಿಟಿಷ್ ಸರಕಾರದ ಎಲ್ಲಾ ಹಣ ಜನತೆಯ ಹಣ. ಅಗತ್ಯ ಬಿದ್ದಾಗ, ನ್ಯಾಯಸಮ್ಮತ ಹಾಗೂ ಕಾನೂನುಬಾಹಿರ ಮಾರ್ಗಗಳ ಮೂಲಕ ಅದನ್ನು ಕ್ರಾಂತಿಕಾರಿ ಚಟುವಟಿಕೆಗಳಿಗೆ ಬಳಸಬೇಕು ಎಂಬ ತತ್ವವನ್ನು ಪಾಲಿಸಬೇಕು.

ಆಗ ಸ್ವಯಂಸ್ಫೂರ್ತಿಯಾಗಿ ನಡೆಯುತ್ತಿದ್ದ, ಬಂಡಾಯದ ಸುದ್ದಿಗಳನ್ನು ಪ್ರಕಟಿಸಿ ಪ್ರಸಾರ ಮಾಡಬೇಕು.

ಆಗಸದಿಂದ ಧರೆಗಿಳಿದ 'ಕ್ರಾಂತಿಕಾರಿ ಬಾಂಬ್' ಗಳು

ಅಂಬಾಲಾಕ್ಕೆ ಹಿಂದಿರುಗಿದ ನಾನು ಮುದ್ರಣಾಲಯದ (ಪ್ರೆಸ್) ಹುಡುಕಾಟದಲ್ಲಿ ತೊಡಗಿದೆ. ದಿವಾಳಿಯೆದ್ದ ಕ್ರಾಂತಿಕಾರಿಯೊಬ್ಬರು ನಡೆಸುತ್ತಿದ್ದ ಶಿಥಿಲಗೊಂಡ ಒಂದು ಪ್ರೆಸ್ ನಮಗೆ ಬಹಳ ನೆರವಾಯಿತು. ಕ್ರಮೇಣ ಅದು ಶ್ರೀಮಂತಗೊಂಡಿತು. ಈ ಶಿಥಿಲ ಮುದ್ರಣಾಲಯದಲ್ಲಿ ಲಕ್ಷಾಂತರ ಕರಪತ್ರಗಳು ಮುದ್ರಣಗೊಂಡು ಪ್ರಸಾರಗೊಂಡವು. ಈ ಕರಪತ್ರಗಳ ಒಂದೇ ಒಂದು ಪ್ರತಿಯೂ ನನ್ನ ಬಳಿಯಿಲ್ಲ. ಭಾರತೀಯ ಸಿ.ಐ.ಡಿ. ಇಲಾಖೆಯಲ್ಲಿ ಖಂಡಿತಕ್ಕೂ ಅವುಗಳಿವೆ. ಫೋರ್ಟ್ ವಿಲಿಯಂನಲ್ಲಿ ನಾನು ಸೆರೆಯಲ್ಲಿದ್ದಾಗ ಒಮ್ಮೆ ಅವರಲ್ಲೊಬ್ಬರನ್ನು ಸಂಧಿಸಿದ್ದೆ. ನಮ್ಮ ದೇಶದ ರಾಷ್ಟ್ರೀಯ ವಿಮೋಚನೆ ಹೋರಾಟದಲ್ಲಿ ನಮ್ಮ ಸೈನಿಕರು ನಡೆಸಿದ ಪ್ರಮಾಣಿಕ ಹಾಗೂ ಧೀರೋದಾತ್ತ ಪ್ರಯತ್ನಗಳನ್ನು ನಮ್ಮ ಜನರು ಅರಿಯಲಾದರೂ ಅವುಗಳ ಒಂದು ಪ್ರತಿಯನ್ನು ರಾಷ್ಟ್ರೀಯ ಪ್ರತ್ರಗಾರದಲ್ಲಿ ಇಡಬೇಕೆಂದು ನಾನು ಅವರನ್ನು ಕೋರುತ್ತೇನೆ. ಅವರು ಹಾಗೆ ಮಾಡಿಯಾರೆ? ಆ ಬಗ್ಗೆ ನನಗೇನೋ ಅನುಮಾನ.

ಕರಪತ್ರಗಳನ್ನು ಅಂಬಾಲಾದಿಂದ ಬೇರೆ ಬೇರೆ ಕೇಂದ್ರಗಳಿಗೆ ಕಳಿಸಲು ಮಾರ್ಗೋಪಾಯಗಳನ್ನು ಕಂಡುಕೊಂಡೆ. ಯುದ್ಧ ಕಾಲದಲ್ಲಿ ಆಹಾರದ ಪೊಟ್ಟಣಗಳನ್ನು ಕೊಡುಗೆಯಾಗಿ ನೀಡಲಾಗುತ್ತಿತ್ತು. ಇದು ಭಾರತೀಯ ಹಾಗೂ ಬ್ರಿಟಿಷ್ ಸೈನಿಕರ ನಡುವೆ ತುಂಬಾ ಜನಪ್ರಿಯವಾಗಿತ್ತು. ಆಹಾರದ ಪೊಟ್ಟಣದ ಮಾದರಿಯಲ್ಲಿ ಕರಪತ್ರಗಳನ್ನು ಕಟ್ಟುತ್ತಿದ್ದೆವು. ಮಹಿಳಾ ಟಿಕೆಟ್ ಕಲೆಕ್ಟರ್‌ಗಳು ಹಾಗೂ ಬಾರ್ ಸಿಬ್ಬಂದಿ ನಮ್ಮ ಸಂಪರ್ಕದ ಜನರಿಗೆ ಅವುಗಳನ್ನು ಹಸ್ತಾಂತರಿಸುತ್ತಿದ್ದರು.

ನಮಗೆ ಸಂಪರ್ಕ ಇಲ್ಲದ ಯುನಿಟ್‌ಗಳಲ್ಲಿ, ಅಂಥ ಯುನಿಟ್‌ಗಳ ಎಲ್ಲಾ ಭಾರತೀಯ ಅಧಿಕಾರಿಗಳಿಗೆ ಒಂದು ಕರಪತ್ರವನ್ನು ಪೋಸ್ಟ್ ಮಾಡುತ್ತಿದ್ದೆವು. ಆ ಕಾಲದಲ್ಲಿ ಸೇನಾಧಿಕಾರಿಗಳ ಪಟ್ಟಿ ಸಿಗುತ್ತಿದ್ದುದು ಅನುಕೂಲಕ್ಕೆ ಬಂತು. ಈ ಕರಪತ್ರಗಳು ಸಾರ್ವತ್ರಿಕ ಪ್ರಸಾರಕ್ಕಾಗಿ ಇರುತ್ತಿದ್ದವಾದ್ದರಿಂದ ನಾವು ಅಪಾಯಕ್ಕೆ ಸಿಲುಕುವಂಥ ಸನ್ನಿವೇಶ ಎದುರಾಗದಂತೆ ಜಾಗ್ರತೆ ವಹಿಸುತ್ತಿದ್ದೆವು. ಬ್ರಿಟಿಷರ ವಿರುದ್ಧ ಬಂಡೇಳುತ್ತಿದ್ದ ಸೈನಿಕರನ್ನು ಬರ್ಬರವಾಗಿ ಹಿಂಸಿಸುತ್ತಿದ್ದ ವಿವರಗಳನ್ನು ಕರಪತ್ರದಲ್ಲಿ ತಿಳಿಸುತ್ತಿದ್ದೇವು.

ಈ ಅಂಚೆಗಳನ್ನು ನಾವು ಯಾವತ್ತೂ ಅಂಬಾಲಾದಿಂದ ಪೋಸ್ಟ್ ಮಾಡಲೇ ಇಲ್ಲ. ಸಾಮಾನ್ಯವಾಗಿ ದೆಹಲಿಯಿಂದಲೇ ಅಂಚೆಗೆ ಹಾಕುತ್ತಿದ್ದೆವು. ಬ್ರಿಟಿಷ್ ಬೇಹುಗಾರಿಕೆಯ ಅನುಭವವನ್ನು ಕರಗತ ಮಾಡಿಕೊಂಡಿದ್ದ ಭಾರತೀಯ ಸಿಐಡಿಗೆ ಅಂಬಾಲಾದಲ್ಲಿನ ಕೇಂದ್ರವನ್ನು ಪತ್ತೆ ಮಾಡುವುದು ಸಾಧ್ಯವಾಗಲಿಲ್ಲ. ಸಾಮಾನ್ಯವಾಗಿ ಕರಪತ್ರಗಳನ್ನು ಪೋಸ್ಟ್ ಮಾಡಲಾಗುತ್ತಿದ್ದ ದೆಹಲಿಯೇ ಅವರ ಗಮನ ಸೆಳೆಯಿತು.

ಅಂಬಾಲಾದಲ್ಲಿನ ಭಾರತೀಯ ವಾಯುಪಡೆ (ಐಎಎಫ್) ಅಧಿಕಾರಿಗಳ ತರಬೇತಿ ಕೇಂದ್ರದಲ್ಲಿ ಒಂದು ಬಲಿಷ್ಠವಾದ ಸಂಘಟನೆ ಬೆಳೆಯಿತು. ರಾಜಕೀಯವಾಗಿ ತುಂಬಾ ಪ್ರಬುದ್ಧರಾದ ಹಾಗೂ ಅಸೀಮ ಸಾಹಸಿಗಳಾದ ಭಾರತೀಯ ಪೈಲಟ್‌ಗಳು ಕರಪತ್ರಗಳನ್ನು ಯುನಿಟ್‌ಗಳಿಗೆ ಮುಟ್ಟಿಸಲು ಒಂದು ಹೊಸದಾದ, ಆದರೆ ಅಷ್ಟೇ ಅಪಾಯಕಾರಿಯಾದ ದಾರಿಯೊಂದನ್ನು ಹುಡುಕಿದರು.

ರಾತ್ರಿಯಲ್ಲಿ ಏಕಾಂಗಿ ತರಬೇತಿ ಹಾರಾಟದ ವೇಳೆ ಅವರು ಕರಪತ್ರಗಳ ಕಟ್ಟುಗಳನ್ನು ಕಂಟೋನ್ಮೆಂಟ್‌ಗಳ ಕತ್ತಲಲ್ಲಿ ಭಾರತೀಯ ಜನರ ಈ ಧೀರ ಪುತ್ರರು ಕರಪತ್ರಗಳನ್ನು ಉದುರಿಸುವುದಕ್ಕೆ ಬೇಗನೆ ದೀಪಗಳನ್ನು ಆರಿಸಬೇಕೆಂಬ ಅಂದಿನ ನಿಯಮ ಇನ್ನಷ್ಟು ಸಹಾಯಕವಾಯಿತು. ಬೇಗನೆ ಕತ್ತಲು ಆವರಿಸುತ್ತಿತ್ತು. ಆಗ ಬರುತ್ತಿದ್ದುದು ಬ್ರಿಟಿಷ್ ಅಧಿಕಾರಿಗಳ ಮೆಸ್‌ನ ಮಂದ ಬೆಳಕು ಮಾತ್ರ, ಅಲ್ಲಿ ಬ್ರಿಟಿಷ್ ಅಧಿಕಾರಿಗಳು ಗ್ಯಾಲನ್‌ಗಟ್ಟಲೆ ಸೂರೆಯಲ್ಲಿ ಮುಳುಗಿ ಕುಡಿದ ಅಮಲಿನಲ್ಲಿ ತೂರಾಡುತ್ತಾ.

"ಐ ವಿಲ್ ಬಿ ವೇಯ್ಟಿಂಗ್ ಫಾರ್ ಯು..."

"ವೈಟ್ ಕ್ಲಿಫ್ಸ್ ಆಫ್ ಡೋವರ್.."

"ವೆನ್ ದ ವೈಟ್ಸ್ ಆಫ್ ಲಂಡನ್ ಶೈನ್ ಅಗೇಯ್ನ್"

ಹಾಡನ್ನು ಹಾಡುತ್ತಿದ್ದರು. ತಮ್ಮ ದುಗುಡ, ಯುದ್ಧದ ಬೇಸರವನ್ನು ಕಳೆಯಲು ಯತ್ನಿಸುತ್ತಿದ್ದರು. ಜಲಂಧರ್, ಲಾಹೋರ್ ಆಗಸದಿಂದ...

1942ರ ಮಧ್ಯದ ತಿಂಗಳುಗಳಲ್ಲಿ ಜಲಂಧರ್ ಮತ್ತು ಲಾಹೋರ್ ಕಂಟೋನ್ಮೆಂಟ್‌ಗಳ ಮೇಲೆ ಈ 'ಕ್ರಾಂತಿಕಾರಿ ಬಾಂಬ್'ಗಳು ಉದುರಿದವು. ಇದು ಅಧಿಕಾರಿಗಳ ಗಮನ ಸೆಳೆಯಿತು. ಐದನೇ ದಳದವರು (fifth coloms) ಕರಪತ್ರ ಹಂಚುತ್ತಿದ್ದಾರೆ. ಅಂಥವರನ್ನು ಬಂಧಿಸಬೇಕು ಎಂಬ ಆದೇಶ ಹೊರಬಿದ್ದಿತು. ಎಲ್ಲರನ್ನೂ ಸಾಲಾಗಿ ನಿಲ್ಲಿಸಿ ಕರಪತ್ರಗಳನ್ನು ವಶಪಡಿಸಿಕೊಂಡು ಸುಡಲಾಯಿತು. ಯುನಿಟ್ ಕಮಾಂಡರ್‌ಗಳಿಗೆ ಕರಪತ್ರಗಳನ್ನು ಹಸ್ತಾಂತರಿಸದೆ ಅವುಗಳನ್ನು ತಮ್ಮಲ್ಲೇ ಇಟ್ಟುಕೊಂಡ ಸೈನಿಕರನ್ನು ಕಠಿಣವಾಗಿ ದಂಡಿಸಲಾಯಿತು.

ಕರಪತ್ರಗಳನ್ನು ಜೋಪಾನವಾಗಿಟ್ಟುಕೊಂಡು ಪ್ರಸಾರ ಮಾಡುತ್ತಿದ್ದ ಕೆಲವು ಸಿಪಾಯಿಗಳು ಮತ್ತು ಎನ್.ಸಿ.ಓ. ಗಳನ್ನು ಸೆರೆ ಹಿಡಿದು ಶಿಕ್ಷಿಸಲಾಯಿತು. ನಮಗೆ ಈ ವಿಷಯ ಗೊತ್ತಾದ ತಕ್ಷಣವೇ ಸಂದೇಶವೊಂದನ್ನು ಕಳಿಸಿ ಕರಪತ್ರಗಳನ್ನು ಯುನಿಟ್ ಕಮಾಂಡರ್‌ಗಳಿಗೆ ವಶಕ್ಕೆ ಒಪ್ಪಿಸುವಂತೆ ಸೂಚಿಸಿದೆವು. ಹೀಗೆ ಮಾಡುವುದರಿಂದ ಅಧಿಕಾರಿಗಳಿಗೆ ಸೈನಿಕರಲ್ಲಿ ವಿಶ್ವಾಸ ಮೂಡುತ್ತದೆ ಎಂಬುದು ನಮ್ಮ ಅಭಿಪ್ರಾಯವಾಗಿತ್ತು.

ಈ ಕರಪತ್ರಗಳು ಎಲ್ಲಿಂದ ಬಂದವು ಎನ್ನುವುದು ಮಿಲಿಟರಿ ಬೇಹುಗಾರಿಕೆ ದಳ ಮತ್ತು ಭಾರತೀಯ ಸಿಐಡಿಗೆ ಇವತ್ತಿಗೂ ಗೊತ್ತಿಲ್ಲ. ಅವರು ತಮ್ಮ ಡೈರಿಯಲ್ಲಿನ ಈ ಖಾಲಿ ಜಾಗ ಇವು ಸ್ವರ್ಗದ ಕಾಣಿಕೆ ಎಂದು ನಮೂದಿಸಿಕೊಳ್ಳಲಿ.

ಅದು 1942ರ ಜೂನ್ ಗಾಂಧಿ ನೇತೃತ್ವದ ಅಹಿಂಸಾ ಚಳುವಳಿಯ ಮೊದಲ ಮರ್ಮದ ಧ್ವನಿ ಕೇಳಿಬರತೊಡಗಿತು. ಕ್ರಿಪ್ಸ್ ನಿಯೋಗದ ಭೇಟಿ ವಿಫಲವಾಯಿತು. ಬ್ರಿಟಿಷ್ ಅಧಿಕಾರಿಗಳು ಸಹನೆ ಕಳೆದುಕೊಳ್ಳತೊಡಗಿದ್ದರು. ಭಾರತದ ಉಷ್ಣ ಹವೆ, ಸ್ವದೇಶ - ಮನೆ ಮಡದಿ ಮಕ್ಕಳಿಂದ ದೀರ್ಘ ಕಾಲದ ಅಗಲಿಕೆ, ದೂರಪೂರ್ವ ಮತ್ತು ಮಧ್ಯ ಪೂರ್ವದಲ್ಲಿನ ಸೋಲುಗಳು, ಡಂಕಿರ್ಕ್ ನೆನಪುಗಳು ಇವೆಲ್ಲವೂ ಅವರನ್ನು ಕಂಗೆಡಿಸಿದವು. ಭಾರತದ ಸ್ವಾತಂತ್ರ್ಯ ಕುರಿತ ಪ್ರತಿಯೊಂದು ಮಾತಿಗೂ ಅವರು ತೀಕ್ಷ್ಣವಾಗಿ ಹಾಗೂ ಖಾರವಾಗಿ ಪ್ರತಿಕ್ರಿಯಿಸಿದರು. ನಮಗೆ ಸ್ವಾತಂತ್ರ್ಯ ನಿರಾಕರಣೆಗೆ ನಾವು ಅಷ್ಟೇ ಕಟುವಾಗಿ ಪ್ರತಿಕ್ರಿಯಿಸಿದೆವು.

ಎಂದಿನಂತೆ ಒಂದು ಸಂಜೆ ಕಿಲ್ನರ್ ಬಾರ್‌ಗೆ ಹೋಗಿ ಲೆಫ್ಟಿನೆಂಟ್ ಶರವಣ್ ಸಿಂಗ್ ಜತೆ ಕುಡಿಯುತ್ತ ಕುಳಿತಿದ್ದೆ. ಆತ ನೇರ ನಡೆನುಡಿಯ, ಕಟ್ಟಾ ಬ್ರಿಟಿಷ್ ವಿರೋಧಿ ಸಿಖ್ ತರುಣ. ತೆಳುಗಡ್ಡ ಈ ಯುವಕ ಸಿಡಿಮಿಡಿಗುಟ್ಟುತಿದ್ದ.

"ಜೈ, ನಿಮಗೆ ಗೊತ್ತಾ, ಸ್ಟೇಷನ್ ಪಕ್ಕ ಇರುವ ರೈಲ್ವೆ ಇನ್ಸ್‌ಟಿಟ್ಯೂಟ್‌ನಲ್ಲಿ ನನಗೆ ಡಾನ್ಸ್‌ಗೆ ಹೋಗಲು ಅನುಮತಿ ನಿರಾಕರಿಸಲಾಯಿತು. ಅದೆ ಸಾಮಾನ್ಯ ಬ್ರಿಟಿಷ್ ಸೈನಿಕರನ್ನು (Tommics) ಬಿಡಲಾಗುತ್ತಿದೆ." ಎಂದು ಹೇಳಿದ ಆತ ಮೊದಮೊದಲು ಬಿಕ್ಕುತ್ತಾ ಆ ಮೇಲೆ ಒಂದೇ ಸಮನೆ ಗೋಳೋ ಎಂದು ಅತ್ತುಬಿಟ್ಟ.

(ಮುಂದುವರಿಯುವುದು)

ತೋಟಕಾರ್ಮಿಕರ 8ನೇ ಅಖಿಲ ಭಾರತ ಸಮ್ಮೇಳನದ ಮೊಟ್ಟಮೊದಲ ಬಾರಿಗೆ ಚಿಕ್ಕಮಗಳೂರಿನಲ್ಲಿ ನಡೆಯುತ್ತಿದೆ. ಈ ಸಂದರ್ಭ ಹಾಗೂ ಮಹತ್ವ, ತಯಾರಿಯನ್ನು ವಿವರಿಸಿದ್ದಾರೆ.

ತೋಟ ಕೈಗಾರಿಕೆ ಉಳಿಸಲು - ಕಾರ್ಮಿಕರನ್ನು ರಕ್ಷಿಸಲು

ಚಿಕ್ಕಮಗಳೂರಿನಲ್ಲಿ ತೋಟ ಕಾರ್ಮಿಕರ ರಾಷ್ಟ್ರೀಯ ಸಮ್ಮೇಳನ

ಕರ್ನಾಟಕದ ತೋಟ ಕಾರ್ಮಿಕರ ಇತಿಹಾಸದಲ್ಲಿ ಪ್ರಥಮ ಬಾರಿಗೆ ರಾಷ್ಟ್ರೀಯ ಸಮ್ಮೇಳನ ನಡೆಸಬೇಕಾದ ಮಹತ್ವದ ಜವಾಬ್ದಾರಿ ಬಂದಿದೆ. 1972ರಲ್ಲಿ ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ನಮ್ಮ ರಾಷ್ಟ್ರದ ವಿವಿಧ ರಾಜ್ಯಗಳಲ್ಲಿರುವ ತೋಟ ಕಾರ್ಮಿಕರ ಐಕ್ಯತೆಯನ್ನು ಬೆಸೆಯಲು ಸ್ಥಾಪಿಸ ಲಾದ ಆಲ್ ಇಂಡಿಯಾ ಪ್ಲಾಂಟೇಷನ್ ವರ್ಕರ್ಸ್ ಫೆಡರೇಶನ್‌ನ ಈವರೆಗಿನ ಸ್ಥಾಪನಾ ಸಮ್ಮೇಳನವು ಸೇರಿ ಏಳು ಸಮ್ಮೇಳನಗಳು ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಅಸ್ಸಾಂ ರಾಜ್ಯಗಳಲ್ಲಿ ನಡೆದಿವೆ. ಎಂಟನೆಯ ಸಮ್ಮೇಳನ ನಡೆಸುವ ಜವಾಬ್ದಾರಿ ಕರ್ನಾಟಕ ಪಾಲಿಗೆ ಬಂದಿದೆ.

ಕಳೆದ ಒಂದು ದಶಕದ ಹಿಂದಿನಿಂದಲೇ ಅಖಿಲ ಭಾರತ ಸಮ್ಮೇಳನ ನಡೆಸಲು ಅಖಿಲ ಭಾರತ ಮುಖಂಡತ್ವ ಒತ್ತಾಯಿಸುತ್ತಾ ಬಂದಿತ್ತು. ಆದರೆ ಕರ್ನಾಟಕದ ಸಂಘಟನೆ ಅಂತಹ ದೊಡ್ಡ ಜವಾಬ್ದಾರಿ ತೆಗೆದು ಕೊಳ್ಳಲು ತಮ್ಮ ಸಣ್ಣ ಸಂಘಟನಾ ಶಕ್ತಿಗೆ ಸಾಧ್ಯವಿಲ್ಲ ವೆಂದೂ ಹೇಳುತ್ತಾ ಬಂದಿತ್ತು. ಆದರೆ, ಈಗ ಈ ಜವಾಬ್ದಾರಿ ತೋಟ ಕೈಗಾರಿಕೆಗೆ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿರುವ ಇಂತಹ ಕಾಲಘಟ್ಟದಲ್ಲಿ ಅತಿ ಚಿಕ್ಕದಾದ ನಮ್ಮ ಸಂಘಟನೆಗಳ ಮೇಲೆ ಬಂದಿದೆ.

ನಮ್ಮ ರಾಜ್ಯದಲ್ಲಿ 350-400 ವರ್ಷಗಳ ಹಿಂದೆಯೇ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ಬೆಳೆಯಲು ಪ್ರಾರಂಭಿಸಿದ್ದುದು ದಾಖಲೆಗಳಿಂದ ತಿಳಿದು ಬರುತ್ತದೆ. ಕಳೆದ ಎರಡು ಶತಮಾನಗಳ ಹಿಂದಿನಿಂದ ಬ್ರಿಟೀಷ್ ನವರು ವ್ಯವಸ್ಥಿತವಾಗಿ ತೋಟವನ್ನು ಬೆಳೆಸಲು ಪ್ರಾರಂಭಿಸಿದರು. ಅದಕ್ಕೆ ಬೇಕಾದ ಜನರನ್ನು ನೆರೆ ರಾಜ್ಯಗಳಾದ ಕೇರಳ, ತಮಿಳುನಾಡು, ಆಗಿನ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ಮಂಗಳಾಪುರಂ (ಮಂಗಳೂರು)ಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಅತಿ ಹಿಂದುಳಿದವರನ್ನು ಸಪ್ಪೈರ್ ಮೇಸ್ತ್ರಿಗಳ ಮೂಲಕ ಕರೆತಂದು ಕೂಲಿ ಆಳುಗಳಾಗಿ ದುಡಿಸಿ ಕಾಫಿ ತೋಟ ಮಾಡಿದರು.


ದಟ್ಟವಾದ ಕಾಡು, ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶಗಳಲ್ಲಿ ಕಾಡು ಕಡಿದು ತೋಟಗಳನ್ನು ನಿರ್ಮಿಸಿದರು. ಆಗಿನ ತೋಟ ಪ್ರದೇಶಗಳಲ್ಲಿ ಅನೇಕರು ಭಯಂಕರ ಕಾಯಿಲೆ ಮಲೇರಿಯಾಕ್ಕೆ ತುತ್ತಾದರು. ಪಟ್ಟಣಕ್ಕೆ ವಾಹನ ಸೌಕರ್ಯಗಳಿರಲಿಲ್ಲ. ಅಂತಹ ಕಠಿಣ ಪರಿಸ್ಥಿತಿಯಲ್ಲಿ ಬ್ರಿಟಿಷರು, ಅವರ ಕೈಯಾಳುಗಳಾದ ಸಿಬ್ಬಂಧಿಗಳು ಮತ್ತು ಸಪ್ಪೈರ್ ಮೇಸ್ತ್ರಿಗಳ ದಬ್ಬಾಳಿಕೆ, ಹಿಂಸೆ, ಶೋಷಣೆಗಳಿಗೆ ಬಲಿಯಾಗಿ ಒಂದು ಸಲ ಈ ಪ್ರದೇಶಕ್ಕೆ ಬಂದವರು. ಸಾಲದ ಹೊರೆಯಿಂದ ಮತ್ತೆ ಹಿಂದಕ್ಕೆ ಹೋಗಲು ಆಗದೆ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿ ತೋಟಗಳಲ್ಲಿ ಶ್ರೀಮಂತರ ಲಾಭಕ್ಕಾಗಿ ದುಡಿದರು. ಇದರಿಂದ ಉಂಟಾದ ಉತ್ಪನ್ನಗಳ ಅತಿಲಾಭಗಳಿಂದ ಶ್ರೀಮಂತ ಪ್ಲಾಂಟರ್‌ಗಳು, ಬ್ರಿಟೀಷರು ಮತ್ತು ಭಾರತದ ಪ್ಲಾಂಟರ್‌ಗಳು ಪ್ರತಿಷ್ಠೆಯಿಂದ ಮೆರೆದರು. ಆದರೆ ಸಂಪತ್ತನ್ನುಂಟು ಮಾಡಿದ ಕಾರ್ಮಿಕರು ಸರಿಯಾಗಿ ಉಣ್ಣಲಿಕ್ಕಿಲ್ಲದೆ, ಮೈತುಂಬ ಬಟ್ಟೆಯಿಲ್ಲದೆ, ಮಕ್ಕಳಿಗೆ ಶಿಕ್ಷಣವಿಲ್ಲದೆ, ಸರಿಯಾದ ವಸತಿ ಸೌಕರ್ಯವಿಲ್ಲದೆ, ಸಮಾಜದ ಅತಿ ಕೆಳವರ್ಗದ "ತೋಟದ ಕೂಲಿ" ಗಳೆಂಬ ಹೆಸರಿನಿಂದ ಬದುಕಿದರು. ಆಗಿನಿಂದ ಈಗಿನವರೆಗೂ ತೋಟಗಳಿಗೆ ದುಡಿಯುವ ಕಾರ್ಮಿಕರ ಹೆಚ್ಚಿನ ಕಡೆ ಪರಿಸ್ಥಿತಿ ಏನೇನು ಉತ್ತಮವಾಗಿಲ್ಲ. ಶೋಷಣೆಯ ರೂಪ ಸ್ವಲ್ಪ ಬೇರೆಯಾಗಿರಬಹುದು.

ಕಳೆದೆರಡು ವರ್ಷಗಳಿಂದ ಈ ಕೈಗಾರಿಕೆ ತೀವ್ರ ಭಿಕ್ಕಟ್ಟನ್ನು ಎದುರಿಸುತ್ತಿದೆ. ಕಾಫಿ ಮಂಡಳಿ ಬೇಡ ಮುಕ್ತ ಮಾರುಕಟ್ಟೆ ಬೇಕು ಎಂದು, ಜಾಗತೀಕರಣ, ಉದಾರೀಕರಣ, ಖಾಸಗೀಕರಣ ವನ್ನು ಕೊಂಡಾಡಿದ ಕಾಫಿಗೆ ಹೆಚ್ಚು ಬೆಲೆಸಿಕ್ಕುತ್ತಿದ್ದ ಕೇವಲ ಎರಡು ಮೂರು ವರ್ಷಗಳ ಅವಧಿ ಕೊನೆಗೊಂಡು ಇಂದು ಪರದಾಡುವ ಪರಿಸ್ಥಿತಿ ಬಂದೊದಗಿದೆ.

ಕೇರಳ, ಅಸ್ಸಾಂ ರಾಜ್ಯಗಳಲ್ಲಿ ಹಲವು ತೋಟಗಳು ಈಗಾಗಲೇ ಮುಚ್ಚಿಹೋಗಿ ಸಹಸ್ರಗಟ್ಟಲೆ ಕಾರ್ಮಿಕರು ನಿರ್ಗತಿಕರಾಗಿರುವ ವರದಿ ಬರುತ್ತಿದೆ. ಸಮ್ಮೇಳನ ಕೈಗಾರಿಕೆಯ ಉಳಿವು ಮತ್ತು ಕಾರ್ಮಿಕರ ರಕ್ಷಣೆಯ ಬಗ್ಗೆ ಚರ್ಚಿಸಿ ಕಾರ್ಯಕ್ರಮ ರೂಪಿಸುತ್ತಿದೆ.

ಸಮ್ಮೇಳನದಲ್ಲಿ ಭಾಗವಹಿಸಲು ಪಶ್ಚಿಮ ಬಂಗಾಳ, ತ್ರಿಪುರ, ಅಸ್ಸಾಂ, ಕೇರಳ, ತಮಿಳುನಾಡು, ಅಂಡಮಾನ್ ಪ್ರದೇಶದಿಂದ ಸುಮಾರು 300 ಪ್ರತಿನಿಧಿಗಳು ಚಿಕ್ಕಮಗಳೂರಿಗೆ ಬರುತ್ತಿದ್ದಾರೆ. ಎಐಪಿಡಬ್ಲ್ಯೂಎಫ್ ಸ್ಥಾಪನಾ ಸಮ್ಮೇಳನದಿಂದ ನಿರಂತರವಾಗಿ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ, ಅಧ್ಯಕ್ಷರಾಗಿ ಸದಾ ತೋಟ ಕಾರ್ಮಿಕರ ಹಿತಚಿಂತನೆ ಮಾಡುತ್ತಿದ್ದ ವಿಮಲ ರಣದಿವೆ ಈ ಮಧ್ಯೆ ನಿಧನರಾಗಿದ್ದಾರೆ. ತ್ರಿಪುರಾದ ಆರೋಗ್ಯ ಮಂತ್ರಿಗಳು, ಒಕ್ಕೂಟದ ಉಪಾಧ್ಯಕ್ಷರೂ ಆಗಿದ್ದ ಬಿಮಲ್ ಸಿನ್ಹ, ಸ್ಥಾಪನಾ ಸಭೆಯಿಂದ ಕಾರ್ಯಕಾರಿ ಸಮಿತಿ ಸದಸ್ಯರೂ ಖಜಾಂಚಿಗಳು ಆಗಿದ್ದ ನಮ್ಮ ರಾಜ್ಯದ ಮುಖಂಡ ಸಿ.ನಂಜುಂಡಪ್ಪನವರು ಈ ಮಧ್ಯೆ ನಿಧನರಾಗಿದ್ದಾರೆ. ಅವರ ಸ್ಥಾನಗಳನ್ನು ಸಮ್ಮೇಳನ ಭರ್ತಿ ಮಾಡಬೇಕಿದೆ.

ಈಗಾಗಲೇ ಸಮ್ಮೇಳನದ ಸಿದ್ಧತೆಗಾಗಿ 100 ಸದಸ್ಯರುಗಳ ಸ್ವಾಗತ ಸಮಿತಿ ರಚನೆ ಮಾಡಲಾಗಿದೆ. ಹಿರಿಯ ಸ್ವಾತಂತ್ರ್ಯ



ಹೋರಾಟಗಾರರು ನಿಷ್ಠಾವಂತ ಹಿರಿಯ ಕಾರ್ಮಿಕ ಮುಖಂಡರೂ ಆದ ಕೊಡಗಿನ ಡಾ.ಐ.ಆರ್.ಅಸ್ರಣ್ಣ ಅಧ್ಯಕ್ಷರಾಗಿಯೂ(ಮೊನ್ನೆ ನಿಧನರಾದರು), ಹಿರಿಯ ನ್ಯಾಯವಾದಿಗಳಾದ ಹಿಂದಿನಿಂದ ತೋಟ ಕಾರ್ಮಿಕರೊಡನೆ ಗುರುತಿಸಿಕೊಂಡಿದ್ದ ಬಿ.ಎಸ್.ಹಾಲಪ್ಪನವರು ಗೌರವಾಧ್ಯಕ್ಷರಾಗಿಯೂ, ಕೊಡಗಿನ ಕಾರ್ಮಿಕ ಮುಖಂಡರೂ ಜಿಲ್ಲಾ ಪಂಚಾಯಿತಿ ಸದಸ್ಯರೂ ಆಗಿರುವ ಹೆಚ್.ಎಂ.ಕಾಳಯ್ಯ ಕಾರ್ಯಾಧ್ಯಕ್ಷರಾಗಿಯೂ ವಿ.ಸುಕುಮಾರ್ ಪ್ರಧಾನ ಕಾರ್ಯದರ್ಶಿಯಾಗಿಯೂ ಇನ್ನು ಸಹೋದರ ಸಂಘಟನೆಗಳ ಹಲವು ಸಂಗಾತಿಗಳು ಸಿಐಟಿಯು ರಾಜ್ಯ ಪದಾಧಿಕಾರಿಗಳನ್ನೊಳಗೊಂಡು ಹಲವರು ಉಪಾಧ್ಯಕ್ಷರುಗಳಾಗಿಯೂ, ಜಂಟಿ ಕಾರ್ಯದರ್ಶಿಗಳಾಗಿಯೂ, ಎಂ. ರಾಘುಶೆಟ್ಟಿ ಖಜಾಂಚಿಯಾಗಿಯೂ ಸ್ವಾಗತ ಸಮಿತಿಯಲ್ಲಿರುತ್ತಾರೆ.

ಸಮ್ಮೇಳನ ಡಿಸೆಂಬರ್ 26 ರಿಂದ28 ರವರೆಗೆ ನಡೆಯಲಿದೆ. 28 ರ ಮಧ್ಯಾಹ್ನ ಕಾರ್ಮಿಕರ ಮೆರವಣಿಗೆ 1 ಗಂಟೆಗೆ ಬೋಳು ರಾಮೇಶ್ವರ ದೇವಾಸ್ಥಾನದ ಸಮೀಪದಿಂದ ಪ್ರಾರಂಭವಾಗಿ ಆಜಾದ್ ಪಾರ್ಕ್‌ನಲ್ಲಿ ಮುಕ್ತಾಯವಾಗುತ್ತದೆ. ಬಹಿರಂಗ ಸಭೆಯಲ್ಲಿ ಡಾ.ಎಂ.ಕೆ.ಪಂಧೆ, ಸಿಐಟಿಯು ಪ್ರಧಾನ ಕಾರ್ಯದರ್ಶಿ, ಪಿ.ಲಾಲಾಜಿ ಬಾಬು, ಎಐಪಿಡಬ್ಲ್ಯೂಎಫ್, ಪ್ರಧಾನ ಕಾರ್ಯದರ್ಶಿ, ಜೆ.ಹೇಮಚಂದ್ರ, ಎಂ.ಎಲ್.ಎ., ತಮಿಳುನಾಡು, ವಿ.ಜೆ.ಕೆ.ನಾಯರ್, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ, ಸಿಪಿಎಂ ನಾಯಕ ಕೆ.ಆರ್.ಶ್ರೀಯಾನ್, ಡಾ. ಹೇಮಲತಾ ಬಹಿರಂಗ ಸಭೆಯಲ್ಲಿ ಭಾಷಣ ಮಾಡಲಿದ್ದಾರೆ.

ಪ್ರಚಾರ ಜಾಥ, ಕಲಾ ಜಾಥ, 3 ಜಿಲ್ಲೆಗಳಲ್ಲೂ ಸಮ್ಮೇಳನದ ಮಹತ್ವದ ಬಗ್ಗೆ ಪ್ರಚಾರ ಮಾಡಲಾಗಿದೆ.

ನವೆಂಬರ್ 1 ರಿಂದ ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಯ ಹಲವು ತೋಟಗಳಲ್ಲಿ ಧ್ವಜಾರೋಹಣ, ಬ್ಯಾನರ್‌ಗಳನ್ನು ಹಾಕುವ ಮೂಲಕ ಪ್ರಚಾರಾಂದೋಲನ ನಡೆಸಲಾಗಿದೆ.

ಪ್ರಧಾನಿ ವಾಜಪೇಯಿಯವರ ಘೋಷಣೆಯಿಂದ ಕೊಡಗಿನ ಬೆಳೆಗಾರರಿಗೆ ಲಾಭವೇನೂ ಇಲ್ಲ

ಈ ವರ್ಷ ಬರ ಪೀಡಿತ ಪ್ರದೇಶಗಳ ರೈತರಿಂದ ಬಡ್ಡಿ ಸೇರಿದಂತೆ ಕೃಷಿ ಸಾಲ ವಸೂಲಿ ಮಾಡದಿರಲು ಕೇಂದ್ರ ಸರಕಾರ ತೀರ್ಮಾನಿಸಿರುವುದಾಗಿ ಇದೇ ನವಂಬರ್ 13 ರಂದು ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರು ಘೋಷಿಸಿದ್ದಾರೆ.

ಕೊಡಗು ಬರ ಪೀಡಿತ ಪ್ರದೇಶವೆಂದು ಘೋಷಿಸಲ್ಪಟ್ಟಿಲ್ಲವಾದ್ದರಿಂದ ಈ ಘೋಷಣೆಯಿಂದ ಇಲ್ಲಿನ ರೈತರಿಗೆ ಏನೇನೂ ಉಪಯೋಗವಿಲ್ಲ.

ಬರ ಪೀಡಿತ ಪ್ರದೇಶಗಳಿಗಷ್ಟೇ ಸೀಮಿತವಾಗಿ ಪ್ರಧಾನಿಯವರು ಘೋಷಿಸಿರುವ ಈ ಘೋಷಣೆ ಉತ್ತರ ಭಾರತದ ರಾಜ್ಯಗಳ ಮುಖ್ಯವಾಗಿ ರಾಜಾಸ್ಥಾನ, ಮಧ್ಯ ಪ್ರದೇಶ, ಗುಜರಾತ್, ಒರಿಸ್ಸ-ಮೇಲೆ ಕಣ್ಣಿಟ್ಟು ಘೋಷಿಸಿರುವುದಾಗಿದೆ.

ಈ ಡಿಸೆಂಬರ ತಿಂಗಳಲ್ಲಿ ಗುಜರಾತಿನಲ್ಲೂ ಮುಂದಿನ ವರ್ಷ ಹತ್ತು ರಾಜ್ಯಗಳಲ್ಲೂ ಬರಲಿರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮುಂಬೈಯಲ್ಲಿ ಸೇರಿದ್ದ ಭಾ.ಜ.ಪ. ಸಭೆಯಲ್ಲಿ ತೀರ್ಮಾನಿಸಿದ್ದ ಆಧಾರದಲ್ಲಿ ಈ ಘೋಷಣೆ ಬಂದಿದೆ. ಉತ್ತರದ ರಾಜ್ಯಗಳಲ್ಲಿ ರೈತರು ಕೇಂದ್ರ ಮಂತ್ರಿಗಳನ್ನು ತೀಕ್ಷ್ಣವಾಗಿ ವಿಮರ್ಶಿಸಿದ ನಂತರ ಈ ರೈತರನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳಲು ವಾಜಪೇಯಿ ಈ ಕಸರತ್ತು ನಡೆಸಿದ್ದಾರೆ. ಸಾಲ ಮತ್ತು ಬಡ್ಡಿ ಮನ್ನಾ ಕೇವಲ ಮುಂದಿನ ನಾಲ್ಕು ತಿಂಗಳುಗಳಿಗೆ ಸೀಮಿತವಾಗಿದ್ದು ಬರಪೀಡಿತ ಪ್ರದೇಶಗಳ ರೈತರಿಗೂ ಇದು ಹೆಚ್ಚು ಸಹಾಯಕವಾಗಲಾರದು.

ತೋಟಗಾರಿಕೆ ಬೆಳೆಗಾರರ ಸಹಾಯಕ್ಕಾಗಿ 500 ಕೋಟಿ ರೂ.ಗಳ ಮೂಲಧನ ಸ್ಥಾಪಿಸುವುದಾಗಿ ವಾಜಪೇಯಿ ಹೇಳಿದ್ದಾರೆ. ಕೇಂದ್ರ ಸರಕಾರದೊಂದಿಗೆ ರಾಜ್ಯ ಸರಕಾರ ಮತ್ತು ಬೆಳೆಗಾರರೂ ಇದಕ್ಕೆ ಹಣ ಹಾಕಬೇಕಾಗಿದೆ. "ಈ ಯೋಜನೆಯ ನಿಯಮಾವಳಿಗಳನ್ನು ಶೀಘ್ರದಲ್ಲಿಯೇ ರೂಪಿಸಲಾಗುವುದು." ಎಂದಷ್ಟೇ ಪ್ರಧಾನಿ ಹೇಳಿದ್ದಾರೆ.

ಇಡೀ ದೇಶಕ್ಕೆ ಇದು ಅನ್ವಯವಾಗುತ್ತಿದ್ದು ತೋಟ ಬೆಳೆಗಳಾದ ಕಾಫಿ, ರಬ್ಬರ್, ಚಹಾ ಮತ್ತು ಹೊಗೆಸೊಪ್ಪು ಈ ಯೋಜನೆಗೆ ಒಳಪಡುತ್ತವೆ. ಆದ್ದರಿಂದ ಈ ಯೋಜನೆಗೆ ಮೀಸಲಾಗುತ್ತಿರುವ ಹಣ "ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆ" ಎಂಬಂತಾಗಿ 'ಕೇಂದ್ರ ಸರಕಾರ ಬೆಳೆಗಾರರಿಗಾಗಿ ಏನೋ ಮಾಡುತ್ತಿದೆ' ಎಂದು ಬೆಳೆಗಾರರನ್ನು ಭ್ರಮೆಯಲ್ಲಿಡಲು ಇದರಿಂದ ಸಾಧ್ಯವಾಗಬಹುದಲ್ಲದೆ ಬೆಳೆಗಾರರ ಸಮಸ್ಯೆ ಬಗೆಹರಿಯದು.

"ಕಾಫಿ ಬೆಳೆಗಾರರಿಗೆ ಒದಗಿಸಿದ ಸಾಲ ಮತ್ತು ಅದರ ಬಡ್ಡಿಯನ್ನು 11 ವರ್ಷಗಳ ಅವಧಿಯಲ್ಲಿ ಮರು ಪಾವತಿಸಬಹುದಾಗಿದೆ." ಎಂದೂ ಪ್ರಧಾನಿ ಸಾರಿದ್ದಾರೆ.

ಸಾಲದ ಮರು ಪಾವತಿಯ ಅವಧಿಯನ್ನು 11 ವರ್ಷಕ್ಕೆ ವಿಸ್ತರಿಸುವುದರಿಂದಷ್ಟೇ ಬೆಳೆಗಾರನಿಗೆ ಯಾವ ಪ್ರಯೋಜನವೂ ಇಲ್ಲ. ಅದು ಬೆಳೆಗಾರನ ಹೊರೆಯನ್ನು ಹೆಚ್ಚಿಸುವುದು. ಅವನನ್ನು ಇನ್ನಷ್ಟು ಅಧೋಗತಿಗೆ ಒಯ್ಯುವುದು.

ಒಂದೆಡೆ ಗೊಬ್ಬರದ ಬೆಲೆ, ರೈತರ

ಪುಟ 10 ಕ್ಕೆ

ಒಂದು ಲಕ್ಷ ಕೋಟಿ ರೂ ಕೆಟ್ಟಸಾಲಗಳನ್ನು ವಸೂಲು ಮಾಡಲಬೇಕೆಂದು ಬ್ಯಾಂಕ್ ನೌಕರರ ಸಂಘಗಳು ಹೋರಾಟ ಆರಂಭಿಸಿದ ಬಳಿಕ ಸರ್ಕಾರ ಅವುಗಳ ವಸೂಲಿಗ ಸುಗ್ರೀವಾಜ್ಞೆ ಹೊರಡಿಸಿದೆ. ಆಸ್ತಿ ಪುನರ್ ರಚನಾ ಕಂಪನಿಗಳನ್ನು ಸ್ಥಾಪಿಸುವ ನಿರ್ಧಾರ ಪ್ರಕಟಿಸಿದೆ. ಖಾಸಗಿಯವರೂ ಇಂಹ ಕಂಪನಿಗಳನ್ನು ಸ್ಥಾಪಿಸಬಹುದಾಗಿದ್ದು, ನಿಜ ಉದ್ದೇಶವೇನು? ಇದರ ಹುಳುಕು ಎತ್ತಿ ತೋರಿಸುವ ಲೇಖನವಿಲ್ಲಿ

ಸಾಲ ವಸೂಲಿಗಾಗಿ 'ಆಸ್ತಿ ಪುನರ್‍ರಚನಾ ಸಂಸ್ಥೆಗಳು' ಯಾರ ಹಿತಕ್ಕಾಗಿ?

'ಕೆಟ್ಟ ಸಾಲ' (non perofrming asset") ಗಳನ್ನು ತ್ವರಿತವಾಗಿ ವಸೂಲಿ ಮಾಡಬೇಕೆಂದು ಬ್ಯಾಂಕ್ ನೌಕರರ ಸಂಘಟನೆಗಳು, ಎಡಪಕ್ಷಗಳು, ನಾಗರೀಕ ಸಂಸ್ಥೆಗಳು ಬಹಳ ಕಾಲದಿಂದಲೇ ಒತ್ತಾಯಿಸುತ್ತಿದ್ದರು. ಆದರೆ ಸರಕಾರ ಇದುವರೆಗೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಇದೀಗ ಜೂನ್ 21ರಂದು ಸುಗ್ರೀವಾಜ್ಞೆ ಹೊರಡಿಸಿದ ಕೇಂದ್ರ ಸರಕಾರ, ಜುಲೈ 20ರಂದು ಲೋಕಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಿತ್ತು. ಮುಂಗಾರು ಅಧಿವೇಶನದಲ್ಲಿ ಚರ್ಚಿಸಲು ಸಾಧ್ಯವಾಗದೆ ಆಗಸ್ಟ್ ನಲ್ಲಿ ಪುನಃ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ. ಈ ಮಸೂದೆ ಪ್ರಕಾರ ಸರಕಾರಿ ಮತ್ತು ಖಾಸಗಿ ಬ್ಯಾಂಕುಗಳಲ್ಲಿನ ಕೆಟ್ಟ ಸಾಲಗಳನ್ನು ವಸೂಲಿಮಾಡಲು, ಆ ಸಾಲಗಳನ್ನು ಪಡೆಯಲು ಅಡವಿಟ್ಟಿರುವ ಆಸ್ತಿಗಳನ್ನು ಮಾರಾಟ ಮಾಡಿ ಸಾಲಗಳಿಗೆ ವಜಾ ಮಾಡುವ ಅಧಿಕಾರವನ್ನು ಬ್ಯಾಂಕುಗಳು ಹೊಂದಿದೆ.

ಮೇಲುನೋಟಕ್ಕೆ ಇದನ್ನು ಸ್ವಾಗತಾರ್ಹವಾದ ಕ್ರಮ ಎನ್ನಬಹುದಾದರೂ ಅದರ ಹಿಂದಿರುವ ಹುಳುಕುಗಳು ಹಲವು. ಈವರೆಗೆ ನಿದ್ರಿಸುತ್ತಿದ್ದ ಕೇಂದ್ರ ಸರಕಾರಕ್ಕೆ ಅಷ್ಟು ಬೇಗನೆ ಎಚ್ಚರವಾಯಿತೇ ಎಂದು ಆಶ್ಚರ್ಯಪಡುವಂತಹದ್ದು. ಮೇಲೆ ಹೇಳಿದ ಮಸೂದೆ ಪ್ರಕಾರ, ಸಾಲ ವಸೂಲಿ ಮಾಡಲು ಆಸ್ತಿ ಪುನರ್‍ರಚನಾ ಕಂಪನಿ (asset reconstruction companies) ಗಳನ್ನು ಸ್ಥಾಪಿಸಲಾಗುವುದು. ಆದರೆ ಈ ಕಂಪನಿಗಳನ್ನು ಖಾಸಗಿಯವರು ಕೂಡಾ ಸ್ಥಾಪನೆ ಮಾಡಬಹುದು. ಕೆಟ್ಟ ಸಾಲ'ಗಳನ್ನು ಹೆಚ್ಚಾಗಿ ಬಾಕಿ ಉಳಿಸಿಕೊಂಡವರು ಖಾಸಗಿ ಮಾಲಿಕರು. ಅಂತಹ ಮಾಲಿಕರೇ ಸೇರಿ, ಅಥವಾ ಅವರಿಗೆ ವಿಶ್ವಾಸ ಹೊಂದಿರುವ ವ್ಯಕ್ತಿಗಳು/ಕಂಪನಿಗಳನ್ನು ಸೇರಿಸಿ 'ಆಸ್ತಿ ಪುನರ್‍ರಚನಾ ಸಂಸ್ಥೆ' ಗಳನ್ನು ಸ್ಥಾಪಿಸಬಹುದು. ಆ ಮೂಲಕ ತಮ್ಮವರಿಗೆ ಸೇರಿದ ಆಸ್ತಿಗಳನ್ನು ಕಡಿಮೆ ಬೆಲೆಗೆ ತಾವೇ ಖರೀದಿಸಿ ಬ್ಯಾಂಕ್ ಸಾಲದಿಂದ ಮುಕ್ತರಾಗಬಹುದು.

ಉದಾಹರಣೆಗೆ, ಹೆಸರಾಂತ ಅಬಕಾರಿ ಉದ್ಯಮಿ, ರಾಜ್ಯಸಭಾ ಸದಸ್ಯ ವಿಜಯಮಲ್ಯಾ ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ ಕಂಪನಿ ವಿವಿಧ ಬ್ಯಾಂಕುಗಳಿಗೆ 12.27 ಕೋಟಿ ರೂ. ನೀಡಬೇಕಾಗಿದೆ. ಆ ಸಾಲವನ್ನು ಪಡೆಯುವಾಗ MCF ಆಸ್ತಿಯನ್ನು ಅಡವಿಟ್ಟಿದ್ದರು ಎಂದಿಟ್ಟುಕೊಳ್ಳೋಣ. ಕೇಂದ್ರ ಸರಕಾರವು ಮಂಡಿಸಿದ ಮಸೂದೆ ಪ್ರಕಾರ ವಿಜಯಮಲ್ಯಾ ಗುಂಪಿಗೆ ಸೇರಿದ ಆತ್ಮೀಯರು ಆಸ್ತಿ ಪುನರ್‍ರಚನಾ ಸಂಸ್ಥೆ (ARC)ಯನ್ನು ಸ್ಥಾಪಿಸಿ MCF ನ್ನು ಕಡಿಮೆ ಬೆಲೆಗೆ ಖರೀದಿಸಿ ಬ್ಯಾಂಕುಗಳ ಸಾಲದಿಂದ ಮುಕ್ತವಾಗಬಹುದು. ಹಾಗೆಯೇ ತಮ್ಮ ಆಸ್ತಿಯನ್ನು ಇನ್ನಾವುದೋ ಹೆಸರಿನಲ್ಲಿ ಉಳಿಸಿಕೊಳ್ಳ ಬಹುದು. ಇದರಿಂದಾಗುವ ಏಕೈಕ ಲಾಭವೆಂದರೆ, ಬ್ಯಾಂಕಿಗೆ ಸ್ವಲ್ಪವಾದರೂ ಹಣ ಬರುತ್ತದೆ. ಮತ್ತು ಬ್ಯಾಲೆನ್ಸ್ ಶೀಟ್‌ಗಳಲ್ಲಿ ಕೆಟ್ಟ ಸಾಲದ ಮೊತ್ತ ಕಡಿಮೆ ಆಗುತ್ತದೆ.

ಖಾಸಗೀಕರಣಕ್ಕೆ ಅನುಕೂಲ: ಕೇಂದ್ರ ಸರಕಾರವು ಅನುಸರಿಸುತ್ತಿರುವ ಕ್ರಮಗಳಿಂದ ಬ್ಯಾಂಕುಗಳ ಖಾಸಗೀಕರಣಕ್ಕೆ ಅನುಕೂಲವಾಗಲಿದೆ. ಸಾವಿರಾರು ಕೋಟಿ ರೂ. ಕೆಟ್ಟ ಸಾಲ ಗಳಿರುವ ಬ್ಯಾಂಕುಗಳನ್ನು ಖರೀದಿ ಮಾಡಲು ವಿದೇಶಿ ಕಂಪನಿಗಳು ಏಕಸ್ವಾಮ್ಯಾಧಿ ತಲೆಗಳು ಹಿಂದೆ ಮುಂದೆ ನೋಡುತ್ತಾರೆ. ಈಗಾಗಲೇ ಕೇಂದ್ರ ಸರಕಾರವು ತನ್ನ ಹಿಡಿತದಲ್ಲಿರುವ ಬಂಡವಾಳವನ್ನು ಶೇ 33ಕ್ಕೆ ಇಳಿಸಬೇಕೆಂದು ಹವಣಿಸುತ್ತಿದೆ. ಆದ್ದರಿಂದ ಬ್ಯಾಂಕುಗಳ ಶೇರುಗಳನ್ನು ಹೇರಳವಾಗಿ ಖರೀದಿ ಮಾಡಲಿರುವ ದೊಡ್ಡ 'ತಿಮಿಂಗಲ' (ಬಂಡವಾಳಗಾರರು) ಗಳು ಬ್ಯಾಂಕುಗಳು ಕೆಟ್ಟ ಸಾಲಗಳಿಂದ ಮುಕ್ತಗೊಳ್ಳಬೇಕೆಂದು ಒತ್ತಾಯ ಹೇರುತ್ತಿದ್ದಾರೆ.



ಎಲ್ಲಾ ಸಾಲಗಳಿಗೆ ಆಸ್ತಿ ಅಡವು ಇಲ್ಲ!

ಸಾಮಾನ್ಯವಾಗಿ ಬ್ಯಾಂಕುಗಳಿಂದ ಸಾಲ ಪಡೆಯಬೇಕೆಂದಾದಲ್ಲಿ ಆಸ್ತಿಯನ್ನು ಅಡವು ಇಡಬೇಕು. ಅದು ಚಿನ್ನ, ಭೂಮಿ, ಕಟ್ಟಡ, ಯಂತ್ರೋಪಕರಣ ಇತ್ಯಾದಿ ಯಾವುದೇ ರೂಪದಲ್ಲಿ ಇರಬಹುದು. ಆದರೆ ಆಶ್ಚರ್ಯದ ಸಂಗತಿ ಎಂದರೆ ಸಾಧಾರಣ 1 ಲಕ್ಷ ಕೋಟಿ ರೂಪಾಯಿಗಳಷ್ಟು ಕೆಟ್ಟ ಸಾಲಗಳಿಗೆ ಪ್ರತಿಯಾಗಿ ಅಡವು ಇಟ್ಟಿರುವ ಒಟ್ಟು ಆಸ್ತಿಯ ಮೌಲ್ಯ ಸಾಧಾರಣ 35 ರಿಂದ 40,000 ಕೋಟಿ ರೂ ಮಾತ್ರ. ಆಸ್ತಿ ಪುನರ್‍ರಚನಾ ಸಂಸ್ಥೆ ರಚಿಸಿ, ಸಾಲ ವಸೂಲಿ ಪ್ರಕ್ರಿಯೆ ಆರಂಭವಾಯಿತೆಂದರೂ ಎಲ್ಲಾ ಸಾಲವನ್ನು ವಸೂಲಿ ಮಾಡಲು ಸಾಧ್ಯವಿಲ್ಲ. ಉಳಿದವುಗಳನ್ನು ವಾಪಾಸು ಬಾರದ ಸಾಲವೆಂದು ಪರಿಗಣಿಸಿ, ಬ್ಯಾಂಕುಗಳ ಒಟ್ಟು ಲಾಭದಲ್ಲಿ ಕಳೆಯಬೇಕಾಗುತ್ತದೆ.

ಹಾಗಾದರೆ ಇಷ್ಟೊಂದು ದೊಡ್ಡ ಮೊತ್ತದ ಸಾಲಗಳನ್ನು ಪಡೆಯುವಾಗ ಸೂಕ್ತವಾದ ಆಸ್ತಿಗಳನ್ನು (collateral securities) ಅಡವು ಯಾಕೆ ಇಡಲಿಲ್ಲ ಎಂಬ ಪ್ರಶ್ನೆ ಎದುರಾಗುತ್ತದೆ, ಸಾಮಾನ್ಯವಾಗಿ ಬ್ಯಾಂಕುಗಳಲ್ಲಿ ಕೆಟ್ಟ ಸಾಲ ಇಷ್ಟೊಂದು ದೊಡ್ಡ ಮೊತ್ತಕ್ಕೆ ಹೋಗಲು ಬ್ಯಾಂಕುಗಳ ಉನ್ನತ ಅಧಿಕಾರಿ, ಆಳುವ ರಾಜಕಾರಣಿ ಮತ್ತು ದೊಡ್ಡ ಉದ್ದಿಮೆದಾರರ ದುಷ್ಟಕೂಟವೇ ಕಾರಣ ಎಂಬುದು ಈಗಾಗಲೇ ತಿಳಿದಿರುವ ಅಂಶ. ಸಾಲಗಳನ್ನು ನೀಡುವಾಗ ಖೋಟಾ ದಾಖಲೆಗಳನ್ನು ಸೃಷ್ಟಿಸಿ, ಅಡವಿಟ್ಟ ಆಸ್ತಿಯ ಬೆಲೆಯನ್ನು ದೊಡ್ಡದಾಗಿ ತೋರಿಸುತ್ತಾರೆ. ಅಥವಾ ಒಮ್ಮೆ ಸಾಲ ಪಡೆದ ನಂತರ ಆ ಕಂಪೆನಿಯಲ್ಲಿ ಬರುವ ಲಾಭವನ್ನು ಸಾಲಕ್ಕೆ ವಜಾ ಮಾಡದೆ, ಬೇರೆಡೆಗೆ ವರ್ಗಾಯಿಸುತ್ತಾರೆ. ಆದ್ದರಿಂದಲೇ ಕಂಪೆನಿ ದೀವಾಳಿಯಾದರೂ, ದೀವಾಳಿ ಮಾಡಿದ ಖಾಸಗೀ ಮಾಲಿಕರ ಆಸ್ತಿ ಹೆಚ್ಚಾಗುತ್ತಲೇ ಇರುತ್ತದೆ.

ಈ ಎಲ್ಲಾ ಕಾರಣಗಳಿಂದಾಗಿ, ಕೆಟ್ಟ ಸಾಲಗಳ ಒಟ್ಟು ಮೌಲ್ಯಕ್ಕಿಂತ ಅಡವಿಟ್ಟ ಆಸ್ತಿಗಳ ಮೌಲ್ಯ ತೀವ್ರವಾಗಿ ಕಡಿಮೆಯಾಗುತ್ತದೆ.

ಕೇಂದ್ರ ಸರಕಾರದ ಪೊಳ್ಳು ಘೋಷಣೆ : ಆಸ್ತಿ ಪುನರ್‍ರಚನಾ ಸಂಸ್ಥೆಗಳನ್ನು (ARC) ಖಾಸಗಿಯವರಿಗೆ ವಹಿಸಲು ಕಾರಣಗಳೇನು ಎಂಬ ಪ್ರಶ್ನೆಗೆ, ಖಾಸಗೀಯುವರ ಪರಿಣತಿ ಮತ್ತು ಸಾಲ ವಸೂಲಿಗಳಲ್ಲಿ ಅವರ ಹಿಡಿತವೇ ಇದಕ್ಕೆ ಕಾರಣ ಎಂದು ಹೇಳುತ್ತಾರೆ. ಆದರೆ ರಿಜರ್ವ್ ಬ್ಯಾಂಕ್ ಪ್ರಕಟಿಸಿದ 'ಕೆಟ್ಟಸಾಲ'ದ ಪಟ್ಟಿ ನೋಡಿದರೆ ಮಾರ್ಚ್ 2000 ರಿಂದ ಮಾರ್ಚ್ 31, 2001ರವರೆಗೆ ಸರಕಾರಿಬ್ಯಾಂಕುಗಳ ಕೆಟ್ಟ ಸಾಲವು 1480 ಕೋಟಿರೂ ಹೆಚ್ಚಾಗಿದ್ದರೆ (53, 294 ಕೋಟಿಯಿಂದ 54,774 ಕೋಟಿರೂ) ಖಾಸಗಿ ಬ್ಯಾಂಕುಗಳ (ದೇಶೀಯ ಮತ್ತು ವಿದೇಶಿ ಸೇರಿ) ಕೆಟ್ಟ ಸಾಲವು ಇದೇ ಅವಧಿಯಲ್ಲಿ 1643 ಕೋಟಿರೂ ಜಾಸ್ತಿಯಾಗಿದೆ. (7546 ಕೋಟಿರೂ ನಿಂದ 9189 ಕೋಟಿರೂ) ಶೇಕಡಾವಾರು ಪ್ರಮಾಣ ನೋಡಿದರೆ ಇದು ಇನ್ನಷ್ಟು ದೊಡ್ಡ ಪ್ರಮಾಣದಲ್ಲಿದೆ. (ಕೋಷ್ಟಕ ನೋಡಿ)

ಕೆಟ್ಟ ಸಾಲ (NPA) ಕೋಟಿರೂಗಳಲ್ಲಿ

	ಮಾರ್ಚ್ 31, 2000	ಮಾರ್ಚ 31, 01
ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು	53294	54774
ಖಾಸಗಿ ಬ್ಯಾಂಕುಗಳು	7546	9189
ಹಳೆಯ ಖಾಸಗಿ ಬ್ಯಾಂಕುಗುಳು	3985	4484
ಹೊಸ ಖಾಸಗಿ ಬ್ಯಾಂಕುಗಳು	946	1594
ವಿದೇಶಿ ಬ್ಯಾಂಕುಗಳು	2615	3111
ಇತರೆ ಹಣಕಾಸು ಸಂಸ್ಥೆಗಳ	18146	16611

ಮೇಲಿನ ಕೋಷ್ಟಕ ಗಮನಿಸಿದರೆ ಹೆಚ್ಚು 'ಪರಿಣತ' ತಜ್ಞರನ್ನು ಹೊಂದಿರುವ ಹೊಸ ಖಾಸಗಿ ಬ್ಯಾಂಕುಗ್ಗಳು ಇತ್ತೀಚಿಗಷ್ಟೇ ಆರಂಭವಾಗಿದ್ದರೂ ಅವುಗಳಲ್ಲಿ ಕೆಟ್ಟ ಸಾಲಗಳ ಮೊತ್ತ ಶೇಕಡಾವಾರು ಹೆಚ್ಚಿದೆ.

ಮಸೂದೆಗೆ ಕಾಂಗ್ರೆಸ್ ಬೆಂಬಲ?

ಈಗ ಸುಗ್ರೀವಾಜ್ಞೆಯ ಅಡಿಯಲ್ಲಿ ಜಾರಿಯಲ್ಲಿರುವ, ಚಳಿಗಾಲದಲ್ಲಿ ಸಂಸತ್ತಿನಲ್ಲಿ ಮಂಡಿಸಬಹುದು ಎಂದು ಭಾವಿಸಲಾಗಿರುವ, ಈ ಮಸೂದೆಗೆ ಕಾಂಗ್ರೆಸ್ ಪಕ್ಷದ ಬೆಂಬಲ ಗಳಿಸುವ ಪ್ರಯತ್ನ ಸಾಗುತ್ತಿದೆ. ಮುಂಬೈ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮುರಳಿ ಎಸ್.ದಿಯಾರಾ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರಿಗೆ ಪತ್ರ ಬರೆದಿದ್ದು ಈ ಮಸೂದೆಗೆ ಬೆಂಬಲ ನೀಡಬೇಕೆಂದು ಒತ್ತಾಯಿಸಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿರುವ ದೊಡ್ಡ ಬಂಡವಾಳಗಾರರ ಪ್ರತಿನಿಧಿಗಳು ಅವರ ಪ್ರಯತ್ನದಲ್ಲಿ ಯಶಸ್ವಿಯಾಗುವರೇ ಎಂದು ಕಾದುನೋಡಬೇಕಾಗಿದೆ.

ಈಗಿರುವ ಸುಗ್ರೀವಾಜ್ಞೆಯಲ್ಲಿ ಹಲವಾರು ದೋಷಗಳಿರುವುದರಿಂದ ಅದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಎಡಪಕ್ಷಗಳು ಹೇಳಿವೆ.

ಆಳುವ ಬಂಡವಾಳಶಾಹಿಯು ಯಾವುದೇ ಸುಧಾರಣೆ ತಂದರೂ ಆ ವರ್ಗಕ್ಕೆ ಸಹಕಾರಿಯಾಗುತ್ತದೆಯೇ ಹೊರತು ಜನ ಸಾಮಾನ್ಯರಿಗಲ್ಲ. ಆದ್ದರಿಂದ ಈ ಶಕ್ತಿಗಳ ವಿರುದ್ಧ ಜನ ಸಾಮಾನ್ಯರನ್ನು ಸಂಘಟಿಸಿ ಹೋರಾಡುವುದು ಹಾಗೂ ಆ ಮೂಲಕ ಬದಲಾವಣೆ ತರುವುದೊಂದೆ ಉಳಿದಿರುವ ದಾರಿ.

\- ಬಾಲಕೃಷ್ಣ ಶೆಟ್ಟಿ

ಖಾಸಗೀಕರಣದ ವಿರುದ್ಧ ಕೆನರಾ ಬ್ಯಾಂಕ್ ನೌಕರರ ಮುಷ್ಕರ

ಖಾಸಗೀಕರಣ/ಉದಾರೀಕರಣದ ನೀತಿಗಳ ಫಲವಾಗಿ ಸಾರ್ವಜನಿಕ ಕ್ಷೇತ್ರದ ಉದ್ಯಮಗಳನ್ನು ಖಾಸಗೀ ತಿಮಿಂಗಿಲಗಳ ಬಾಯಿಗೆ ಹಾಕುವ ಪ್ರಕ್ರಿಯೆ ಅವ್ಯಾಹತವಾಗಿ ನಡೆದಿದೆ. ಹಲವಾರು ಲಾಭದಾಯಕ ಉದ್ಯಮಗಳನ್ನು ಈಗಾಗಲೇ ಖಾಸಗಿಯವರಿಗೆ ಚಿಕ್ಕಾಸಿಗೆ ಮಾರಲಾಗಿದೆ. ಒಂದೇ ಒಂದು ಉದಾಹರಣೆ ಇಲ್ಲಿ ಪ್ರಸ್ತುತ. ಸಾರ್ವಜನಿಕ ವಲಯದ ಹೋಟೆಲ್ ಕಾರ್ಪೋರೇಷನ್ ಆಫ್ ಇಂಡಿಯಾದ ಒಡೆತನದಲ್ಲಿದ್ದ ಮುಂಬಯಿಯ ಸೆಂಟೋರ್ (Centaur) ಹೋಟೆಲನ್ನು ಇದೇ ಜೂನ್ ತಿಂಗಳಲ್ಲಿ ಬಾತ್ರಾ ಹಾಸ್ಪಿಟಾಲಿಟಿ ಪ್ರೈವೇಟ್ ಲಿಮಿಟೆಡ್ ಎಂಬ ಖಾಸಗಿ ಸಂಸ್ಥೆಗೆ ರೂ.83 ಕೋಟಿಗೆ ಮಾರಲಾಗಿತ್ತು. ಅದಾದ ಸುಮಾರು ನಾಲ್ಕು ತಿಂಗಳಲ್ಲೇ ಅಂದರೆ ಅಕ್ಟೋಬರ್ ತಿಂಗಳಲ್ಲಿ ಆ ಸಂಸ್ಥೆ ಅದೇ ಹೋಟೆಲನ್ನು ಸಹಾರಾ ಇಂಡಿಯಾ ಸಮೂಹಕ್ಕೆ ಸುಮಾರು 115 ಕೋಟಿ ರೂಪಾಯಿಗಳಿಗೆ ಮಾರಿತು. ಅಂದರೆ ಸುಮಾರು 32 ಕೋಟಿ ರೂ ಲಾಭ(!) ಅದೂ ಕೇವಲ ನಾಲ್ಕು ತಿಂಗಳಲ್ಲಿ! ಅಪಾರ ಚರಸ್ಥಿರ ಆಸ್ತಿ ಹೊಂದಿದ್ದ ಮಾಡರ್ನ್ ಬೇಕರಿ ಸಮೂಹವನ್ನು ಬಹುರಾಷ್ಟ್ರೀಯ ಹಿಂದೂಸ್ತಾನ್ ಲಿವರ್ ಕಂಪನಿಗೆ ಮತ್ತು ಬಾಲ್ಕೋವನ್ನು ಸ್ಟರ್ಲೈಟ್ ಉದ್ಯಮದ ಮಾಲೀಕರಿಗೆ ನಿಕೃಷ್ಟ ಬೆಲೆಗೆ ಮಾರಿದ್ದು ಈಗ ಸರ್ವ ವೇದ್ಯ.

ಸಾರ್ವಜನಿಕ ಆಸ್ತಿಗಳನ್ನು ಖಾಸಗಿ ವಲಯಕ್ಕೆ ಪರಭಾರೆ ಮಾಡುವ ಪ್ರಕ್ರಿಯೆ ಎಲ್ಲಾ ಕ್ಷೇತ್ರಗಳಿಗೂ ವ್ಯಾಪಿಸಿದೆ. ಬ್ಯಾಂಕಿಂಗ್ ಕ್ಷೇತ್ರಕ್ಕೂ ತಟ್ಟಿದೆ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ, ಕಾರ್ಪೋರೇಷನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಅಲಹಾಬಾದ್ ಬ್ಯಾಂಕ್ ಇತ್ಯಾದಿ ಹತ್ತು ಹಲವು ಬ್ಯಾಂಕುಗಳ ಷೇರುಗಳ ಸಾರ್ವಜನಿಕ ಬಿಕರಿ ಮಾಡಲಾಗಿದೆ. ಇದೀಗ ಕೆನರಾ ಬ್ಯಾಂಕ್ ಸರದಿ. ನವೆಂಬರ್ ತಿಂಗಳ 18 ರಿಂದ 27ರವರೆಗೆ ಹತ್ತು ರೂಪಾಯಿ ಮುಖ ಬೆಲೆಯ 11 ಕೋಟಿ ಷೇರುಗಳನ್ನು ತಲಾ ಮುವತ್ತೈದು ರೂಪಾಯಿಯಂತೆ ಮಾರಿ ಸುಮಾರು 385 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಯೋಜನೆ ಈಗಾಗಲೇ ಕಾರ್ಯಗತವಾಗಿದೆ. ಕೇಂದ್ರ ಸರ್ಕಾರಕ್ಕೆ 279 ಕೋಟಿ ರೂಗಳ ಶೇರು ಬಂಡವಾಳವನ್ನು ಮರು ಪಾವತಿ ಮಾಡಿ, ಮಾರುಕಟ್ಟೆಯಿಂದ 385 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಈ ಕ್ರಮದಿಂದಾಗಿ ಬ್ಯಾಂಕಿನ ಬಂಡವಾಳದಲ್ಲಿ ಗಮನಾರ್ಹ ವೃದ್ಧಿಯೇನೂ ಆಗುವುದಿಲ್ಲ ಎಂಬುದು ನಿಚ್ಚಳ. ಆದರೆ ಹೇಗಾದರೂ ಮಾಡಿ ಖಾಸಗೀ ತೆಕ್ಕೆಗೆ ಸಾರ್ವಜನಿಕ ಆಸ್ತಿಗಳನ್ನು ತಳ್ಳುವ ತರಾತುರಿಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಬ್ಯಾಂಕ್ ನೌಕರರ ಮತ್ತು ಅಧಿಕಾರಿಗಳ ಸಂಘಟನೆಗಳು ಐಕ್ಯ ವೇದಿಕೆ (ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಎಂಪ್ಲಾಯೀಸ್) ಯೊಂದನ್ನು ರಚಿಸಿಕೊಂಡಿದ್ದು, ಖಾಸಗೀಕರಣದ ವಿರುದ್ಧವೂ ಸೇರಿದಂತೆ ಹತ್ತು ಹಲವು ಸಮಸ್ಯೆಗಳನ್ನು ಎತ್ತಿಕೊಂಡು ರಾಷ್ಟ್ರವ್ಯಾಪಿ ಮುಷ್ಕರಗಳನ್ನು ಹಲವ

ಗುಜರಾತ್ ಚುನಾವಣೆ: ಮಾರಣಹೋಮದ ನಾಡಿನಲ್ಲಿ..

ಫ್ಯಾಸಿಸ್ಟ್ ಮತೀಯವಾದಿಗಳ ಬರ್ಬರ ಮಾರಣ ಹೋಮದಿಂದ ತಲ್ಲಣಿಸಿದ ಗುಜರಾತ್‌ನಲ್ಲೀಗ ಚುನಾವಣೆಗಳು ಮುಗಿದಿವೆ. ಫಲಿತಾಂಶಗಳೂ ಮೆಲ್ಲಮೆಲ್ಲನೇ ಪ್ರಕಟವಾಗುತ್ತಿವೆ. ಈ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿ, ನೋಡಿದ ಅನಿಸಿಕೆಗಳನ್ನು ಕಾಮ್ರೇಡ್ ಸೀತಾರಾಂ ಯೆಚೂರಿ ಇಲ್ಲಿ ಹಂಚಿಕೊಂಡಿದ್ದಾರೆ. ಹೊರಬಂದ ಫಲಿತಾಂಶಗಳ ಹಿಂದಿರುವ ಸತ್ಯವನ್ನು ಇದು ಹೇಳುತ್ತದೆ

ಸೀತಾರಾಂ ಯೆಚೂರಿ

ಈ ಸಂಚಿಕೆ ಓದುಗರ ಕೈ ಸೇರುವ ವೇಳೆಗೆ ಗುಜರಾತಿನ ಚುನಾವಣೆಗಳ ಫಲಿತಾಂಶಗಳು ತಿಳಿದಿರುತ್ತವೆ. ಆದರೂ ಅಲ್ಲಿ ಚುನಾವಣಾ ಪ್ರಚಾರದಿಂದ ಮರಳುವ ವೇಳೆಯ ಅನಿಸಿಕೆಗಳನ್ನು, ಅನುಭವಗಳನ್ನು ಬರೆಯುವ ಸಾಹಸ ಮಾಡಬೇಕಾಗುತ್ತದೆ.

ಸುಮಾರಾಗಿ ಈ ವರ್ಷವಿಡೀ ಗುಜರಾತಿನ ಹೆಸರೆತ್ತಿದರೇ ಸಿಟ್ಟು, ಆತಂಕ ಉಂಟಾಗುತ್ತಿದೆ. ನರೇಂದ್ರಮೋದಿ ನೇತೃತ್ವದ ಸರಕಾರದಿಂದಲೇ ಪ್ರಾಯೋಜಕ ಬರ್ಬರ ಮಾರಣಹೋಮ ಅನೇಕ ಗಾಯಗಳನ್ನು ಬಿಟ್ಟು ಹೋಗಿರುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಅಲ್ಲಿಗೆ ಹೋದಾಗಲೇ ಈ ಭಾವನಾತ್ಮಕ ಗಾಯಗಳ ಆಳವನ್ನು ತೀವ್ರತೆಯನ್ನು ಅನುಭವಿಸಲು ಸಾಧ್ಯ. ಇದು ಎರಡು ವಿಭಿನ್ನ ಮಾನಸಿಕತೆಗಳನ್ನು, ಚೌಕಟ್ಟುಗಳನ್ನು ನಿರ್ಮಿಸಿ ಬಿಟ್ಟಿದೆ - ಒಂದು ನರೇಂದ್ರ ಮೋದಿ ಹತ್ಯಾಕಾಂಡವನ್ನು ಬೆಂಬಿಸುವಂತದ್ದು, ಇನ್ನೊಂದು ವಿರೋಧಿಸುವಂತದ್ದು. ಅತ್ಯಂತ ದುಷ್ಟ ಪಾಶವೀ ಕೃತ್ಯಗಳನ್ನು ಸ್ವತಃ ಅನುಭವಿಸಿದವರೂ ಇದರಿಂದ ಹೊರತಾಗಿಲ್ಲ. ಚುನಾವಣೆಗಳ ಫಲಿತಾಂಶ ಏನೇ ಇರಲಿ, ಈ ರಾಜ್ಯದಲ್ಲಿ ಧರ್ಮನಿರಪೇಕ್ಷತೆ ಸೌಹಾರ್ದವನ್ನು ಮತ್ತೆ ತರಲು, ನಿಜ ಹೇಳಬೇಕಾದರೆ ಅದನ್ನು ಮತ್ತೆ ಸೃಷ್ಟಿಸಲು ದೀರ್ಘ ಸಮಯವೇ ಬೇಕು. ಆರ್‌ಎಸ್‌ಎಸ್ ಮತ್ತು ಅದರ ಕಬಂಧ ಬಾಹುಗಳು ಸದ್ಯಕ್ಕೆ ಇಂತಹ ಒಂದು ವಿಷಯುಕ್ತ ವಿಭಜನೆಯನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿರುವುದು ಒಂದು ದುರಂತ.

ಇಂತಹ ಸ್ಥಿತಿಯಲ್ಲಿ ಪ್ರಚಾರ ಸಮಯದಲ್ಲಿ ಬಹುಪಾಲು ಜನಗಳು ತಮ್ಮ ಮನಸ್ಸಿನಲ್ಲೇನಿದೆ ಎಂದು ಹೊರಗೆಡಹಲು ಹಿಂಜರಿದರೆ ಅದನ್ನು ಅರ್ಥಮಾಡಿಕೊಳ್ಳಬಹುದು. ಈ ಅಂಶವೇ ಒಂದರ್ಥದಲ್ಲಿ ಪ್ರೋತ್ಸಾಹ ತುಂಬುವಂತದ್ದು. ಏಕೆಂದರೆ ಆರ್‌ಎಸ್‌ಎಸ್ ಗಲಭೆಕೋರರು ಸೃಷ್ಟಿಸಬಯಸಿದ್ದ ಕೋಮುವಾದಿ ಉನ್ಮಾದ ಅವರು ನಿರೀಕ್ಷಿಸಿದಷ್ಟು ಮಟ್ಟದಲ್ಲಿ ಕಂಡುಬಂದಿಲ್ಲ. ಆಳವಾದ ಕೋಮು ಭಾವೋನ್ಮಾದಗಳು ಪ್ರಬಲವಾಗಿವೆ ಎಂಬುದರಲ್ಲಿ ಸಂದೇಹವಿಲ್ಲ. ಪ್ರಧಾನಮಂತ್ರಿಗಳು ಅವರ ಆಪ್ತರು ಡಂಭಾಚಾರಕ್ಕೆ ಏನೇ ಹೇಳಲಿ, ಬಿಜೆಪಿಯ ಪ್ರಚಾರದಲ್ಲಿ ಇದ್ದದ್ದು

ಒಂದೇ ಪ್ರಶ್ನೆ, ಅದುಕೋಮುವಾದಿ ಪ್ರಶ್ನೆ

ಗುಜರಾತಿನಲ್ಲಿನ ವಾತಾವರಣ 1977 ರಲ್ಲಿ ತುರ್ತುಪರಿಸ್ಥಿತಿಯನ್ನು ಸಡಿಲಿಸಿದ ಕೂಡಲೇ ನಡೆದ




ಚುನಾವಣೆಗಳ ವೇಳೆ ಇದ್ದಂತೆ ಬಿರುಗಾಳಿಯ ಮೊದಲಿನ ಮೌನವನ್ನು ನೆನಪಿಸುವಂತಿತ್ತು. ಆಗ ಜನ ಯಾವುದೇ ಅಭಿಪ್ರಾಯ ತಿಳಿಸಲು ನಿರಾಕರಿಸಿದರು. ಮತ ನೀಡುವವರೆಗೂ ತಮ್ಮ ನಿರ್ಣಯವನ್ನು ತಮ್ಮಲ್ಲೇ ಗೋಪ್ಯವಾಗಿ ಇಟ್ಟುಕೊಂಡರು. ಅವರು ನಿರ್ಣಯವನ್ನು ಬಹಳ ಮೊದಲೇ ಮಾಡಿದ್ದರು. ಗುಜರಾತಿನಲ್ಲೂ ಹಾಗೆ ಕಾಣುತ್ತಿದೆ. ಆದರೆ ಇದು ಎರಡು ರೀತಿಯಲ್ಲೂ ಕೆಲಸ ಮಾಡಬಹುದು - ಜನ ಚುನಾವಣಾ ಪ್ರಯೋಜನಕ್ಕೆ ಕೋಮುವಾದಿ ಭಾವೋನ್ಮಾದವನ್ನು ಬಡಿದೆಬ್ಬಿಸುವ ಆರ್‌ಎಸ್‌ಎಸ್ / ಬಿಜೆಪಿ ಕಾರ್ಯತಂತ್ರಕ್ಕೆ ಬಲಿ ಬಿದ್ದಿರಬಹುದು ಅಥವಾ ಅದನ್ನು ಅನುಮೋದಿಸಲು ನಿರ್ಧರಿಸಿರಬಹುದು ಅಥವಾ ಗುಜರಾತಿನಲ್ಲಿ ನಡೆದದ್ದು ಮಾನವಕುಲದ ಮೇಲೊಂದು ಮಸಿ ಬಳಿವ ಕೃತ್ಯ, ಆದ್ದರಿಂದ ಅದನ್ನು ಚುನಾವಣಾ ಪ್ರಯೋಜನಕ್ಕೆ ಬಳಸಲು ಬಿಜೆಪಿಗೆ ಅವಕಾಶ ನೀಡಬಾರದು ಎಂದು ನಿರ್ಧರಿಸಿರಬಹುದು. ಭಾರತ ಮತ್ತು ಅದರ ಭವಿಷ್ಯದ ದೃಷ್ಟಿಯಿಂದ ಈ ಎರಡನೆಯದ್ದೇ ನಿಜವಾಗಲಿ ಎಂದು ಹಾರೈಸಬಹುದಷ್ಟೇ. ಚುನಾವಣಾ ಫಲಿತಾಂಶಗಳು ಮಾತ್ರ ಇದನ್ನು ಹೇಳಲು ಸಾಧ್ಯ.

ಅಮಾನವೀಯ ಕೋಮು ಧ್ರುವೀಕರಣ ಯತ್ನ

ಜನಗಳಲ್ಲಿನ ಬೃಹತ್ ಅಸಂತೃಪ್ತಿಯನ್ನು ಬೇರೆಡೆ ತಿರುಗಿಸಲು ಆರ್‌ಎಸ್‌ಎಸ್/ ಬಿಜೆಪಿ ಅಮಾನವೀಯ ಕೋಮುವಾದಿ ಧ್ರುವೀಕರಣಕ್ಕೆ ಕೈಹಾಕಿತು. ನಾವು ಮತ್ತೆ-ಮತ್ತೆ ಹೇಳಿರುವಂತೆ, ಅವರು ಇದರಲ್ಲಿ ಯಶಸ್ವಿಯಾದರೆ ಭಾರತದ ಮೋದೀಕರಣವೇ ನಮಗೆ ಕಟ್ಟಿಟ್ಟು ಬುತ್ತಿ. ಅವರು ಸೋತರೆ ಸದ್ಯ ಪಾರಾದೆವು ಎಂದು ಭಾರತ ನಿಟ್ಟುಸಿರು ಬಿಡಲು ಸಾಧ್ಯವಾಗಿ ಜನ ತಮ್ಮ ಬದುಕಿನ ತುರ್ತು ಪ್ರಶ್ನೆಗಳ ಬಗ್ಗೆ ಯೋಚಿಸಲು ಆರಂಭಿಸುತ್ತಾರೆ.

ತಮ್ಮ ಕಾರ್ಯತಂತ್ರ ಯಶಸ್ವಿಯಾಗುವಂತೆ ಮಾಡಲು ಪಣತೊಟ್ಟು ಆರ್‌ಎಸ್‌ಎಸ್/ ಬಿಜೆಪಿ ತಮ್ಮ ಎಲ್ಲಾ ಮುಖಂಡರನ್ನು ಪ್ರಚಾರಕ್ಕಿಳಿಸಿದರು. ಕೈಲಾದ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದಾರೆ. ಬಿಜೆಪಿ ಚುನಾವಣೆಗಳನ್ನು ಗೆದ್ದರೂ, ಅದರ ಸ್ಥಾನಗಳು ಕಮ್ಮಿಯಾದರೆ ಅದು ಕೋಮುವಾದಿ ಕಾರ್ಯತಂತ್ರದ ಸೋಲು ಎಂದು ಕೆಲವರು ವಾದ ಮಾಡುತ್ತಾರೆ. ಆದರೆ ಇಂತಹ ತೀರ್ಮಾನ ಆಗಲೂ ಕೂಡಾ ಸಮರ ತೀವ್ರವಾಗಿರುತ್ತದೆ ಎಂದು ಮೋದಿ ಈಗಾಗಲೇ ನಮಗೆ ಎಚ್ಚರಿಕೆ ನೀಡಿದ್ದಾರೆ.

ಚುನಾವಣಾ ಪ್ರಚಾರ ಅಂತ್ಯಗೊಳ್ಳುವ ಕೆಲವು ಗಂಟೆಗಳ ಮೊದಲು 'ಟೈಮ್ ಇಂಟರನ್ಯಾಶನಲ್' ಪತ್ರಿಕೆಯ ಹೊಸ ಸಂಚಿಕೆ ಪ್ರಕಟವಾಗಿದೆ. ಅಲೆಕ್ಸ್ ಪೆರಿ(ಈ ಹಿಂದೆ ಪ್ರಧಾನ ಮಂತ್ರಿ ವಾಜಪೇಯಿಯವರ ಆರೋಗ್ಯದ ಬಗ್ಗೆ ಲೇಖನ ಬರೆದು ಪ್ರಸಿದ್ಧವಾದ ವ್ಯಕ್ತಿ) ಬರೆದ ಲೇಖನದಲ್ಲಿ ಚುನಾವಣೆಗಳಲ್ಲಿ ಸೋತರೆ ಏನಾಗಬಹುದು ಎಂಬ ಪ್ರಶ್ನೆಗೆ ನರೇಂದ್ರಮೋದಿ ಉತ್ತರ ನೀಡಿದ್ದಾರೆ. ಫ್ಯಾಸಿಸ್ಟ್ ದನಿ ಸೂಚಿಸುವ ಅವರ ಉತ್ತರ ಹೀಗಿತ್ತು - ನಾನು ಸೋತರೆ ಅದರರ್ಥ ಹಿಂದೂಗಳಿಗೆ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ನಂಬಿಕೆ ಹೋಗಿ



ಅವರು ಅಂತರ್ಯುದ್ಧಕ್ಕೆ ಇಳಿಯಬಹುದು! ಇದಕ್ಕಿಂತ ದೊಡ್ಡ ಫ್ಯಾಸಿಸ್ಟ್ ಬೆದರಿಕೆ ಸಾಧ್ಯವೇ?

'ವಿನಾಶ' V/s ವಿಕಾಸ

ಚುನಾವಣಾ ಪ್ರಚಾರದ ವೇಳೆಗೆ ಆರ್ಥಿಕ ಪ್ರಶ್ನೆಗಳ, ಜನಗಳ ಬದುಕಿನ ನೋವುಗಳ ಬಗ್ಗೆ ಚರ್ಚಿಸಿದಾಗ ಜನಗಳಿಂದ ಸ್ಪಷ್ಟ ಸ್ಪಂದನವಿತ್ತು. ಭಾವನಗರದಲ್ಲಿ ಸಿಪಿಐ(ಎಂ)ನ ಪ್ರಚಾರ 'ವಿನಾಶ' ಮತ್ತು 'ವಿಕಾಸ' ದ ಪ್ರಶ್ನೆಯನ್ನು ಮುಂದಿಟ್ಟಿತ್ತು. ಜನ ಇದಕ್ಕೆ ಸ್ಪಂದಿಸಿದರು. ಇದಕ್ಕೆ ಕಳೆದ ನಾಲ್ಕೂವರೆ ವರ್ಷಗಳ, ಆದರಲ್ಲೂ ಕಳೆದ ವರ್ಷ ಮೋದಿಯವರು ಮುಖ್ಯಮಂತ್ರಿ ಯಾದಂದಿನಿಂದ ಬಿಜೆಪಿ ಆಳ್ವಿಕೆ ತಂದ ಆರ್ಥಿಕ ವಿನಾಶವೇ ಕಾರಣ ಎಂಬುದು ಸ್ವಯಂವೇದ್ಯ. ಕೋಮುವಾದಿ ರಕ್ತಪಾತವೊಂದರಿಂದಲೇ 10,000 ಕೋಟಿ ರೂ.ಗಳ ನಷ್ಟವಾಯಿತು ಎಂದುಒಂದು ಅಂದಾಜಿನಿಂದ ತಿಳಿದುಬಂದಿದೆ.

ದೇಶದ ಕೈಗಾರಿಕಾ ಅಭಿವೃದ್ಧಿಯಲ್ಲಿ ಒಂದನೇ ಅಥವಾ ಎರಡನೇ ಸ್ಥಾನದಲ್ಲಿದ್ದ ಗುಜರಾತ್ ಬಿಜೆಪಿ ಆಳ್ವಿಕೆಯಲ್ಲಿ ಎಂಟನೇ ಸ್ಥಾನಕ್ಕೆ ಇಳಿಯಿತು. ಈ ಅವಧಿಯಲ್ಲಿ 440 ದೊಡ್ಡ ಕೈಗಾರಿಕಾ-ಘಟಕಗಳು ಮುಚ್ಚಿಟ್ಟು, ಇದರಿಂದ 38000 ಕೋಟಿ ರೂ. ಗಳಷ್ಟು ಹೂಡಿಕೆ ಇಳಿಯಿತು, ಸುಮಾರು 1.64 ಲಕ್ಷ ಉದ್ಯೋವಕಾಶಗಳು ನಷ್ಟವಾದವು.

ಈ ಅವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ಸಮಗ್ರ ಇಳಿಕೆ ಕಂಡು ಬಂತು. ಎಲ್ಲಾ ಪ್ರಮುಖ ಬೆಳೆಗಳ ಉತ್ಪನ್ನದಲ್ಲಿ ತೀವ್ರ ಇಳಿಕೆ ಕಂಡು ಬಂತು. ದೇಶದ ಭತ್ತ ಉತ್ಪಾದನೆಯಲ್ಲಿ ಗುಜರಾತಿನ ಕೊಡುಗೆ 2.73 ಶೇ. ದಿಂದ 1.3 ಶೇ. ಕ್ಕೆ ಇಳಿಯಿತು.

ಸರಕಾರದ ಸಾರ್ವಜನಿಕ ಸಾಲ ಎಷ್ಟರ ಮಟ್ಟಿಗೆ ಹಿಗ್ಗಿದೆಯೆಂದರೆ ಐದು ಕೋಟಿ ಗುಜರಾತಿಗಳಲ್ಲಿ ಪ್ರತಿಯೊಬ್ಬರೂ ಪ್ರತಿವರ್ಷ 1000 ರೂ. ನಷ್ಟು ಬಡ್ಡಿ ತೆರಬೇಕಾಗಿ ಬಂದಿದೆ. ಈ ಅವಧಿಯಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಾಖಲಾದ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ 7 ಲಕ್ಷದಿಂದ 12 ಲಕ್ಷಕ್ಕೆ ಏರಿತು.

ವಿನಾಶಕಾರಿ. ಬೆದರಿಕೆ, ಭೀತಿ ಹರಡಿಕೆ ಬಿಜೆಪಿ ಪ್ರಚಾರದ ಕೇಂದ್ರ ಅಂಶವಾಗಿತ್ತು. ಭಾರತೀಯ ದೇಶಪ್ರೇಮಿಗಳ ಆಂತರಿಕ ಚೇತನ ಶಕ್ತಿ ಇದರ ವಿರುದ್ಧ ಎದ್ದು ನಿಲ್ಲುತ್ತದೆಯೆಂದು ಆಶಿಸಬೇಕಷ್ಟೆ.

ಫ್ಯಾಸಿಸ್ಟ್ ಬೆದರಿಕೆ

ಚುನಾವಣೆಯ ಫಲಿತಾಂಶ ಏನೇ ಇರಲಿ ಕೋಮುವಾದಿ ಫ್ಯಾಸಿಸಂ ವಿರುದ್ಧ ಸಮರ ಕೊನೆಯ ವರೆಗೂ ನಡೆಯಬೇಕು. ಗುಜರಾತಿನಲ್ಲಿ ಅವರು ಸೋತರೆ, ಈ ಕೆಲಸ ತುಸು ಸುಲಭವಾಗುತ್ತದೆ.

ಶ್ರೀಯುತ ಮೋದಿ, ಆರ್‌ಎಸ್‌ಎಸ್ ಮತ್ತು ಅದರ ಎಲ್ಲಾ ಕಬಂಧ ಬಾಹುಗಳು ನೆನಪಿಡಬೇಕಾದ ಸಂಗತಿಯೆಂದರೆ ಗುಜರಾತಿನಲ್ಲಿ ಅವರು ಸೋತರೆ ಅದಕ್ಕೆ ಕಾರಣ ಬಹುಪಾಲು ಹಿಂದುಗಳು ಅವರನ್ನು ತಮ್ಮ ಪ್ರತಿನಿಧಿಗಳಾಗಿ ಸ್ವೀಕರಿಸುವುದಿಲ್ಲವಾದ್ದರಿಂದ, ಹಿಂದುತ್ವಕ್ಕೆ ಹಿಂದೂ ಧರ್ಮಕ್ಕೂ ಏನೂ ಸಂಬಂಧವಿಲ್ಲ ಎಂದು ಅವರು ಭಾವಿಸುತ್ತಾರಾದ್ದಾರಿಂದ.

(ಡಿಸೆಂಬರ್ 11, 2002)

ಬಾರಿ ಯಶಸ್ವಿಯಾಗಿ ನಡೆಸಿವೆ. ಆದರೆ, ಪ್ರತ್ಯೇಕ ಬ್ಯಾಂಕುಗಳ ಮಟ್ಟಕ್ಕೆ ಬಂದಾಗ ಮಾತ್ರ ಯಾವುದೇ ಬ್ಯಾಂಕಿನ ಸಂಘಟನೆ ಅಲ್ಲಿ ಮುಷ್ಕರದಂತಹ ಹೋರಾಟ ನಡೆಸಿಲ್ಲವೆಂಬುದೂ ನಿಜ. ಆದರೆ ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ (ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್ ಆಫ್ ಇಂಡಿಯಾಗೆ ಸಂಯೋಜಿತ) ಇದೇ ನವೆಂಬರ್ 15 ರಂದು ಒಂದು ದಿನದ ದೇಶವ್ಯಾಪಿ ಮುಷ್ಕರಕ್ಕೆ ಕರೆ ನೀಡಿತು. ಅತ್ಯಂತ ವಿಸ್ತೃತವಾದ ನೆಲೆಯಲ್ಲಿ ಖಾಸಗೀಕರಣ ವಿರೋಧಿ ಪ್ರಚಾರವನ್ನು ಕೈಗೊಂಡು, 15ರ ಮುಷ್ಕರವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿ ಬ್ಯಾಂಕ್ ನೌಕರರ ಇತಿಹಾಸದಲ್ಲೇ ಒಂದು ಹೊಸ ಅಧ್ಯಾಯವನ್ನು ತೆರೆಯಿತು. ಬ್ಯಾಂಕಿನ ಅಧಿಕಾರಿಗಳ ಸಂಘಟನೆ ಆಡಳಿತವರ್ಗಕ್ಕೆ ಶರಣಾಗಿ ತನ್ನ ಹೊಣೆಗೇಡಿತನವನ್ನು ಪ್ರದರ್ಶಿಸಿದರೆ, ಮಾನ್ಯತೆ ಪಡೆದ ಇನ್ನೊಂದು ಸಂಘಟನೆ (ಎಐಬಿಈಎ ಘಟಕ) ಕೇವಲ ಒಂದು ಕರಪತ್ರ ಹೊರಡಿಸಿ ಕೈ ತೊಳೆದುಕೊಂಡಿತು! ಬ್ಯಾಂಕ್ ರಾಷ್ಟ್ರೀಕರಣವಾದದ್ದೇ ತನ್ನ ಹೋರಾಟಗಳಿಂದಾಗಿ ಎಂದು ಪದೇ ಪದೇ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಈ ಸಂಘಟನೆ ಖಾಸಗೀಕರಣದ ಪೆಡಂಭೂತ ಕೆನರಾ ಬ್ಯಾಂಕ್ ಬಾಗಿಲಿಗೇ ಬಂದಾಗ ಯಾವುದೇ ಹೋರಾಟ ಮಾಡದೇ ತನ್ನ ಸೈದ್ಧಾಂತಿಕ ದಿವಾಳಿಕೋರತನವನ್ನು ಜಗಜ್ಜಾಹೀರು ಮಾಡಿಕೊಂಡಿತು!

ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ ನಡೆಸಿದ ಧೀರೋದಾತ್ತ ಹೋರಾಟಕ್ಕೆ ಬ್ಯಾಂಕಿನ ಎಲ್ಲಾ ವರ್ಗದ ನೌಕರರು/ ಅಧಿಕಾರಿಗಳಿಂದ ಅಭೂತಪೂರ್ವ ಸಹಾನುಭೂತಿ ಹಾಗೂ ಬೆಂಬಲ ವ್ಯಕ್ತವಾದದ್ದು ಆಡಳಿತವರ್ಗಕ್ಕೆ ಮತ್ತು ಅದರ ಬಾಲಬಡುಕ ಸಂಘಟನೆಗಳ ನಾಯಕತ್ವಕ್ಕೆ ಬಹಳ ಇರಿಸುಮುರಿಸು ಉಂಟು ಮಾಡಿದೆ. ದೇಶದ ಹಲವು ಭಾಗಗಳಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಗಿದೆ. ಬೆಂಗಳೂರಿನಲ್ಲಿ ಕೆನರಾ ಬ್ಯಾಂಕ್ ನೌಕರರು ಪ್ರಧಾನ ಕಾರ್ಯಾಲಯದ ಮುಂದೆ ಬೃಹತ್ ಮತಪ್ರದರ್ಶನ ನಡೆಸಿದರು. ಸಿಐಟಿಯು ಪರವಾಗಿ ಕಾಂ.ಇ.ಕೆ.ಎನ್.ರಾಜನ್, ವಿಮಾ ನೌಕರರ ಮುಂದಾಳು ಕಾಂ.ಎಂ.ಚಂದನ್ ಹಾಗೂ ರಿಸರ್ವ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಕಾಂ.ಲಕ್ಷ್ಮಿ ನಾರಾಯಣ ಮುಷ್ಕರಕಾರರನ್ನುದ್ದೇಶಿಸಿ ಮಾತನಾಡಿದರು. ಆನಂತರ ಮುಷ್ಕರನಿರತರು ಮೆರವಣಿಗೆಯಲ್ಲಿ ರಾಜಭವನಕ್ಕೆ ತೆರಳಿ, ರಾಜ್ಯಪಾಲರಿಗೆ ಬ್ಯಾಂಕಿನ ಖಾಸಗಿಕರಣವನ್ನು ವಿರೋಧಿಸಿ ಪ್ರತಿಭಟನಾ ಪತ್ರವನ್ನು ಸಲ್ಲಿಸಿದರು.

ಮೈಸೂರು, ಕೋಲಾರ, ಚಿತ್ರದುರ್ಗ, ದಾವಣಗೆರೆ, ಮಂಗಳೂರು, ಶಿವಮೊಗ್ಗ, ಚಿಕ್ಕಮಗಳೂರು ಮುಂತಾದ ನಗರಗಳಲ್ಲೂ ಮುಷ್ಕರ ಯಶಸ್ವಿಯಾಗಿ ನಡೆದು ಮೆರವಣಿಗೆ ಹಾಗೂ ಸಾಮೂಹಿಕ ಧರಣಿ ಕಾರ್ಯಕ್ರಮಗಳು ನಡೆದಿವೆ.

ಸಣ್ಣ ಸಂಘಟನೆಯಾದರೂ ತನ್ನ ಸಮರಶೀಲ ಕಾರ್ಯಕ್ರಮಗಳು ಮತ್ತು ತತ್ವಬದ್ಧ ನಿಲುವುಗಳ ಮೂಲಕ ಧೀಮಂತ ಛಾಪನ್ನು ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ ಇದುವರೆಗೆ ಮೂಡಿಸುತ್ತಾ ಬಂದಿದೆ. ಮುಂದಿನ ದಿನಗಳಲ್ಲಿ ಬೆಳೆದುಬರುತ್ತಿರುವ ವಿಶಾಲಸ್ತರದ ಐಕ್ಯ ಹೋರಾಟಗಳ ಒಂದು ಭಾಗವಾಗಿ, ಬೆಳೆದು ಬರಲು ಪಣ ತೊಟ್ಟು ಶ್ರಮಿಸುತ್ತಿದೆ.

[illegible]

ಹುಬ್ಬಳ್ಳಿ : ಹೂ ಬಳ್ಳಿ ನಗರಕ್ಕೆ ...

ಕರ್ನಾಟಕದ 'ಹೃದಯ' ಸ್ಥಾನದಲ್ಲಿರುವ ಹುಬ್ಬಳ್ಳಿ ನಗರವು ಕಳೆದ ಒಂದು ದಶಕದಿಂ... ನೀಡುತ್ತಿದೆ. ಸಂಘ ಪರಿವಾರ ಹಚ್ಚಿದ ಕಿಚ್ಚು ಕಳೆದೆರೆಡು ವರ್ಷಗಳಲ್ಲಿ ಭಜರಂಗಿ... ಉರಿಯುವಂತಾಗಿದೆ. ಮೊನ್ನೆ ಡಿಸೆಂಬರ್ 6 ರಂದು ಇವರು ಹುಬ್ಬಳ್ಳಿಯಲ್ಲಿ... ಗಾಂಧೀಜಿಯವರನ್ನು ಸಾಯಿಸಿ ಖುಷಿಪಟ್ಟದ್ದನ್ನು ನೆನಪಿಸುವಂತಿತ್ತು. ಹುಬ್ಬಳ್ಳಿ ಉಳಿ... ವಿಶ್ಲೇಷಿಸುವ ಲೇಖನ ಇಲ್ಲಿದೆ.

ಹುಬ್ಬಳ್ಳಿ ಇನ್ನೆಂದೂ ಮೊದಲಿನಂತೆ ಹೂ ಬಳ್ಳಿಗಳ ಕಂಪನ್ನು ಬೀರುವ ಬೀಡು ಆಗಲಾರದೆಂಬ ಆತಂಕ ಹುಬ್ಬಳ್ಳಿ ಧಾರವಾಡ ಮಹಾನಗರದ ಜನತೆಯನ್ನು ತಲ್ಲಣಗೊಳಿಸಿದೆ. ಇಲ್ಲಿ ಯಾವ ಘಳಿಗೆಯಲ್ಲಿ ಏನಾಗಬಹುದು ಎಂಬ ಭೀತಿ ಗಲ್ಲಿ ಗಲ್ಲಿಗಳನ್ನು, ಮನೆ ಮನೆಗಳನ್ನು ಆವರಿಸುತ್ತಿದೆ. ಧಾರ್ಮಿಕ ಹಬ್ಬಗಳು ಸಮೀಪಿಸುತ್ತಿದ್ದಂತೆ ಜನರ ಆತಂಕ ಹೆಚ್ಚುತ್ತದೆ. ಹಿಂದೂಗಳ ಹಬ್ಬಗಳು ಬಂದರೆ ಮುಸಲ್ಮಾನರಿಗೆ ಭಯ! ಮುಸಲ್ಮಾನರ ಹಬ್ಬಗಳು ಬಂದರೆ ಹಿಂದೂಗಳಿಗೆ ಭಯ! ಹಿಂದೂಗಳ ಹಬ್ಬಗಳಲ್ಲಿ ಮುಸಲ್ಮಾನರು, ಮುಸಲ್ಮಾನರ ಹಬ್ಬಗಳಲ್ಲಿ ಹಿಂದೂಗಳು ಪರಸ್ಪರ. ಬೆರೆತು ಆನಂದಿಸುತ್ತಿದ್ದ ದಿನಗಳು ದೂರವಾಗಿ ಹಬ್ಬಗಳ ದಿನಗಳಲ್ಲಿ ಮಂದಿರಗಳ ಮುಂದೆ, ಮಸೀದಿಗಳ ಎದುರು ಬಂದು ನಿಲ್ಲುವ ಪೋಲೀಸ್ ವ್ಯಾನುಗಳು ಜನತೆಯ ಎದೆ ಬಡಿತವನ್ನು ತೀವ್ರಗೊಳಿಸುತ್ತವೆ. ಕೂಲಿನಾಲಿ ಮಾಡಿಕೊಂಡು ಬದುಕುವ ಜನಗಳಂತೂ ಹಬ್ಬದ ದಿನಗಳಲ್ಲಿ ಹೊರಗೆ ಹೋದವರು ಮನೆಗೆ ಮರಳುವ ಭರವಸೆಯನ್ನು ಬಿಟ್ಟೇ ಮನೆಗಳಿಂದ ಹೊರ ಬೀಳುವಂತಿರುತ್ತದೆ.

ಪೆಂಡಾರಗಲ್ಲಿಯಲ್ಲಿ ರಣರಂಗ ; ಹುಬ್ಬಳ್ಳಿಯಲ್ಲಿ ಬೆಳಗಿನ ಜಾವ ಸಹ ಸುರಕ್ಷಿತ ಸಮಯವಲ್ಲ ಎಂಬುದು ಮೊನ್ನೆ ಬುಧವಾರ (20-11-2002) ಸಾಬೀತಾಗಿದೆ. ಹಿಂದೆ ಎಂದೂ ನಸುಕಿನ ವೇಳೆಯಲ್ಲಿ ಗಲಭೆ ನಡೆದ ಉದಾಹರಣೆಗಳಿಲ್ಲ. ಅಂದು ಸೂರ್ಯೋದಯಕ್ಕೆ ಮುಂಚೆ ನಗರದ ಪೆಂಡಾರಗಲ್ಲಿಯಲ್ಲಿ ಎರಡು ಗುಂಪುಗಳ ನಡುವೆ ಆರಂಭವಾದ ವಾದವಿವಾದವು ಕಲ್ಲುತೂರಾಟಕ್ಕೆ ತಿರುಗಿ ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ಅಶ್ರುವಾಯು ನಡೆಸಿ ಗಾಳಿಯಲ್ಲಿ ಗುಂಡುಹಾರಿಸುವಂತಾಯಿತು. ತುಳಜಾಭವಾನಿ ಮತ್ತು ಮಸೀದಿಯ ನಡುವಿನ ವೃತ್ತದಲ್ಲಿ ಬಿದ್ದಿದ್ದ ಕಲ್ಲುಗಳು, ಇಟ್ಟಿಗೆ ತುಂಡುಗಳು, ಒಡೆದ ಬಾಟಲಿಗಳು, ಹರಿದ ಚಪ್ಪಲಿಗಳು, ಸಿಡಿದು ಬಿದ್ದ ಅಶ್ರುವಾಯು ಶೆಲ್‌ಗಳು ಅಂದು ಬೆಳ್ಳಂ ಬೆಳಿಗ್ಗೆ ನಗರದ ಮಧ್ಯದಲ್ಲೊಂದು ರಣರಂಗ ನಿರ್ಮಾಣವಾದುದರ ಮೂಕಸಾಕ್ಷಿಗಳಂತಿದ್ದವು.

ದಾಜೀಬಾನಪೇಟೆಯ ಕೊನೆಯಂಚಿನಲ್ಲಿ ಪೆಂಡಾರಗಲ್ಲಿಗೆ ತಾಗಿಕೊಂಡು ಇರುವುದೇ ತುಳಜಾಭವಾನಿ ದೇವಾಲಯ. ಅಂಗಡಿ ಮುಗ್ಗಟ್ಟುಗಳಿಂದ ಆವೃತ್ತವಾಗಿರುವ ಈ ದೇವಸ್ಥಾನವು ಕಳೆದ ಹತ್ತು ವರ್ಷಗಳಿಂದ ಕೇಸರಿ ಪಡೆಗಳ ಪ್ರಮುಖ ಕೇಂದ್ರವಾಗಿ ಬೆಳೆದಿದೆ. ನಗರವನ್ನು ತಮ್ಮ ಹತೋಟಿಗೆ ತರಲು



ಹೆಣಗುತ್ತಿರುವ ಸಂಘ ಪರಿವಾರದ ನಿಗೂಢ ಚಟುವಟಿಕೆಗಳಿಗೆ ಈ ದೇವಾಲಯವೇ ಪ್ರಮುಖ ಕೇಂದ್ರವಾಗತೊಡಗಿತ್ತು. ದೇವಾಲಯದಿಂದ ಕೆಲವೇ ಹೆಜ್ಜೆಗಳ ಅಂತರದಲ್ಲಿರುವ ಮಸೀದಿಗೆ ಬಂದು ಹೋಗುವ ಮುಸಲ್ಮಾನರಿಗೆ ತುಳಜಾಭವಾನಿ ದೇವಾಲಯದೊಳಗೆ ಏನು ನಡೆಯುತ್ತದೆ ಎಂಬುದು ಸಹಜವಾಗಿಯೇ ಆತಂಕ್ಕೆ ಕಾರಣವಾಗಿದೆ.

ಮಂಗಳವಾರ ಗೌರಿ ಹುಣ್ಣಿಮೆಯ ಅಂಗವಾಗಿ ಏರ್ಪಡಿಸಲಾಗಿದ್ದ ಲಕ್ಷ ದೀಪೋತ್ಸವ ನಿಮಿತ್ತ ತುಳಜಾ ಭವಾನಿ ದೇವಾಲಯದಲ್ಲಿ ರಾತ್ರಿಯಿಡಿ ಧ್ವನಿವರ್ಧಕವನ್ನು ಹಚ್ಚಲಾಗಿತ್ತು. ಪಕ್ಕದಲ್ಲೇ ಇರುವ ಮಸೀದಿಯಲ್ಲಿ ರಂಜಾನ್ ನಿಮಿತ್ತ ಎಂದಿನಂತೆ ಬೆಳಿಗ್ಗೆ 5.30ಕ್ಕೆ 'ನಮಾಜ್' ಆರಂಭವಾಯಿತು. ಪ್ರಾರ್ಥನೆಯಲ್ಲಿ ನಿರತರಾದವರಿಗೆ ದೇವಸ್ಥಾನದಲ್ಲಿ ಹಚ್ಚಲಾದ ಧ್ವನಿವರ್ಧಕ ಕಿರಿಕಿರಿ ಎನಿಸಿದ್ದರಿಂದ ಸ್ವಲ್ಪ ಹೊತ್ತು ಧ್ವನಿವರ್ಧಕವನ್ನು ಬಂದ್ ಮಾಡುವಂತೆ

ನಿತ್ಯಾನಂದಸ್ವಾಮಿ

ಕೋರಿದ್ದಾರೆ. ಇದಕ್ಕೆ ಸಮ್ಮತಿಸದ ಇನ್ನೊಂದು ಕೋಮಿನವರು 'ಇದು ನಮ್ಮ ಹಬ್ಬ ನಿಮ್ಮಂತೆ ನಾವೂ ಭಜನೆ ಮಾಡುತ್ತಿದ್ದೇವೆ ಬೇಕಾದರೆ ನಿಮ್ಮ ಧ್ವನಿವರ್ಧಕವನ್ನೇ ನಿಲ್ಲಿಸಿ ಎಂದು ವಾದಿಸಿದ್ದಾರೆ. ಮಾತಿನ ಚಕಮಕಿ ತಾರಕಕ್ಕೇರಿದಾಗ ಉಭಯ ಕೋಮಿನವರು ಪರಸ್ಪರ ಕಲ್ಲು ತೂರಾಟಕ್ಕೆ ಇಳಿದಿದ್ದಾರೆ. ನಗರದ ಜನತೆ ಇನ್ನೂ ನಿದ್ರೆಯಲ್ಲಿರುವಾಗಲೇ ಇಲ್ಲಿ ನೂರಾರು ಜನ ಘರ್ಷಣೆಯಲ್ಲಿ ತೊಡಗಿದ್ದಾರೆ. ಒಂದು ಗುಂಪು ಮಸೀದಿಯತ್ತ, ಇನ್ನೊಂದು ಗುಂಪುದೇವಾಲಯದತ್ತ ಕಲ್ಲು ತೂರಲಾರಂಭಿಸಿದ್ದಾರೆ. ಎರಡೂ ಕಡೆ ಆಕ್ರೋಶದ ಕೇಕೆಗಳು ಮೊಳಗಿವೆ. ಎಲ್ಲೆಲ್ಲೂ ಹಾಹಾಕಾರ ಎದ್ದಿದೆ. ಕೆಲವೇ ನಿಮಿಷಗಳಲ್ಲಿ ಪೆಂಡಾರಗಲ್ಲಿ ರಣರಂಗವಾಗಿದೆ. ಗಲಭೆ ಕಾಡ್ಗಿಚ್ಚಿನಂತೆ ದಾಜಿಬಾನಪೇಟೆ, ಕಮರಿಪೇಟೆ ಪ್ರದೇಶಗಳಿಗೆ ಹರಡಿದೆ. ಪೊಲೀಸರು ಸ್ಥಳಕ್ಕೆ ಧಾವಿಸುವಷ್ಟರಲ್ಲಿ ಕಲ್ಲು ತೂರಾಟದಿಂದ ಮೂರು ಸಾವಿರ ಮಠದ ಆವರಣದಲ್ಲಿರುವ ವಾಣಿಜ್ಯ ಮಳಿಗೆಗಳು, ಭಾರತ್ ಸರ್ಕಲ್, ಕಮರೀಪೇಟೆ ಪ್ರದೇಶದ ಕೆಲ ಮನೆಗಳಿಗೆ ಹಾನಿಮಾಡಲಾಗಿದೆ. ಅಲ್ಲದೆ ಮನೆಗಳ ಮುಂದೆ ನಿಲ್ಲಿಸಲಾಗಿದ್ದ ದ್ವಿಚಕ್ರ ವಾಹನಗಳನ್ನು ಜಖಂಗೊಳಿಸಲಾಗಿದೆ.

ಘರ್ಷಣೆಯಲ್ಲಿ ತೊಡಗಿದ್ದ ಸುಮಾರು 500 ರಷ್ಟಿದ್ದ ಉದ್ರಿಕ್ತರನ್ನು ನಿಯಂತ್ರಿಸಲು ಲಾಠಿ ಪ್ರಹಾರ ನಡೆಸಿದ ಪೊಲೀಸರು, ಪರಿಸ್ಥಿತಿ ಹತೋಟಿಗೆ ಬಾರದಿದ್ದಾಗ 5 ಸುತ್ತು ಅಶ್ರುವಾಯು ಸೆಲ್‌ಗಳನ್ನು ಸಿಡಿಸಿದ್ದಲ್ಲದೆ ಗಾಳಿಯಲ್ಲಿ 2 ಸುತ್ತು ಗುಂಡುಹಾರಿಸಿದ್ದಾರೆ. ಘರ್ಷಣೆಯಲ್ಲಿ ಗಾಯಗೊಂಡ ನಾಲ್ವರನ್ನು ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಧ್ಯಾಹ್ನ 12.30ರ ಸುಮಾರು ಆಟೋರಿಕ್ಷಾವೊಂದನ್ನು ಅಡ್ಡಗಟ್ಟಿ ಕೆಡವಿ, ಚಾಲಕ ಅಲ್ಲಾಭಕ್ಷ್ ಸೈಯ್ಯದ್‌ಸಾಬ್ ಬಿಜಾಪುರ (41) ಅವರನ್ನು ಥಳಿಸಿ, ಆಟೋರಿಕ್ಷಾವನ್ನು ಜಖಂಗೊಳಿಸಿದಾಗ, ಪೊಲೀಸರು ಮತ್ತೆ ಲಾಠಿ ಪ್ರಹಾರ ನಡೆಸಿ ಜನ ಜಂಗುಳಿಯನ್ನು ಚದರಿಸಿದರಲ್ಲದೆ ದೇವಾಲಯದಲ್ಲಿ ಅಕ್ರಮವಾಗಿ ಸೇರಿದ್ದ ಜನರನ್ನು ಹೊರಹಾಕಿದರು. ಪ್ರಕ್ಷುಬ್ಧತೆ ಮುಂದುವರೆದಿದ್ದ ಕಾರಣ ಕಮರಿಪೇಟೆ ಹಾಗೂ ಶಹರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 144ನೇ ಕಲಂ ಅನ್ವಯ ನಿಷೇದಾಜ್ಞೆ ಜಾರಿಗೊಳಿಸಲಾಗಿದೆ. ಘಟನೆಗೆ ಸಂಬಂದಿಸಿದಂತೆ 12 ಜನರನ್ನು ಬಂಧಿಸಲಾಗಿದೆ. ದಾಜಿಬಾನ್ ಪೇಟೆಯ ದುರ್ಗಾದೇವಿ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಮೂರುಸಾವಿರ ಮಠದ ಆವರಣದಲ್ಲಿನ ಶಾಲಾ ಕಾಲೇಜುಗಳು, ಎಸ್.ಎಸ್.ಕೆ. ಶಿಕ್ಷಣ ಟ್ರಸ್ಟ್ ಹಾಗೂ ರೋಟರಿ ಶಾಲೆಗಳು ಬುಧವಾರ ಇಡೀ ಮುಚ್ಚಿದ್ದವು. ವ್ಯಾಪಾರಸ್ಥರು ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿದ್ದರು.

ಬೂದಿ ಮುಚ್ಚಿದ ಕೆಂಡ :


24 ಗಂಟೆಗಳ ನಿಷೇದಾಜ್ಞೆಯ ನಂತರ ಕೋಮು ಘರ್ಷಣೆಯಿಂದ ಉದ್ವಿಗ್ನಗೊಂಡಿದ್ದ ಪ್ರದೇಶಗಳು ಮಾಮೂಲಿ ಸ್ಥಿತಿಗೆ ಮರಳಿವೆ. ಆದರೆ ಹುಬ್ಬಳ್ಳಿ ಬೂದಿ ಮುಚ್ಚಿದ ಕೆಂಡವಾಗಿಯೇ ಉಳಿದಿದ್ದು ಜನರ ಮನಸ್ಸಿನ ಆತಂಕ ದೂರವಾಗಿಲ್ಲ. ಹುಬ್ಬಳ್ಳಿ ನಗರಕ್ಕೆ ಶಾಶ್ವತ ಪಿಡುಗಿನಂತೆ ಅಂಟಿಕೊಂಡಿರುವ ಕೋಮುಗಲಭೆಗಳ ಖಾಯಂ ಪರಿಹಾರಕ್ಕೆ ಜನ ಪರಿತಪಿಸುತ್ತಿದ್ದಾರೆ. ಈ ಸಲ ಧ್ವನಿವರ್ಧಕ ಒಂದು ನೆಪವಾಗಿದ್ದರೆ ಇನ್ನೊಂದು ದಿನ ಇನ್ನ್ಯಾವುದೋ

ಗಲಭೆಗಳ ಕರಿನೆರಳು

ರಾಜ್ಯದ ವಾಣಿಜ್ಯ ರಾಜಧಾನಿ, "ಚೋಟಾ ಬಾಂಬೇ" ಎಂಬಿತ್ಯಾದಿ ಬಿರುದುಗಳನ್ನು ಪಡೆದ ಹುಬ್ಬಳ್ಳಿ ನಗರವನ್ನು ಈಗ ಗಲಭೆಗಳ ಕರಿನೆರಳು ಆವರಿಸಿಕೊಂಡಿದೆ. ಈ ವಾಣಿಜ್ಯ ನಗರದಿಂದ ಪ್ರಮುಖ ವ್ಯಾಪಾರ ಉದ್ದಿಮೆಗಳು ಯಾವಾಗಲೋ ಕಾಲುಕಿತ್ತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಗಳು ಇಲ್ಲಿಯ ಪ್ರಮುಖ ಕೈಗಾರಿಕೆಗಳ ಕತ್ತು ಹಿಸುಕುವ ಕೆಲಸಮಾಡಿದ್ದರೆ ಅಳಿದುಳಿದ ಸಣ್ಣ ಕೈಗಾರಿಕೆಗಳು ಇಲ್ಲಿ ಮೇಲಿಂದ ಮೇಲೆ ಬುಗಿಲೇಳುವ ಗಲಭೆಗಳಿಂದ ತತ್ತರಿಸಿವೆ. ಹುಬ್ಬಳ್ಳಿ - ಧಾರವಾಡ ಪ್ರದೇಶದಲ್ಲಿರುವ ಬೇಲೂರು, ತಾರೀಹಾಳ, ಗೋಕುಲ, ಮತ್ತು ಲಕ್ಕಮನಹಳ್ಳಿಯ ನಾಲ್ಕು ಕೈಗಾರಿಕಾ ವಸಾಹತುಗಳಲ್ಲಿನ ಸಾವಿರಕ್ಕೂ ಹೆಚ್ಚು ಕೈಗಾರಿಕಾ ಘಟಕಗಳ ಮುಚ್ಚಿದ ಬಾಗಿಲುಗಳಿಗೆ ತುಕ್ಕು ಹಿಡಿದಿದೆ. ದೊಡ್ಡ ಕೈಗಾರಿಕೆಗಳಿಗೆ ಬಿಡಿ ಭಾಗಗಳನ್ನು ಪೂರೈಸುತ್ತಿದ್ದ ಅನೇಕ ಸಣ್ಣ ಉದ್ದಿಮೆಗಳು ಬೆಂಗಳೂರು, ಮುಂಬೈ, ಪುಣೆ, ಚೆನ್ನೈಗೆ ವಲಸೆ ಹೋಗಿವೆ. ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ವಾರ್ಷಿಕ ವಹಿವಾಟು 300 ಕೋಟಿ ರೂ ಗಳಿಂದ 50 ಕೋಟಿ ರೂ. ಗಳಿಗೆ ಕುಸಿದಿದೆ.

ರಾಜ್ಯದಲ್ಲೇ ಅತ್ಯಂತ ದೊಡ್ಡ ಹತ್ತಿ ಮಾರುಕಟ್ಟೆಯೆಂಬ ಹುಬ್ಬಳ್ಳಿಯ ಹೆಗ್ಗಳಿಕೆ ಇಂದು ಮಾಯವಾಗಿದೆ. ಹತ್ತಿ ಬೆಳೆಗಾರರು ಗದಗ, ರಾಣೆಬೆನ್ನೂರ್, ಬೈಲಹೊಂಗಲ ಮಾರುಕಟ್ಟೆಗಳಿಗೆ ತಮ್ಮ ನಿಷ್ಠೆಯನ್ನು ತೋರ್ಪಡಿಸಿದ್ದಾರೆ. ಕೃಷಿ ಉತ್ಪನ್ನಗಳ ಮಾರುಕಟ್ಟೆಗೆ ಶೇಂಗಾ, ಮೆಣಸಿನಕಾಯಿ, ಉಳ್ಳಾಗಡ್ಡಿ, ಆಲೂಗಡ್ಡೆ, ಗೋವಿನ ಜೋಳ ಮೊದಲಾದವುಗಳ ಆವಕವೂ ಕಡಿಮೆಯಾಗಿದೆ. ಎಲ್ಲಿ ನೋಡಿದಲ್ಲಿ ಕಾಣಸಿಗುತ್ತಿದ್ದ ಬಟ್ಟೆ ಅಂಗಡಿಗಳು ಈಗ ಮಾಯವಾಗಿವೆ. ವಾಹನಗಳ ಬಿಡಿ ಭಾಗಗಳ ವ್ಯಾಪಾರವನ್ನು ಬೆಳಗಾವಿಯು ಸೆಳೆದುಕೊಂಡಿದೆ. ಚಿನ್ನಾಭರಣ ಅಂಗಡಿಗಳ ವಹಿವಾಟು ಗಣನೀಯವಾಗಿ ಕುಸಿದಿದೆ. ಈದ್ಗಾ ವಿವಾದದ ನಂತರ ಇಲ್ಲಿಯ ಹೋಟೆಲ್ ಉದ್ಯಮ ಶೇ. 25 ರಿಂದ 30ರಷ್ಟು ಕುಸಿದಿದ್ದು ಸಾವಿರಾರು ಹೋಟೆಲ್ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಗಲಭೆಗಳ ಕಾರಣದಿಂದ ಸಾರಿಗೆ, ಸರಕು ಸಾಗಾಣಿಕೆಯ ಉದ್ಯಮವೂ ತೀವ್ರ ನಷ್ಟವನ್ನು ಅನುಭವಿಸುವಂತಾಗಿದೆ. ಹುಬ್ಬಳ್ಳಿಯಲ್ಲಿ ಸುಮಾರು 1000 ಆಟೋರಿಕ್ಷಾಗಳಿವೆ. ಮೇಲಿಂದ ಮೇಲೆ ಬಂದೆರಗುವ ಕರ್ಫ್ಯೂ, ಬಂದ್‌ಗಳಿಂದ ಆಟೋ ಚಾಲಕರು ದುಡಿಮೆ ಇಲ್ಲದೆ ಬಳಲುತ್ತಾರೆ. ಹುಬ್ಬಳ್ಳಿಯಿಂದ ಧಾರವಾಡ ಮತ್ತು ಸುತ್ತಲಿನ ಹಳ್ಳಿಗಳಿಗೆ ಸಂಚರಿಸುವ 300ಕ್ಕೂ ಟೆಂಪೋಗಳ ಮಾಲೀಕರು ತೀವ್ರ ನಷ್ಟವನ್ನು ಅನುಭವಿಸುತ್ತಾರೆ. ಸಾವಿರಾರು ಸಂಖ್ಯೆಯಲ್ಲಿರುವ ಡಬ್ಬಾ ಅಂಗಡಿ ಮಾಲೀಕರು ತೀವ್ರ ಹಾನಿ ಅನುಭವಿಸುತ್ತಾರೆ.

1992ರ ನಂತರದ ಸರಣೀ ಗಲಭೆಗಳಿಂದ ದೇಶದ ವಿವಿದೆಡೆಗಳಿಂದ ಹುಬ್ಬಳ್ಳಿಗೆ ವಿವಿಧ ಸರಕು ಸಾಮಗ್ರಿಗಳನ್ನು ಖರೀದಿಸಲು ಬರುತ್ತಿದ್ದವರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ. ಗಲಭೆಗಳ ಪರಿಣಾಮಾಗಿ ಬ್ಯಾಂಕಿಂಗ್ ವ್ಯವಹಾರವೂ ಕುಸಿದಿದೆ. ಸರಕಾರಕ್ಕೆ ಬರುವ ವಾಣಿಜ್ಯ ತೆರಿಗೆಯ ಪ್ರಮಾಣ ಕಡಿಮೆಯಾಗಿದೆ. ಎಲ್ಲಕ್ಕೂ ಮಿಗಿಲಾಗಿ ದಿನಗೂಲಿ ಕಾರ್ಮಿಕರು, ಸುತ್ತಮುತ್ತಲಿನ ಹಳ್ಳಿಗಳಿಂದ ಹಣ್ಣು ಹಂಪಲು, ತರಕಾರಿ ಇತ್ಯಾದಿಗಳನ್ನು ತಂದು ಮಾರಾಟ ಮಾಡಿ ನಿತ್ಯ ಹೊಟ್ಟೆ ಹೊರೆಯುವ ಜನ ಅನ್ನವನ್ನು ಕಳೆದುಕೊಂಡು ಪರದಾಡುವಂತಾಗಿದೆ. ಒಟ್ಟಾರೆಯಾಗಿ ಹುಬ್ಬಳ್ಳಿಯಲ್ಲಿ ಜನರ ಜವನ ಅಸ್ತವ್ಯಸ್ತವಾಗಿದೆ.



ಈದ್ಗಾ ಮೈದಾನ

...ರೋ ಕೊಳ್ಳಿ

ಅಲ್ಲಿಯ ಜನತೆಗೆ ನರಕದ ಅನುಭವ ...ರ ಪ್ರವೇಶದಿಂದ ನಗರವೇ ಹತ್ತಿ ...ದ 'ವಿಜಯೋತ್ಸವ' ಇವರು ...ದರೆ, ಮಾಡಬೇಕಾದದ್ದೇನು ಎಂದು

...ಷ್ಟಿಲ್ಲಕ ವಿಷಯ ಗಲಭೆಗೆ ಕಾರಣವಾಗಬಹುದು ಎಂಬ ಆತಂಕ ಅವರನ್ನು ಕಾಡುತ್ತಿದೆ.

ಮೇಲ್ನೋಟಕ್ಕೆ ಧ್ವನಿವರ್ಧಕ ಬಳಕೆಯ ಈ ...ವಿವಾದವು ಒಂದು ಆಕಸ್ಮಿಕ ಘಟನೆಯಂತೆ ...ಕಂಡರೂ ಇದರ ಹಿಂದೆ ನಗರದ ನೆಮ್ಮದಿಗೆ ಸತಾಯ್ಲ ಗತಾಯ ಭಂಗವನ್ನುಂಟುಮಾಡುತ್ತಾ ತಮ್ಮ ಗುರಿಸಾಧನೆಗಾಗಿ ಕೋಮುವಾದಿ ಶಕ್ತಿಯೊಂದು ಕೆಲಸಮಾಡುತ್ತಿದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಕೇವಲ 3 ತಿಂಗಳುಗಳ ಹಿಂದೆ ಇದೇ ಪೆಂಡಾರಗಲ್ಲಿಯ ಮಸೀದಿಯ ಮೇಲೆ ದುಷ್ಕರ್ಮಿಗಳ ಗುಂಪೊಂದು ಕಲ್ಲುತೂರಿದ ಘಟನೆ ನಡೆದಿದೆ. ಅಂದು ಧ್ವನಿವರ್ಧಕ ಬಳಕೆಯಂತಹ ಯಾವುದೇ ನೆಪ ಇರಲಿಲ್ಲ. ಆಗಸ್ಟ್ 14 ರ ರಾತ್ರಿ ಮೂರುಸಾವಿರ ಮಠದ ಎದುರಿನಲ್ಲಿರುವ ಸಂಘಪರಿವಾರದ ಸಂಘಟನೆ ಯೊಂದರ ಕಾರ್ಯಾಲಯದಲ್ಲಿ ಮಧ್ಯರಾತ್ರಿ ಧ್ವಜಾರೋಹಣ ಮಾಡಿ ಮನೆಗೆ ...ತ್ತಿದ್ದ ಗುಂಪೊಂದು ಈ ...ತ್ಯವನ್ನೆಸಗಿದೆ. 20 ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು ...ನಾರಾಯಣಸಾ (25), ಗುರುನಾಥ (20) ದೀಪಕ್ (29) ಇವರನ್ನು ಬಂಧಿಸಲಾಗಿತ್ತು. ಉಳಿದ ಆರೋಪಿಗಳ ಬಗ್ಗೆ ಸ್ಪಷ್ಟ ಸುಳಿವು ದೊರಕಿದ್ದು ಅವರ ಗಡಿಪಾರಿಗೆ ಕ್ರಮಕೈಕೊಳ್ಳಲಾಗುವುದು ಎಂದು ಪೊಲೀಸ್ ಪ್ರಕಟಣೆ ತಿಳಿಸಿತ್ತು.

ಕಳೆದ ಅಕ್ಟೋಬರ್ ತಿಂಗಳಲ್ಲಿ ನಗರದಲ್ಲಿ ಸಿದ್ಧಾರೂಢ ಮಠದ ಆವರಣದಲ್ಲಿ ರಾತ್ರಿ ಹೊತ್ತು ಮುಸ್ಲಿಂ ಯುವಕರು ಸೋಡಾ ಬಾಟಲಿಗಳನ್ನು ಒಡೆದು ದಾಂದಲೆ ನಡೆಸಿದ್ದಾರೆ ಎಂಬ ವದಂತಿ ಹಬ್ಬಿಸಿ ಹಳೆ ಹುಬ್ಬಳ್ಳಿ ಪ್ರದೇಶ ಉದ್ವಿಗ್ನವಾಗಿತ್ತು. ಒಂದು ಕೋಮಿನ ಜನ ಉದ್ದೇಶಪೂರ್ವಕವಾಗಿ ಈ ಕೆಲಸ ಮಾಡಿದ್ದಾರೆ ಎಂದು ಪ್ರತಿಭಟಿಸಿ ಹಿಂದೂ ಯುವಕರು ರಸ್ತೆ ತಡೆನಡೆಸಿದ್ದರು. ಆದರೆ ವಾಸ್ತವಿಕವಾಗಿ ಅಂತಹದುಷ್ಕೃತ್ಯ ನಡೆದಿರಲಿಲ್ಲ. ಮಠಕ್ಕೆ ಯಾವುದೇ ಹಾನಿ ಆಗಿರಲಿಲ್ಲ. ಅದೊಂದು ಕುಡುಕರ ದುರ್ವರ್ತನೆ ಎಂದು ಸಾಬೀತಾದರೂ ಬೂದಿ ಮುಚ್ಚಿದ ಕೆಂಡ ಆರಲಿಲ್ಲ.

ಅಕ್ಟೋಬರ್ 7 ರ ರಾತ್ರಿ ಮತ್ತೆ ನಗರದಲ್ಲಿ ಗಲಭೆ ಭುಗಿಲೆದ್ದಿತು. ಕಮರಿಪೇಟೆಯ ಮೂತ್ರಾಲಯದ ಬಳಿ ಎರಡೂ ಕೋಮಿನ ಇಬ್ಬರು ಯುವಕರ ನಡುವಿನ ಜಗಳ ಕೆಲವೇ ನಿಮಿಷಗಳಲ್ಲಿ ಕಲ್ಲು ತೂರಾಟ, ಆ್ಯಸಿಡ್ ಬಲ್ಬ್ ಎಸೆತ, ಚಾಕು ಚೂರಿ ತಲವಾರುಗಳ ಝಣತ್ಕಾರ, ಲಾಠಿ ಪ್ರಹಾರ, ಕೊನೆಗೆ ಗೋಳಿಬಾರ್‌ನಲ್ಲಿ ಮುಕ್ತಾಯ ವಾಯಿತು. ಗೋಳಿಬಾರ್‌ನಲ್ಲಿ ಗಾಯಗೊಂಡ ಇಬ್ಬರಲ್ಲಿ ಒಬ್ಬರು ಮಹಿಳೆ. ಇದು ಮುಗಿಯಿತು ಎನ್ನುವಷ್ಟರಲ್ಲಿಯೇ ಮರುದಿನ ಗಲಭೆ ನಗರದ ಇತರ ಪ್ರದೇಶಗಳಿಗೂ ಹಬ್ಬಿ ಹಳೆ ಹುಬ್ಬಳ್ಳಿ ಇಸ್ಲಾಂ ಪುರ ಓಣಿಯಲ್ಲಿ ಹಾದು ಹೋಗುತ್ತಿದ್ದ ಯವಕ ಸಂತೋಷ ಕಡಗದ (19) ಇರಿತಕ್ಕೆ ಬಲಿಯಾಗಿ ಕಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟ,

ಪುಟ 9 ಕ್ಕೆ

ಹಿಂದುದ್ವದ ಹಿಂದೆ - ಅಕ್ರಮ ಸಾರಾಯಿ ದಂಧೆ

ಬಾಬ್ರಿ ಮಸೀದಿ ಧ್ವಂಸದ ದಿನದಿಂದ ಹುಬ್ಬಳ್ಳಿಗೆ ತಾಗಿದ ಈ ಪಿಡುಗು ಇನ್ನೂ ದೂರವಾಗಿಲ್ಲ. ಹಿಂದುತ್ವದ ಶಕ್ತಿಗಳಿಗೆ ಇದರಿಂದ ಲಾಭವಾಗಿದೆ. ಅವರ ಪ್ರತಿನಿಧಿಗಳು ಇಲ್ಲಿ ಶಾಸಕರಾಗಿದ್ದಾರೆ. ಸಂಸದರಾಗಿದ್ದಾರೆ. ಇಲ್ಲಿ ಹೊತ್ತಿಸಲಾದ ಕೋಮು ಜ್ವಾಲೆಯನ್ನು ನಂದಲು ಬಿಡದೆ ತಮ್ಮ ನೆಲೆಯನ್ನು ಗಟ್ಟಿಗೊಳಿಸಲು ಮತ್ತು ವಿಸ್ತರಿಸಲು ಅವರು ಸಜ್ಜಾಗಿದ್ದಾರೆ. ಅವರ ಈ ನೀಲಿ ನಕ್ಷೆಯ ಅನುಷ್ಠಾನಕ್ಕೆ ನೆರವಾಗುತ್ತಿರುವುದು ಇಲ್ಲಿನ ಅಕ್ರಮ ಸಾರಾಯಿ ದಂಧೆ. ನಕಲಿ ಸಾರಾಯಿ ತಯಾರು ಮಾಡಿ ಬೆಳೆದಿರುವ ಪಟ್ಟೇಗಾರರು ಬಿಜೆಪಿಯ ಬೆಂಬಲಿಗರು. ಕಮರೀಪೇಟೆ ಅವರ ಭದ್ರಕೋಟೆ. ಇಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳಿಗೆ ಪೊಲೀಸರೇ ರಕ್ಷಕರು. ಕಮರೀಪೇಟೆ ಪೊಲೀಸ್ ಠಾಣೆಯ ಹಪ್ತಾ ವಸೂಲಿ ವಿಧಾನಸಭೆಯಲ್ಲಿಯೇ ಪ್ರಸ್ತಾಪಕ್ಕೆ ಬಂದಿತ್ತು. ಇಲ್ಲಿಯ ಭೂಗತ ವ್ಯವಹಾರಗಳಿಗೆ ಕಡಿವಾಣ ಹಾಕಲು ನಿಷ್ಠಾವಂತ ಪೊಲೀಸ್ ಅಧಿಕಾರಿಯೊಬ್ಬರು ಮುಂದಾದರೆ ಗಲಭೆಗಳು ಆಗುವುದು ಖಂಡಿತ ಎಂದು ಜನ ಆಡಿಕೊಳ್ಳುತ್ತಾರೆ.

ಕಳೆದ ಮೂರು ನಾಲ್ಕು ತಿಂಗಳುಗಳಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕೋಮು ಗಲಭೆಗಳಿಗೆ ಇಲ್ಲಿಯ ಅಕ್ರಮ ಅಡ್ಡೆಗಳ ಮೇಲೆ ನಡೆದ ಪೊಲೀಸ್ ಕಾರ್ಯಾಚರಣೆಯೇ ಕಾರಣ ಎಂಬ ಮಾತು ನಗರದಲ್ಲಿ ಪ್ರಚಲಿತವಾಗಿದೆ. ಇತ್ತೀಚೆಗೆ ಕಮರೀಪೇಟೆಯಲ್ಲಿ 25 ಲಕ್ಷ ರೂ. ಮೌಲ್ಯದ ನಕಲಿ ಮದ್ಯವನ್ನು ವಶಪಡಿಸಿಕೊಳ್ಳಲಾಯಿತು. ಸರ್ಕಾರಿ ಲೇಬಲ್‌ಗಳ ನಕಲಿ ಪ್ರತಿಗಳೂ ಗೋವೆಯ ಪ್ರಸಿದ್ಧ ಕಂಪೆನಿಗಳ ಬ್ರಾಂಡ್‌ಗಳ ನಕಲಿ ಲೇಬಲ್‌ಗಳೂ ಪತ್ತೆಯಾಗಿವೆ. ವಿಠಲ ಉದ್ವಾ, ಪ್ರಕಾಶ್‌ಲದ್ವಾ, ಕಾಶಿ ಹೋಡೆ, ಈಶ್ವರ ಜರತಾರಘರ, ಮಲ್ಲಾರಿ ಹಬೀಬ್, ಅಂಬಾಸಾಕತಾರೆ, ಜಗ್ಗು ಮಿಸ್ಕಿನ್ ಮೊದಲಾದವರ ವಿರುದ್ಧ ಪ್ರಕರಣ ದಾಖಲಾಗಿದ್ದು ಮಲ್ಲಾರಿ ಹಬೀಬ್ ಮತ್ತು ವೆಂಕಟೇಶ್ ಪೂಜಾರಿಯನ್ನು ಬಂಧಿಸಲಾಗಿದೆ. ಪೊಲೀಸ್ ಆಯುಕ್ತ ಗಗನ ದೀಪ ಮತ್ತು ಅಬಕಾರಿ ಹೆಚ್ಚುವರಿ ಆಯುಕ್ತ ಸಜ್ಜನ ಶೆಟ್ಟರ್ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ. ದಿಟ್ಟ ನಿಲುಮೆ ತೆಗೆದುಕೊಳ್ಳುವ ಪೊಲೀಸ್ ಅಧಿಕಾರಿಗಳ ಎತ್ತಂಗಡಿ ಗುರಿ ಇಟ್ಟುಕೊಂಡೇ ಗಲಭೆಗಳನ್ನು ಪ್ರಚೋದಿಸಲಾಗುತ್ತಿದೆ ಎಂಬ ಮಾತು ಸಹ ಮೊಗಮ್ಮಾಗಿ ಕೇಳಿಬರುತ್ತಿದೆ. ಇಲ್ಲಿನ ಅಕ್ರಮ ಸಾರಾಯಿ ದಂಧೆ ಕೊನೆಗೊಳ್ಳದೆ ಇಲ್ಲಿ ಕೋಮು ಗಲಭೆಗಳು ಕೊನೆಗೊಳ್ಳಲು ಸಾಧ್ಯವಿಲ್ಲ ಎಂಬ ಜನಾಭಿಪ್ರಾಯದಲ್ಲಿ ಸತ್ಯಾಂಶ ಇದ್ದೇ ಇದೆ.


ಭೀತಿ ಬುಡದಲ್ಲಿ ಮಹಾನಗರ

ಹೂಬಳ್ಳಿ ಎಂದಿರುವ
ಹುಬ್ಬಳ್ಳಿ ಮಹಾನಗರ
ಬದುಕಿರುವೆವು ನಾವಿಂದು
ಹೆಬ್ಬಾವಿನ ಬುಡದಲ್ಲಿ
ನಿಮಿಷದಿ ನಿಮಿಷಕ್ಕೆ
ಸರಿದಾಡುತಿಹ ಹಾವು
ಕಡೆಗದು ಬಂದಿಹದು
ಕೊಲೆ ದರೋಡೆಗಳ ಬೀಡಿಗೆ
ಮನೆಯಿಂದ ಹೊರಗಡೆಗೆ
ಬರಲಿರುವ ಅಮಾಯಕರು
ಪ್ರತಿ ಉಸಿರಲಿ ನೆನೆಯುವರು
ಮನೆ ಸೇರುವ ಕಾತುರವು
ಮುಂದೊರೆದರೆ ಈ ಹಾದಿ
ಬಿಡಲಾರದು ಶನಿಕಾಟ
ಅರಿತು ನಡೆಯಲಿ ಸರಕಾರ
ಕಾಪಾಡುವ ಹಾದಿಯು.

- ಎಂ.ಸಿದ್ದಲಿಂಗಯ್ಯ

ಭಜರಂಗಿಗಳ ಹಾವಳಿ

ಇತ್ತೀಚಿನ ದಿನಗಳಲ್ಲಿ ಭಜರಂಗ ದಳದ ಹೆಸರಿನಲ್ಲಿ ಒಗ್ಗೂಡಿರುವ ಪುಂಡಪೋಕರಿಗಳ ಗ್ಯಾಂಗ್ ನಗರದಲ್ಲಿ ಜನತೆಯ ಆತಂಕವನ್ನು ಹೆಚ್ಚಿಸಿದೆ. ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ವಿಶ್ವ ಹಿಂದೂ ಪರಿಷತ್ತಿನ ಅಧ್ಯಕ್ಷ ಅಶೋಕ ಸಿಂಘಾಲರ ಜನ್ಮದಿನ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಶೋಭಾಯಾತ್ರೆಯ ಹೆಸರಿನಲ್ಲಿ ಈ ರೌಡಿಗಳು ನಡೆಸಿದ ಪುಂಡಾಟದಿಂದ ಹುಬ್ಬಳ್ಳಿ ನಗರ ಒಂದು ವಾರಕ್ಕೂ ಹೆಚ್ಚು ಕಾಲ ನಲುಗಿತ್ತು. ಕಳೆದ ಆಗಸ್ಟ್ ತಿಂಗಳಲ್ಲಿ ಪೆಂಡಾರಗಳ್ಲಿಯ ಮಸೀದಿಯ ಮೇಲೆ ಮಧ್ಯರಾತ್ರಿ ಕಲ್ಲು ತೂರಿದವರು ಇದೇ ರೌಡಿ ಗ್ಯಾಂಗಿನವರು. ಡಿಸೆಂಬರ್ 6 ಸಮೀಪಿಸುತ್ತಿದ್ದಂತೆ ನಗರದಲ್ಲಿ ಮತ್ತೆ ಗಲಭೆಗಳನ್ನು ಸೃಷ್ಟಿಸಲು ಈ ಭಜರಂಗಿ ಕಿಡಿಗೇಡಿಗಳನ್ನು ಅಲ್ಲಿಂದ ರವಾನಿಸಲಾಗುತ್ತಿದೆ.



ಭಜರಂಗದಳ ಭಯೋತ್ಪಾದನೆ ಪಡೆಯ ಮುತಾಲಿಕ್

ಇದೇ ಡಿಸೆಂಬರ್ 3 ರ ರಾತ್ರಿ ನಗರದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಹುಟ್ಟುಹಾಕಲು ಯತ್ನಿಸಿದ ಆರೋಪದ ಮೇಲೆ ಭಜರಂಗದಳದ 8 ಜನ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ. ಹುಬ್ಬಳ್ಳಿಯ ಭಜರಂಗದಳದ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗದುಗಿನ ಮಹೇಶ್ ರೋಖಡೆ, ಭಜರಂಗದಳದ ಕಾರ್ಯಕರ್ತ ಕಮರಿಪೇಟೆಯ ಶ್ರೀನಿವಾಸ ಕಾಟವೆ, ದಾಜಿಬಾನ ಪೇಟೆಯ ವಿನಾಯಕ ಮಿಸ್ಕಿನ್, ಗೋಪಾಲದೊಂಗಾಡಿ ಸುನಿಲ್ ಹಬೀಬ್, ಗೋಕಾಕ್ ತಾಲೂಕಿನ ಸಿಂದಿಕುರುಬೆಟ್ಟದ ಖಂಡೋಬಾ ಗೋಕಾಕ ಮತ್ತು ಶ್ರೀಪಾಲಜೈನ ಎಂಬಾತರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಂದು ರಾತ್ರಿ 10.30 ಸುಮಾರು ಇಲ್ಲಿಯ ಕಾಮತ್ ಹೋಟೆಲ್ ಹತ್ತಿರದಿಂದ ಆಟೋ ಒಂದರಲ್ಲಿ ಇವರಲ್ಲಿ ಐದು ಜನರು ಕೇಶ್ವಾಪುರದ ಕಡೆಗೆ ಪ್ರಯಾಣಿಸಿದರು. ಅಲ್ಲಿ ಆಟೋಚಾಲಕ ನೂರ ಅಹಮ್ಮದ್‌ನೊಂದಿಗೆ ತಂಟೆ ತೆಗೆದು, ಆತನ ಮೇಲೆ ಹಲ್ಲೆಮಾಡಿ, ಆತನಲ್ಲಿದ್ದ ಹಣವನ್ನು ಕಿತ್ತುಕೊಂಡು ಕಲ್ಲಿನಿಂದ ಜಜ್ಜಿ ಆಟೋವನ್ನು ಜಖಂಗೊಳಿಸಿದರು. ಆಟೋ ಚಾಲಕ ಕೂಗಿಕೊಂಡಾಗ ಜನ ಸೇರಲಾರಂಭಿಸಿದರು. ಓಡಿಹೋಗುತ್ತಿದ್ದ ಆರೋಪಿಗಳಲ್ಲಿ ಕಮರಿಪೇಟೆಯ ಶಂಕರ ಸುರೇಂದ್ರಸಾ ಸಿದ್ದಲಿಂಗ್ ಗಸ್ತು ಪೊಲೀಸರ ಕೈಗೆ ಸಿಕ್ಕಿಬಿದ್ದ. ಆತನಿಂದ ದೊರೆತ ಸುಳಿವಿನಿಂದ ಉಳಿದ ಆರೋಪಿಗಳನ್ನು ಬಂಧಿಸಲು ಸಾಧ್ಯವಾಯಿತು. ಮೂರುಸಾವಿರ ಮಠದ ಹತ್ತಿರ ಇರುವ ಭಜರಂಗದಳದ ಕಛೇರಿಯಲ್ಲಿ ಅವಿತುಕೊಂಡಿದ್ದ ಮಹೇಶ್ ರೋಖಡೆಯನ್ನು ಪೊಲೀಸರು ಬಂಧಿಸಲು ಹೋದಾಗ ಅಲ್ಲಿದ್ದ ಖಂಡೋಬಾ ಗೋಕಾಕ ಮತ್ತು ಶ್ರೀಪಾಲ ಜೈನ ಏರ್‌ಗನ್ ಮೂಲಕ ಪೊಲೀಸರನ್ನು ತಡೆಯಲು ಪ್ರಯತ್ನಿಸಿದರು ಎಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆ ವರದಿಮಾಡಿದೆ.


ಈ ನಡುವೆ ನಗರದಲ್ಲಿ ಕಾನೂನು ವ್ಯವಸ್ಥೆ ಕಾಪಾಡಿಕೊಂಡು ಹೋಗಲು ಮುಂಜಾಗ್ರತಾ ಕ್ರಮವಾಗಿ ಐ.ಪಿ.ಸಿ. ಕಲಂ 144(8)ರ ಅಡಿಯಲ್ಲಿ ಭಜರಂಗ ದಳದ ದಕ್ಷಿಣ ಭಾರತ ಸಂಚಾಲಕ ಪ್ರಮೋದ ಮುತಾಲಿಕನನ್ನು ನವಂಬರ್ 29 ರಿಂದ ಡಿಸೆಂಬರ್ 28ರ ವರೆಗೆ ಹುಬ್ಬಳ್ಳಿ ಧಾರವಾಡದಿಂದ ಗಡಿಪಾರು ಮಾಡಲು ಪೊಲೀಸ್ ಆಯುಕ್ತ ಹೆಚ್ಚುವರಿ ದಂಡಾಧಿಕಾರಿ ಕೆ.ವಿ. ಗಗನ್ ದೀಪ ಆದೇಶ ಜಾರಿ ಮಾಡಿದ್ದಾರೆ. ಪ್ರಚೋದನಾಕಾರಿ ಭಾಷಣಗಳಿಗೆ ಕುಪ್ರಸಿದ್ಧ ಮುತಾಲಿಕ್ ಬೆಳಗಾಂವ್, ಬನಹಟ್ಟಿ, ಹುಬ್ಬಳ್ಳಿ, ರಾಣೇಬೆನ್ನೂರ್ ಮೊದಲಾದ ಕೇಂದ್ರಗಳಲ್ಲಿ ಗಲಭೆಗಳನ್ನು ಹೊತ್ತಿಸಿದವರು. ಕಳೆದ ವರ್ಷ ಆತನನ್ನು ಬೆಳಗಾವಿಯಿಂದಲೂ ಗಡಿಪಾರು ಮಾಡಲಾಗಿತ್ತು. ಹುಬ್ಬಳ್ಳಿಯಲ್ಲಿ ಈಗ ಪೊಲೀಸ್ ಆಯುಕ್ತರು ಸಮಯೋಚಿತವಾಗಿ ತೆಗೆದುಕೊಂಡ ಕ್ರಮವನ್ನು ರಾಜ್ಯ ವಿಧಾನಸಭೆಯ ಪ್ರತಿಪಕ್ಷದ ನಾಯಕ ಜಗದೀಶ ಶೆಟ್ಟರ ಖಂಡಿಸಿರುವುದು ಆಶ್ಚರ್ಯದ ಸಂಗತಿಯಲ್ಲ. ಈ ಮೂಲಕ ಅವರು ಹುಬ್ಬಳ್ಳಿ ನಗರದಲ್ಲಿ ಗಲಭೆಕೋರ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಸಿಪಿಐ(ಎಂ) ಪಕ್ಷದ ಧಾರವಾಡ ಜಿಲ್ಲಾ ಸಂಘಟನಾ ಸಮಿತಿಯು ಪೊಲೀಸ್ ಆಯುಕ್ತರ ಕ್ರಮವನ್ನು ಸಮರ್ಥಿಸಿ ಬೆಂಬಲಿಸಿದೆ ಅಲ್ಲದೆ ಡಿಸೆಂಬರ್ 6 ಸಂದರ್ಭದಲ್ಲಿ ನಗರದಲ್ಲಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಬೇಕೆಂದು ಆಗ್ರಹಿಸಿದೆ. ಇನ್ನುಳಿದ ರಾಜಕೀಯ ಪಕ್ಷಗಳಿಗೆ ಪರಿಸ್ಥಿತಿ ಅರಿವು ಇಲ್ಲವೋ ಅಥವ ಕಂಡದನ್ನು ಕಂಡಂತೇ ಹೇಳಲು ಸಂಕೋಚವೋ ತಿಳಿಯದಾಗಿದೆ.

ಮೂರುಸಾವಿರ ಮಠದ ಪಾತ್ರ : ನಗರದಲ್ಲಿ ದೊಡ್ಡ ಸಂಖ್ಯೆಯ ಹಿಂಬಾಲಕರನ್ನು ಹೊಂದಿರುವ ಹುಬ್ಬಳ್ಳಿಯ ಮೂರುಸಾವಿರ ಮಠದ ಪಾತ್ರ ಪ್ರಶ್ನಾರ್ಹವಾಗಿದೆ. ಮಠದ ಸ್ವಾಮಿಗಳು ಮನಸುಮಾಡಿದರೆ ನಗರಕ್ಕೆ ಹತ್ತಿರುವ ಪಿಡುಗನ್ನು ತೊಡೆದುಹಾಕಲು ಸಾಧ್ಯವಿದೆ. ಪ್ರಗತಿಪರ ಧೋರಣೆಗಳಿಗೆ ಹೆಸರುವಾಸಿಯಾಗಿದ್ದ ಈ ಮಠ ಇತ್ತೀಚೆಗೆ ಇತ್ಯಂತ ಪ್ರತಿಗಾಮಿ ದಾರಿಯಲ್ಲಿ ಸಾಗುತ್ತಿರುವುದು ವಿಷಾದದ ಸಂಗತಿ. ಸಮಾಜ ಸುಧಾರಕ ಬಸವಣ್ಣನವರ ತತ್ವಗಳನ್ನು ಪ್ರತಿಪಾದಿಸಬೇಕಾದ ಕ್ಷೇತ್ರದಲ್ಲಿ ಇಂದು ಪ್ರತಿಗಾಮಿ ಶಕ್ತಿಗಳು ಆಶ್ರಯಪಡೆದಿವೆ. ವೀರಶೈವರಿಗಿಂತಲೂ ಹೆಚ್ಚಾಗಿ ನಕಲಿ ಹೆಂಡದ ದೊರೆಗಳು ಮಠವನ್ನು

ಪುಟ 9 ಕ್ಕೆ



ಗೋಲಿಬಾರ್
ಗೋಲಿಬಾರ್...
ಆದರೂ ಪುಂಡರದ್ದೇ ದರ್ಬಾರು.



ಅಯೋಧ್ಯೆಯಿಂದ ಅಹಮದಾಬಾದ್

ಫ್ಯಾಸಿಸ್ಟರ ಪಥಸಂಚಲನ....

ಭಾರತವನ್ನು ಫ್ಯಾಸಿಸ್ಟ್ ಹಿಂದೂರಾಷ್ಟ್ರವನ್ನಾಗಿ ಮಾಡುವ ಭಯಂಕರ ಯೋಜನೆಯನ್ನು ಹೊಂದಿರುವ ಆರ್‌ಎಸ್‌ಎಸ್ ಈ ದಶಕದಲ್ಲಿ ಮಾಡಿದ ಅನಾಹುತಗಳೇನು? ಎಂಬ ಅವಲೋಕನವಿಲ್ಲಿದೆ.

ಈ ದಶಕ ಅಲ್ಲೋಲಕಲ್ಲೋಲದ ದಶಕವಾಗಿತ್ತು. ಬಾಬ್ರಿ ಮಸೀದಿ ಕೆಡವಿದ ನಂತರದ ಹತ್ತು ವರ್ಷಗಳು ಅದು ಬರಿಯ ಕೋಮುವಾದಿ ಉದ್ರೇಕದ ಜನಜಂಗುಳಿ ಎಸಗಿದ ಕುಕೃತ್ಯವಾಗಿರಲಿಲ್ಲ ಎಂದು ರುಜುವಾತು ಪಡಿಸಿವೆ - ಯಾರಿಗಾದರೂ ರುಜುವಾತು ಬೇಕಿದ್ದರೆ ಆಧುನಿಕ ಪ್ರಜಾಸತ್ತಾತ್ಮಕ ಭಾರತವನ್ನು ಫ್ಯಾಸಿಸ್ಟ್ 'ಹಿಂದೂರಾಷ್ಟ್ರ' ವಾಗಿ ಮಾರ್ಪಾಡು ಮಾಡುವ ಸೈದ್ಧಾಂತಿಕ ಪ್ರಾಜೆಕ್ಟ್‌ನ ಆರಂಭವಾಗಿತ್ತಷ್ಟೇ ಎಂಬುದು ಈ ದಶಕದ ಅನುಭವ.

ಬಿಜೆಪಿ-ನಾಯಕತ್ವದ ಕೂಟ 1998 ರ ನಂತರ, ಅಧಿಕಾರ ವಹಿಸಿಕೊಂಡ ಮೇಲಂತೂ ಈ ಭಯಾನಕ ಅಜೆಂಡಾ ನಮ್ಮ ಮುಂದೆ ಬಿಚ್ಚಿಕೊಳ್ಳಹತ್ತಿದೆ. ಮಸೀದಿಯನ್ನು ಧ್ವಂಸ ಮಾಡಿದ ಪಿತೂರಿಯ ಪ್ರಕರಣದಲ್ಲಿ ಆಪಾದಿತರಾಗಿರುವ ಎಲ್.ಕೆ.ಅಡ್ವಾಣಿ, ಮುರುಳಿ ಮನೋಹರ ಜೋಶಿ, ಉಮಾಭಾರತಿ ಮತ್ತು ಇತರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಂತೆ ಕಾನೂನು ಕ್ರಮಗಳನ್ನು ತಿರುಚಿರುವುದು ಇದಕ್ಕೆ ನೇರ ಪುರಾವೆ. ರಾಯಬರೇಲಿ ವಿಶೇಷ ಕೋರ್ಟಿನಲ್ಲಿ ಪುನಃ ವಿಚಾರಣೆ ಆರಂಭಿಸಬೇಕು ಎಂಬ ಇತ್ತೀಚಿನ ಸುಪ್ರೀಂ ಕೋರ್ಟ್‌ನ ತೀರ್ಪು, ನ್ಯಾಯಕ್ಕೆ ಹತ್ತು



ಫ್ಯಾಸಿಸ್ಟರು ನಡೆದಾಡಿದಲ್ಲಿ ಮಾನವೀಯತೆ ಕೊನೆಯುಸಿರೆಳೆಯುತ್ತದೆ.

ವರ್ಷಗಳ ವಿಳಂಬವನ್ನು ಈಗಾಗಲೇ ತಿಂದಿದೆ.

'ಫ್ಯಾಸಿಸ್ಟ್ ಹಿಂದೂ ರಾಷ್ಟ್ರ' ಕಟ್ಟುವಲ್ಲಿ ಸಂಘ ಪರಿವಾರ ನಾಜೀ ಮಾದರಿಯ ಪ್ರಚಾರ ವೈಖರಿ ಬಳಸಿಕೊಳ್ಳುತ್ತಿದೆ. 'ಹಿಂದೂ ಐಕ್ಯತೆ' 'ಹಿಂದೂ ಶ್ರೇಷ್ಟತೆ' ಜತೆಗೆ ಮುಸ್ಲಿಂ-ಕ್ರಿಶ್ಚಿಯನ್ನರ ವಿರುದ್ಧ ದ್ವೇಷ ಅದರ ಆಯುಧ. ಹಿಂದೂ ರಾಷ್ಟ್ರದ ಸೈದ್ಧಾಂತಿಕ ಅಡಿಪಾಯ ಹಾಕಿದವರು 1920 ರ ದಶಕದಲ್ಲಿ ಸಾವರಕರ್ - 1925 ರಲ್ಲಿ ಅದು ಆರೆಸ್ಸೆಸ್‌ನಲ್ಲಿ ಸಂಘಟಿತ ರೂಪ ಪಡೆಯಿತು. 1939 ರಲ್ಲಿ ಆರೆಸ್ಸೆಸ್ ನಾಯಕ ಎಂ.ಎಸ್. ಗೋಲ್ವಾಲ್‌ಕರ್ ಈ ಫ್ಯಾಸಿಸ್ಟ್ ಅಜೆಂಡಾದ ಬಗ್ಗೆ ಇಟ್ಟ ಕಾರ್ಯಕ್ರಮ ಈಗಲೂ ಸಂಘ ಪರಿವಾರದ ಸ್ಫೂರ್ತಿ. ಫ್ಯಾಸಿಸಂ ಬಗ್ಗೆ ಅಂತರ್ರಾಷ್ಟ್ರೀಯ ಅನುಭವವನ್ನು ತಿಳಿ ಹೇಳಿದ ಮಹಾನ್ ಕಮ್ಯುನಿಸ್ಟ್ ನಾಯಕ ಜಾರ್ಜ್ ಡಿಮಿಟ್ರೋವ್‌ನ ವಿಚಾರಣೆಗಳ ಅನುಗುಣವಾಗಿ 'ಹಿಂದೂರಾಷ್ಟ್ರ' ವಾದಿಗಳು ವರ್ತಿಸುತ್ತಿದ್ದಾರೆ.

ತಾನೇ ಅತ್ಯಂತ ಭ್ರಷ್ಟ-ನೀಚ ವ್ಯಕ್ತಿಗಳ ಸಂಗಮವಾಗಿದ್ದು, ಸ್ವಚ್ಛ ಸರ್ಕಾರದ ಬಗ್ಗೆ ಘೋಷಣೆ ಕೊಡುತ್ತದೆ. ಫ್ಯಾಸಿಸಂ ಎಂದಿದ್ದರು ಡಿಮಿಟ್ರೋವ್. ಪ್ರತಿ ದೇಶಕ್ಕೆ ಅನುಗುಣವಾಗಿ ಫ್ಯಾಸಿಸ್ಟ್ ತನ್ನ ಘೋಷಣೆ ರೂಪಿಸುತ್ತದೆ. ಪುಟ್ಟ ಬಂಡವಾಳಶಾಹಿ ಮತ್ತು ದುಡಿಯುವ ವರ್ಗದ ಒಂದು ವಿಭಾಗ ಸಹ ಅದರಿಂದ ಪ್ರಚಾರಕ್ಕೆ ಮಾರು ಹೋಗುತ್ತದೆ ಇದಕ್ಕೆ ಕಾರಣ ಅಭದ್ರತೆ, ನಿರುದ್ಯೋಗ, ಆರ್ಥಿಕ ಸಂಕಷ್ಟಗಳು. 'ಸ್ವಚ್ಛ ಆಡಳಿತ'ದ ಭರವಸೆ ಕೊಟ್ಟು ಸ್ವತಂತ್ರ ಭಾರತದ ಇತಿಹಾಸದಲ್ಲೇ ಅತ್ಯಂತ 'ಭ್ರಷ್ಟ ಮತ್ತು ನೀಚ' ಸರ್ಕಾರವನ್ನು ಬಿಜೆಪಿ ಕೊಟ್ಟಿದೆ ಎಂದು ಎಲ್ಲರಿಗೂ ತಿಳಿದದ್ದೇ.


ಫ್ಯಾಸಿಸ್ಟರು ಆಳುವ ವರ್ಗದ ಅತ್ಯಂತ ಪ್ರತಿಗಾಮೀ ವಿಭಾಗದ ಜತೆ ಶಾಮೀಲಾಗಿರುತ್ತಾರೆ. ಆದರೂ ಆಳುವ ವರ್ಗದ ಹಳೆಯ ಪಕ್ಷಗಳನ್ನು ದೂಷಿಸುವ ಮೂಲಕ ಜನರನ್ನು ತನ್ನತ್ತ ಸೆಳೆದುಕೊಳ್ಳುತ್ತಾರೆ. ಬಿಜೆಪಿ ಸರ್ಕಾರ ಗುತ್ತೇದಾರಿ ಬಂಡವಾಳ ಮತ್ತು ಸಾಮ್ರಾಜ್ಯಶಾಹಿಯ ಅತ್ಯಂತ ಪ್ರಬಲ ಬೆಂಬಲಿಗನಾಗಿದೆ. ದೇಶದ ಆರ್ಥಿಕ ಸಾರ್ವಭೌಮತ್ವ ನಾಶ ಮಾಡಿ, ಅಮೆರಿಕದ ಬಾಲಂಗೋಚಿ ಮಾಡಿದೆ. ಆದರೂ ತಾವು ಜನಪರ ಎಂದು ಸೋಗು ಹಾಕಿ ನಂಬಿಸುತ್ತಾರೆ. ಫ್ಯಾಸಿಸ್ಟ್ ಪ್ರಾಜೆಕ್ಟ್ ಮುಂದಕ್ಕೆ ಒಯ್ಯಲು ಶಿಕ್ಷಣ ವ್ಯವಸ್ಥೆಯನ್ನು 'ಕೇಸರೀಕರಣ' ಗೊಳಿಸುತ್ತಿದೆ. ಸ್ಕೂಲ್ ಪಠ್ಯ ಪುಸ್ತಕಗಳಲ್ಲಿ ಕೋಮುವಾದಿ ಪೂರ್ವಗ್ರಹ, ಸುಳ್ಳಿನ ಕಂತೆಗಳನ್ನು ಸೇರಿಸಲಾಗುತ್ತಿದೆ.

'ಹಿಂದೂ ರಾಷ್ಟ್ರ' ವಾದಿಗಳಿಗೆ ಆರ್ಯರು

ಪುಟ 9 ಕ್ಕೆ

ಬಾಬ್ರಿ ಮಸೀದಿ ಮತ್ತು ಇಬ್ಬರು ಪ್ರಧಾನಿಗಳು!

ಬಾಬ್ರಿ ಮಸೀದಿಯ ವಿನಾಶದ ವಿಚಾರಣೆ ನಡೆಸುತ್ತಿರುವ ಲಿಬರ್‌ಹಾನ್ ಆಯೋಗದ ಮುಂದೆ ಸಿಪಿಐ(ಎಂ)ನ ಹಿರಿಯ ನಾಯಕ ಕಾಮ್ರೇಡ್ ಜ್ಯೋತಿಬಸು ನೀಡಿದ ಹೇಳಿಕೆ ಇಲ್ಲಿದೆ.




ಕಮಿಷನ್ ಮುಂದೆ ಹಾಜರಾಗಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಬಾಬ್ರಿ ಮಸೀದಿಯ ವಿನಾಶಕ್ಕೆ ಸಂಬಂಧಪಟ್ಟಂತೆ ಕೆಲವು ಅಂಶಗಳನ್ನು ಕಮಿಷನ್‌ನ ಗಮನಕ್ಕೆ ತರಲು ನಾನು ಬಯಸುತ್ತೇನೆ.

ಅಯೋಧ್ಯೆಯಲ್ಲಿ ಕರಸೇವಕರು ಬಾಬ್ರಿ ಮಸೀದಿಯ ಮೇಲೆ ಧಾಳಿ ಮಾಡುತ್ತಾರೆ ಎಂಬ ವರದಿಗಳು ಬರುತ್ತಿದ್ದವು ನವೆಂಬರ್ 23(1992) ರಂದು ಆಗಿನ ಪ್ರಧಾನಿ ನರಸಿಂಹ ರಾವ್ ರಾಷ್ಟ್ರೀಯ ಐಕ್ಯತಾ ಮಂಡಳಿ ಸಭೆ ಕರೆದರು. ಸಿಪಿಐ(ಎಂ) ಪರವಾಗಿ ಹರಿಕಿಶನ್ ಸಿಂಗ್ ಸುರ್ಜಿತ್ ಮತ್ತು ನಾನು ಭಾಗವಹಿಸಿದೆವು. ಬಿಜೆಪಿಯಿಂದ ಯಾರೂ ಆ ಸಭೆಯಲ್ಲಿ ಭಾಗವಹಿಸಲಿಲ್ಲ. ಮಸೀದಿಯನ್ನು ರಕ್ಷಿಸಲು ಯಾವುದೇ ಅಗತ್ಯ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ಪ್ರಧಾನಿಗೆ ಅಧಿಕಾರ ನೀಡಿತು. ನಮ್ಮ ಪಕ್ಷದ ಪರವಾಗಿ (ನಾವು ಸಾಮಾನ್ಯವಾಗಿ ವಿರೋಧಿಸುವ) ಕಲಮು 365 ಬಳಸಿ ರಾಜ್ಯ ಸರ್ಕಾರವನ್ನು ವಜಾ ಮಾಡಬೇಕು - ಅಗತ್ಯ ಬಿದ್ದರೆ - ಎಂದೂ ಹೇಳಿದೆವು.

ಬಾಬ್ರಿ ಮಸೀದಿ ವಿನಾಶದ ಎರಡು ದಿನ ಮೊದಲು ಅಂದರೆ ಡಿಸೆಂಬರ್ 4, 1992 ರಂದು ನಾನು ಪ್ರಧಾನಿಗೆ ಫೋನ್ ಮಾಡಿದೆ. ಬಾಬ್ರಿ ಮಸೀದಿಯ ಮೇಲೆ ಧಾಳಿ ನಡೆಯಲಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ, ಅದನ್ನು ರಕ್ಷಿಸಲು ಕಠಿಣ ಕ್ರಮ ಕೈಗೊಳ್ಳಬೇಕೆಂದು ಕೋರಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಲಿದೆ ಎಂದರು ಪ್ರಧಾನಿ. ಆದರೆ ಆಮೇಲೆ ಏನಾಯಿತು ನಿಮಗೆ ಗೊತ್ತಿದೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಕಲ್ಯಾಣಸಿಂಗ್ ಆತನ ಸರ್ಕಾರ ವಜಾ ಆದ ಮೇಲೆ ಕಲ್ಕತ್ತೆಗೆ ಬಂದಿದ್ದರು - ಫೆಬ್ರವರಿ 2, 1993 ರಂದು. ಕಲ್ಕತ್ತೆಯಲ್ಲಿ ಕಲ್ಯಾಣಸಿಂಗ್ ಮಾಡಿದ ಭಾಷಣವನ್ನು ಪೋಲೀಸರು ರೆಕಾರ್ಡ್ ಮಾಡಿದ್ದರು. ಹಿಂದೀಯ ಮೂಲಭಾಷಣ ಮತ್ತು ಅದರ ಇಂಗ್ಲೀಷ್ ಭಾಷಾಂತರ ಎರಡೂ ನನ್ನ ಬಳಿ ಇದೆ. ಇವೆರಡನ್ನೂ ನಾನು ಕಮಿಶನ್‌ಗೆ ಕೊಡಬಯಸುತ್ತೇನೆ. ಬಾಬ್ರಿ ಮಸೀದಿ ಧ್ವಂಸದ ಬಗ್ಗೆ ಹೇಳುವ ಕಲ್ಯಾಣ ಸಿಂಗ್ ಭಾಷಣದ ಅಂಶಗಳತ್ತ ನಿಮ್ಮ ಗಮನ ಸೆಳೆಯಬಯಸುತ್ತೇನೆ.



ಆ ಬಗ್ಗೆ ಕಲ್ಯಾಣ ಸಿಂಗ್ ಹೇಳುತ್ತಾರೆ -

"ನಾನು ನಿಮಗೆ ಹೇಳಬಯಸುತ್ತೇನೆ, ನನಗೆ ಈ ಬಗ್ಗೆ ಯಾವುದೇ ಪಶ್ಚಾತ್ತಾಪವಿಲ್ಲ. ಯಾವುದೇ ಪಾಪಪ್ರಜ್ಞೆಯಿಂದ ನಾನು ಬಳಲುತ್ತಿಲ್ಲ. ನಾನೇನೂ ಖಿನ್ನನಾಗಿಲ್ಲ. ಬದಲಾಗಿ ಆ ದಿನ ಚಾರಿತ್ರಿಕ ದಿನವಾಗಿತ್ತೆಂದು ನಾನು ಘೋಷಿಸಬಯಸುತ್ತೇನೆ. ನನ್ನ ಪ್ರೀತಿಯ ಮಿತ್ರರೇ, ನಿಮಗೆ ನಾನು ಹೇಳಬಯಸುತ್ತೇನೆ. ದೇವರ ದಯವಿಲ್ಲದೆ ಈ ವಿನಾಶದ ಅಗಾಧ ಕೆಲಸ ಯಾವುದೇ ಸ್ಫೋಟಕ ಬಳಸದೆ ಕೇವಲ ಐದು ಗಂಟೆಗಳಲ್ಲಿ ಸಾಧ್ಯವಿರಲಿಲ್ಲ. ಯಾವುದೇ ಲೇಬರ್ ಕಂಟ್ರಾಕ್ಟರ್‌ಗೆ ಈ ಕೆಲಸ ಒಪ್ಪಿಸಿದ್ದರೂ ಕನಿಷ್ಟ ಒಂದೂವರೆ ತಿಂಗಳು ಹಿಡಿಯುತ್ತಿತ್ತು - ಆನಂತರ ಕಸ ಗುಡಿಸಿ ಸ್ವಚ್ಛ ಮಾಡುವುದೂ ಸೇರಿ. ಡಿಸೆಂಬರ್ 6, 1992 ರ ನಂತರ ಒಂದು ಹೊಸ ಭಾರತದ ಯುಗ ಆರಂಭವಾಗಿದೆ. ಅದಕ್ಕೆ ಉಜ್ವಲ ಭವಿಷ್ಯವಿದೆ. ಈ ಕಟ್ಟಡದ ವಿನಾಶ (ಕೆಲವು ಜನ ಇದನ್ನು ರಾಷ್ಟ್ರೀಯ ನಾಚಿಕೆಗೇಡು ಎಂದು ಕರೆದಿದ್ದರೂ) ರಾಷ್ಟ್ರಕ್ಕೆ ಹೆಮ್ಮೆಯ ವಿಷಯವಾಗಿದೆ"

> ವಿರೋಧ ಪಕ್ಷಗಳಲ್ಲಿ ಅತಿದೊಡ್ಡ ಜಾತ್ಯಾತೀತ ಪಕ್ಷವಾದ ಕಾಂಗ್ರೆಸ್(ಐ) ಗೆ ಇನ್ನೂ (ಬಾಬ್ರೀ ಮಸೀದಿ ವಿನಾಶದಲ್ಲಿ ತನ್ನ ಪಾತ್ರದಬಗ್ಗೆ) ಸ್ವಯಂ ಟೀಕೆ ಮಾಡಿಕೊಳ್ಳಬೇಕು ಎಂಬ ಅರಿವಾಗಿಲ್ಲ. ಕೋಮುವಾದಿ ಮತ್ತು ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಸೈದ್ಧಾಂತಿಕ ಸಮರದ ಅಗತ್ಯವನ್ನು ಅದು ಇನ್ನೂ ಕಂಡುಕೊಂಡಿಲ್ಲ.
>
> **- ಜ್ಯೋತಿ ಬಸು,**
> ಮಾಜಿ ಮುಖ್ಯ ಮಂತ್ರಿ
> ಪಶ್ಚಿಮಬಂಗಾಳ

ಡಿಸೆಂಬರ್ 1993 ರಂದು ಸುರ್ಜಿತ್ ಮತ್ತು ನಾನು ಪ್ರಧಾನಿ ನರಸಿಂಹರಾವ್‌ರನ್ನು ಭೇಟಿ ಮಾಡಿ, ಯಾವುದೇ ಕ್ರಮ ಏಕೆ ಕೈಗೊಳ್ಳಲಿಲ್ಲವೆಂದು ಕೇಳಿದೆ. "ಮಸೀದಿಗೆ ಯಾವುದೇ ಧಕ್ಕೆ ಆಗುವುದಿಲ್ಲವೆಂದರು. ಒಬ್ಬ ಮುಖ್ಯಮಂತ್ರಿ ಪ್ರಮಾಣ ಮಾಡಿ ಹೇಳಿ ಭರವಸೆ ಕೊಡುವಾಗ ನಾನು ಆತನನ್ನು ಹೇಗೆ ನಂಬದಿರಲಿ?" ಎಂಬುದು ಅವರ ಉತ್ತರವಾಗಿತ್ತು. ಆ ಕಲ್ಯಾಣಸಿಂಗ್ ಭಾಷಣದ ಕ್ಯಾಸೆಟ್ ಹಾಕಿ ನಾನು ಈಗ ನಿಮಗೆ ಹೇಳಿದ ಭಾಗ ಅವರಿಗೆ ಆಲಿಸಲು ಹೇಳಿದೆ. ಪ್ರಧಾನಿ ನರಸಿಂಹರಾವ್‌ಗೆ ಅದು ಕೇಳಿಸಿತೋ ಗೊತ್ತಾಗಿಲ್ಲ.

ಈಗಿನ ಪ್ರಧಾನಿ ವಾಜಪೇಯಿಯವರನ್ನು ಮಾರ್ಚ್ 20, 1999 ರಂದು ನಾನು ಕಲ್ಕತ್ತೆಯಲ್ಲಿ ಭೇಟಿ ಆದೆ. ಬಿಜೆಪಿ ಬರ್ಬರ ಮತ್ತು ಅನಾಗರಿಕ ಎಂದು ನಾನು ಬಣ್ಣಿಸಿದ್ದರ ಬಗ್ಗೆ ಕಾರಣ ಕೇಳಿದರು ವಾಜಪೇಯಿ. ನಾನು ಯಾರ ಬಗ್ಗೆಯೂ ಸಾಮಾನ್ಯವಾಗಿ ಇಂತಹ ಭಾಷೆ ಬಳಸುವುದಿಲ್ಲ. ಆದರೆ ಬಾಬ್ರಿ ಮಸೀದಿ ಕೆಡವಿದ್ದು ಬರ್ಬರ ಮತ್ತು ಅನಾಗರಿಕ ಎಂಬುದರ ಬಗ್ಗೆ ಸಂಶಯ ಇದೆಯೇ? ಇಂತಹ ಕೃತ್ಯ ಯಾಕೆ ನಡೆಯಿತು ಮತ್ತು ಆ ಬಗ್ಗೆ ಎಂತಹ ಭಾಷೆ ಬಳಸಬೇಕು ಎಂದು ವಾಜಪೇಯಿಯವರನ್ನು ಕೇಳಿದೆ "ಅದೊಂದು ಆಕಸ್ಮಿಕವಾಗಿತ್ತು. ಅದು ಸಂಘಟಿತ ಕೃತ್ಯವಾಗಿರಲಿಲ್ಲ" ಎಂದರು ಈ ಪ್ರಧಾನಿ. ನಾನು ಅವರಿಗೂ ಕಲ್ಯಾಣಸಿಂಗ್ ಕಲ್ಕತ್ತಾ ಭಾಷಣದ ಬಗ್ಗೆ ಹೇಳಿದೆ. ವಾಜಪೇಯಿ ಸುಮ್ಮನಾದರು. ಈಗ ಆತ ಸಾರ್ವಜನಿಕವಾಗಿ ಬೇರೆ ಹೇಳುತ್ತಿದ್ದಾರೆ "ರಾಷ್ಟ್ರೀಯ ಭಾವನೆಯ ಅಭಿವ್ಯಕ್ತಿ"ಅಂತೆ.

ನಾವು ಕಮಿಶನ್‌ನ ತೀರ್ಮಾನಗಳಿಗೆ ಕಾದಿದ್ದೇವೆ.

ಹುಬ್ಬಳ್ಳಿ ನಗರಕ್ಕೆ ಇಟ್ಟರೋ ಕೊಳ್ಳಿ....

ಪುಟ 7 ರಿಂದ

ಮರುದಿನ ಪ್ರಕ್ಷುಬ್ಧ ವಾತಾವರದಲ್ಲಿ, ಬಿಗಿ ಭದ್ರತೆಯಲ್ಲಿ ಕಡಗದ ಅಂತ್ಯಕ್ರಿಯೆ ನಡೆಯಿತು. ಭಜರಂಗದಳದ ಪ್ರಮೋದ ಮುತಾಲಿಕ, ಬಿಜೆಪಿಯ ಮಾಜಿ ಶಾಸಕ ಅಶೋಕ ಕಾಟವೆ ಮೊದಲಾದವರು ಭಾಗವಹಿಸಿದ್ದರು. ಕೊಲೆಯ ಆರೋಪದ ಮೇಲೆ 8 ಜನ ಮುಸ್ಲಿಂ ಯುವಕರನ್ನು ಮತ್ತು ಗಲಭೆಗೆ ಸಂಬಂದಿಸಿ 25 ಜನರನ್ನು ಬಂಧಿಸಲಾಗಿದ್ದರೂ ಇವರೊಳಗೆ ನಿಜವಾದ ಅಪರಾಧಿಗಳು ಯಾರು ಎಂದು ಗುರುತಿಸುವ ಕೆಲಸ ಆಗಬೇಕಾಗಿದ್ದು ಅಮಾಯಕರನ್ನೂ ಬಿಡುಗಡೆ ಮಾಡಬೇಕಾಗಿತ್ತು.

ಇಷ್ಟೊಂದು ಪ್ರಕ್ಷುಬ್ದಗೊಂಡ ನಗರದಲ್ಲಿ ವಿಜಯದಶಮಿ ಅಂಗವಾಗಿ ಆರ್.ಎಸ್.ಎಸ್. ಪಥ ಚಲನಕ್ಕೆ ಅವಕಾಶ ನೀಡಲಾಗಿದೆ. ಪಥಚಲದಲ್ಲಿ ಅನಗತ್ಯವಾಗಿ ಪಾಕಿಸ್ತಾನದ ವಿರುದ್ಧ ಘೋಷಣೆ ಕೂಗಲಾಗಿದೆ. ಮರೆವಣಿಗೆ ಹಳೆ ಹುಬ್ಬಳ್ಳಿ ದುರ್ಗದ ಬೈಲಿಗೆ ಬಂದಾಗ ಅವರ ಮೇಲೆ ನಾಲ್ಕೈದು ಕಲ್ಲುಗಳು ಬಿದ್ದಿವೆ. ಅನಂತರದ ಸಭೆಯಲ್ಲಿ ಭಾಷಣಕಾರರು ಅಲ್ಪಸಂಖ್ಯಾತರ ವಿರುದ್ಧ ಮಾಮೂಲಿಯಂತೆ ಪ್ರಚೋದನಾಕಾರಿ ಭಾಷಣಗಳನ್ನು ಮಾಡಿದ್ದಾರೆ.

ಇತ್ತೀಚೆಗೆ ಸ್ಮಶಾನ ಗೋಡೆ ನಿರ್ಮಾಣದ ವಿವಾದವು ನಗರದಲ್ಲಿ ಮತ್ತೊಮ್ಮೆ ಉದ್ರಿಕ್ತ ಸ್ಥಿತಿಯನ್ನು ಉಂಟುಮಾಡಿತು. ಅಂಜುಮನ್ ಸಂಸ್ಥೆ ಮಹಾನಗರ ಪಾಲಿಕೆಯ ಅನುಮತಿ ಪಡೆದು ಸ್ಮಶಾನದ ಸುತ್ತ ಗೋಡೆ ನಿರ್ಮಾಣವನ್ನು ಕೈಕೊಂಡಾಗ ರಸ್ತೆ ಅಗಲೀಕರಣಕ್ಕೆ ಜಾಗ ಬಿಡದೆ ಗೋಡೆ ನಿರ್ಮಿಸುತ್ತಿದ್ದಾರೆ ಎಂದು ಬಿಜೆಪಿ, ವಿ.ಎಚ್.ಪಿ. ಹಾಗೂ ಭಜದಳದವರು ಹುಯ್ಯಲೆಬ್ಬಿಸಿದರು. ಕೊನೆಗೆ ಅಂಜುಮನ್ ಪದಾಧಿಕಾರಿಗಳು ರಸ್ತೆಯ ಪಕ್ಕ 3 ಅಡಿ ಗಟಾರ ಮತ್ತು 5 ಅಡಿ ರಸ್ತೆಗೆ ಬಿಟ್ಟು ಗೋಡೆ ಕಟ್ಟಲು ನಿರ್ಧರಿಸುವ ಮೂಲಕ ವಿವಾದಕ್ಕೆ ಸೌಹಾರ್ದ ಪರಿಹಾರ ದೊರಕಿಸಿದರು.


ಮೂಜಗಂ

ಇವೆಲ್ಲವುಗಳ ಹಿನ್ನೆಲೆಯಲ್ಲಿ ಮತ್ತೆ ನವೆಂಬರ್ 20 ರಂದು ಪೆಡಾರಗಲ್ಲಿಯಲ್ಲಿ ದ್ವನಿವರ್ಧಕ ಬಳಕೆಯ ನೆಪದಲ್ಲಿ ಮತ್ತೊಮ್ಮೆ ಗಲಭೆ ನಡೆದು, ನಗರಕ್ಕೆ ಶಾಂತಿ ಮರಳುವುದೇ ಸಾಧ್ಯವಿಲ್ಲ ಎಂಬ ಅತ್ಯಂತ ಅಪಾಯಕಾರಿ ತೀರ್ಮಾನಕ್ಕೆ ಹುಬ್ಬಳ್ಳಿ ನಗರವಾಸಿಗಳು ಬರುವಂತಾಗಿದೆ.

ಹುಬ್ಬಳ್ಳಿಯವರು ಎದ್ದೇಳಬೇಕು : ಹುಬ್ಬಳ್ಳಿಯ


ದಳ್ಳುರಿಯ ನಡುವೆ ಸೌಹಾರ್ದತೆಯ ಸಿಂಚನ

ಸೌಹಾರ್ದ ರ್‍ಯಾಲಿಯಲ್ಲಿ ಸುಭಾಷಿಣಿ ಅಲಿ ಮುಂತಾದವರು...

ಗಲ್ಲಿಗಳಲ್ಲಿ ಮೊಹಲ್ಲಾಗಳಲ್ಲಿ ಶಾಂತಿ ಮರಳುವಂತೆ ಮಾಡುವಲ್ಲಿ ಮಠಾಧಿಪತಿಗಳು, ಸಮಾಜದ ಗಣ್ಯರು, ರಾಜಕೀಯ ಪಕ್ಷಗಳು ವಿಫಲವಾಗಿರುವಾಗ ನಗರದಲ್ಲಿ ಶಾಂತಿಯನ್ನು ಬಯಸುವ ಎಲ್ಲಾ ಕೋಮುಗಳ ಜನಗಳು ಎದ್ದೇಳಬೇಕು. ಹುಬ್ಬಳ್ಳಿಯ ಹಿಂದೂಗಳೆಲ್ಲರು ಪ್ರಮೋದ ಮುತಾಲಿಕ್ ಬ್ರಾಂಡಿನ ಆಕ್ರಮಣಕಾರಿ ಹಿಂದುತ್ವವನ್ನು ಒಪ್ಪಿಕೊಂಡವರಲ್ಲ. ನಗರದಲ್ಲಿ ನೆಮ್ಮದಿಯನ್ನು ಹಾಳುಮಾಡುತ್ತಾ ಬಂದಿರುವ ಶಕ್ತಿಗಳ ವಿರುದ್ಧ ದ್ವನಿಎತ್ತಲು ಮುಂದಾಗಬೇಕು. ಮೌನ ಅವರ ಪುಂಡಾಟಿಕೆಗೆ ಸಮ್ಮತಿ ಎಂದಾಗಬಾರದು. ಯುವಕರು ಇಂತಹ ಗಲಭೆಕೋರ ಗುಂಪುಗಳಲ್ಲಿ ಸೇರ್ಪಡೆಯಾಗದಂತೆ ಎಚ್ಚರ ವಹಿಸಬೇಕು. ಹುಬ್ಬಳ್ಳಿಯ ವ್ಯಾಪಾರಸ್ಥರು, ಉದ್ದಿಮೆದಾರರು ನಗರದಲ್ಲಿ ಗಲಭೆಗಳನ್ನು ಹುಟ್ಟುಹಾಕಲೆಂದೇ ಹುಟ್ಟಿಕೊಂಡಿರುವ ಸಂಘಟನೆಗಳಿಗೆ ಆರ್ಥಿಕ ನೆರವು ನೀಡುವುದನ್ನು ಕಡ್ಡಾಯವಾಗಿ ನಿಲ್ಲಿಸಬೇಕು.

ನಗರದ ಮುಸ್ಲಿಂ ಸಮುದಾಯವೂ ಸಹ ಸಹನೆ ಕಳೆದುಕೊಳ್ಳುತ್ತಿರುವಂತೆ ತೋರುತ್ತಿದೆ. ಮುಸ್ಲಿಂ ಯುವಕರೂ ಸುಲಭವಾಗಿ ಪ್ರಚೋದನೆಗೆ ಒಳಗಾಗುವುದು ಕಂಡುಬರುತ್ತಿದೆ. ಅವರ ನಡುವೆ ಮತಾಂದ ಶಕ್ತಿಗಳ ಪ್ರಭಾವ ಹೆಚ್ಚತೊಡಗಿದೆ. ಇದು ಒಳ್ಳೆಯ ಬೆಳವಣಿಗೆಯಾಗದು. ಜಾತ್ಯಾತೀತ ನೆಲೆಯಲ್ಲಿ ಅವರು ಒಂದುಗೂಡುವುದು ಇಂದಿನ ಅಗತ್ಯ.

ನಗರದಲ್ಲಿ ಎಡ ಶಕ್ತಿಗಳ ಬಲಹೀನತೆಯೂ ಪರಿಸ್ಥಿತಿ ಇಷ್ಟು ಹದಗೆಡಲು ಒಂದು ಕಾರಣವಾಗಿದೆ. 80ರ ದಶಕದಲ್ಲಿ ನಗರದಲ್ಲಿ ಎಡ ಶಕ್ತಿಗಳ ಬಲ ಈಗ ಸೊರಗಿದೆ. ಸಿಪಿಐ ಒಂದು ಕೋಮಿನ ಜೊತೆಯಲ್ಲಿ ಗುರುತಿಸಿಕೊಂಡಂತಾಗಿ ಪ್ರಭಾವವನ್ನು ಕಳೆದುಕೊಂಡಿದೆ. ಕಾರ್ಮಿಕ ಚಳುವಳಿಯನ್ನೇ ಪ್ರಧಾನವಾಗಿ ಅವಲಂಬಿಸಿದ್ದ ಸಿಪಿಐ(ಎಂ) ಪಕ್ಷದ ಮಧ್ಯಪ್ರವೇಶವು ಕಾರ್ಖಾನೆಗಳ ಮುಚ್ಚುವಿಕೆಯಿಂದ ತುಂಬಾ ಕ್ಷೀಣವಾಗಿದೆ. 1995ರಲ್ಲಿ ಈದಗಾ ವಿವಾದವು ಬುಗಿಲೆದ್ದ ದಿನಗಳಲ್ಲಿ ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯು ಹುಬ್ಬಳ್ಳಿಯಲ್ಲಿ ಒಂದು ಬೃಹತ್ ರ್‍ಯಾಲಿಯನ್ನು ಸಂಘಟಿಸಿದನ್ನು ಸ್ಮರಿಸಬಹುದು. ಸಿಪಿಐ(ಎಂ) ಸಂಸತ್ ಸದಸ್ಯೆ ಕಾಮ್ರೆಡ್ ಸುಭಾಷಿಣಿ ಆಲಿ ಅವರು ಈ ರ್‍ಯಾಲಿಯಲ್ಲಿ ಭಾಗವಹಿಸಿ ಇಂದಿರಾ ಗಾಜಿನ ಮನೆಯಲ್ಲಿ ಏರ್ಪಡಿಸಲಾಗಿದ್ದ ಬೃಹತ್ ಬಹಿರಂಗ ಸಭೆಯಲ್ಲಿ ಮಾತನಾಡಿದ್ದರು. ಮೂರುಸಾವಿರ ಮಠಕ್ಕೂ ಬೇಟಿಕೊಟ್ಟ ಕಾಮ್ರೆಡ್ ಸುಭಾಷಿಣಿ ಅವರು ಹುಬ್ಬಳ್ಳಿಯ ಬೆಳವಣಿಗೆಗಳ ಬಗ್ಗೆ ಸ್ವಾಮಿಗಳೊಂದಿಗೆ ತಮ್ಮ ಆತಂಕವನ್ನು ಹಂಚಿಕೊಂಡಿದ್ದರು. ಅನಂತರೂ ಸಹ ಸಿಪಿಐ(ಎಂ) ತನ್ನ ಸೀಮಿತ ಶಕ್ತಿಯನ್ನು ಬಳಸಿಕೊಂಡು ಹುಬ್ಬಳ್ಳಿಯನ್ನು ಇನ್ನೊಂದು ಅಯೋಧ್ಯೆಯನ್ನಾಗಿಸುವ ಹಿಂದುತ್ವ ಶಕ್ತಿಗಳ ದುರಾಲೋಚನೆಯ ವಿರುದ್ಧ ಜನಜಾಗೃತಿ ಮಾಡುತ್ತಾ ಬಂದಿದೆ. 1998ರಲ್ಲಿ ಇನ್ನೊಂದು ಬೃಹತ್ ಕೋಮು ಸೌಹಾರ್ದತಾ ರ್‍ಯಾಲಿಯನ್ನು ನಗರದಲ್ಲಿ ಸಂಘಟಿಸಿದಾಗ ಪಕ್ಷದ ಕೇಂದ್ರ ಸಮಿತಿಯ ಸದಸ್ಯರೂ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಮುಖಂಡರೂ ಆಗಿರುವ ಕಾಮ್ರೆಡ್ ಸುನಿತ್ ಛೋಪ್ರಾ ಅವರು ಪಾಲ್ಗೊಂಡಿದ್ದರು. ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ನಗರವಾಸಿಗಳ ನೆಮ್ಮದಿಗೆ ಸತತವಾಗಿ ಭಂಗ ಉಂಟು ಮಾಡುತ್ತಿರುವ ಶಕ್ತಿಗಳನ್ನು ನಿರ್ಣಾಯಕವಾಗಿ ಹಿಮ್ಮೆಟ್ಟಿಸುವಲ್ಲಿ ಎಲ್ಲಾ ಜಾತ್ಯಾತೀತ, ಪ್ರಗತಿಪರ ಶಕ್ತಿಗಳನ್ನು ಒಗ್ಗೂಡಿಸುವ ಜವಾಬ್ದಾರಿ ಎಡಪಕ್ಷಗಳ ಮೇಲಿದೆ. ವಿದ್ಯಾರ್ಥಿ ಯುವಜನರ ನಡುವೆ ನಡೆಸಬೇಕಾದ ಕೆಲಸಕ್ಕೆ ಆದ್ಯತೆ ನೀಡಬೇಕಾಗಿದೆ. ○

ಭಜರಂಗಿಗಳ ಪಾತ್ರ

ಪುಟ 7 ರಿಂದ

ನಿಯಂತ್ರಿಸುತ್ತಿದ್ದಾರೆ. ಆರ್.ಎಸ್.ಎಸ್. ವಿ.ಎಚ್.ಪಿ. ಭಜರಂಗದಳದ ಸಂಘ ಪರಿವಾರವೇ ಇಲ್ಲಿ ಬಿಡಾರ ಹೂಡಿದೆ. ಮಠದ ಸ್ವಾಮಿಗಳು ತಮ್ಮ ದೌರ್ಬಲ್ಯಗಳನ್ನು ಮರೆಮಾಚಲು ಹಿಂದುತ್ವ ಶಕ್ತಿಗಳ ಮೊರೆಹೋದಂತೆ ಕಾಣುತ್ತದೆ. ದಲಿತರಿಗೆ ಮಠದೊಳಗೆ ಸ್ಥಾನ ಕಲ್ಪಿಸುವ ಇಲಕಲ್ ಮಹಾಂತಸ್ವಾಮಿಗಳಿಗೆ ಇವರು ಹಿಂಸೆಕೊಟ್ಟದ್ದು, ಅಲ್ಪಸಂಖ್ಯಾತ ಮುಸಲ್ಮಾನರಿಗೆ ಮಠದ ಕಾರ್ಯಕ್ರಮಗಳಲ್ಲಿ ಸ್ಥಾನ ಕಲ್ಪಿಸಿದ ಗದಗಿನ ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಗಳನ್ನು ಬಿಜೆಪಿಯ ಸರಿಸದ ಸಂಕೇಶ್ವರ ಪರವಾಗಿ ಖಂಡಿಸಿದ್ದು ಅವರ ವಿಕೃತ ಮನೋಭಾವವನ್ನು ಬಯಲಿಗೆಳೆದಿದೆ. ವಿಶ್ವಶಾಂತಿ ಸಮ್ಮೇಳನಗಳಲ್ಲಿ ಭಾಗವಹಿಸಲು ಮೇಲಿಂದ ಮೇಲೆ ವಿದೇಶಕ್ಕೆ ತೆರಳುವ ಇವರಿಗೆ ತಮ್ಮ ಸ್ವಂತ ಊರಿನಲ್ಲಿ ಶಾಂತಿ ನೆಲೆಸುವಂತೆ ಮಾಡುವುದು ತಮ್ಮ ಜವಾಬ್ದಾರಿ ಎಂಬುದು ಅರ್ಥವಾಗುತ್ತಿಲ್ಲ.

ಈದಗಾ ಮೈದಾನದಲ್ಲಿ ಧ್ವಜಾರೋಹಣ ಮಾಡುವ ಕುರಿತಾದ ವಿವಾದವನ್ನು ಜನತಾದಳ ಸರ್ಕಾರ ಇತ್ಯರ್ಥಮಾಡಿದ್ದರೂ ಮೈದಾನದ ಒಡೆತನದ ಕುರಿತಾದ ವಿವಾದ ಕಳೆದ 30 ವರ್ಷಗಳಿಂದ ಇನ್ನೂ ಇತ್ಯರ್ಥವಾಗದೆ ಉಳಿದುಕೊಂಡು ಬಂದಿದೆ. 1971ರಲ್ಲಿ ಅಂಜುಮನ್ ಸಂಸ್ಥೆಯವರು ಮೈದಾನದ ಒಂದು ಮೂಲೆಯಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಲು ಆರಂಭಿಸಿದನ್ನು ವಿರೋಧಿಸಿ ನ್ಯಾಯಾಲಯದ ಕಟ್ಟೆ ಏರಿದ ಪ್ರಕರಣವು ಈಗ ಸರ್ವೋಚ್ಚ ನ್ಯಾಯಾಲಯದ ಮುಂದೆ ಇದೆ. ಸದರಿ ವಿವಾದವನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸಲು ಸರ್ವೋಚ್ಚ ನ್ಯಾಯಲಯವು


ಖೋಟಾ ದೇಶಭಕ್ತರ ಏಟು -ಲೂಟಿ

ಸೂಚನೆ ನೀಡಿದಾಗ, ಹಿಂದೂ ಹಾಗೂ ಮುಸ್ಲಿಂ ಸಮಾಜದ ಗಣ್ಯರು ಹಾಗೂ ಕೆಲವು ರಾಜಕೀಯ ಪಕ್ಷಗಳ ಮುಖಂಡರನ್ನು ಒಳಗೊಂಡ ಸಮಿತಿಯೊಂದು ಹುಟ್ಟಿ ಕೊಂಡಿತು. ಎರಡೂ ಕಮ್ಯುನಿಸ್ಟ್ ಪಕ್ಷಗಳ ಪ್ರತಿನಿಧಿಗಳನ್ನು ಪ್ರಜ್ಞಾ ಪೂರ್ವಕವಾಗಿ ಸಮಿತಿ ಯಲ್ಲಿ ಸೇರಿಸಿರಲಿಲ್ಲ. ಮೂರುಸಾವಿರ ಮಠದ ಸ್ವಾಮಿಗಳು ಸಮಿತಿಗೆ ಅಧ್ಯಕ್ಷರಾಗಿದ್ದರು. ಎರಡೂ ಕಡೆಯವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲರಾಗಿ ಸ್ವಾಮಿಗಳು ಸಮಿತಿಯ ಅಧ್ಯಕ್ಷ ಸ್ಥಾನವನ್ನು ತ್ಯಜಿಸಿದ್ದಾರೆ. ತದನಂತರ ಎರಡೂ ಕಡೆಯವರೊಂದಿಗೆ ಸಮಾಲೋಚಿಸಿ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸುವ ಜವಾಬ್ದಾರಿಯನ್ನು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ರಾಜ್ಯ ಜಲಸಂಪನ್ಮೂಲ ಸಚಿವರಾದ ಎಚ್.ಕೆ.ಪಾಟೀಲರಿಗೆ ವಹಿಸಿಕೊಟ್ಟು 12 ತಿಂಗಳುಗಳು ಕಳೆದಿವೆ. ಈದಗಾ ಮೈದಾನದಲ್ಲಿರುವ ಆರು ಅಂಗಡಿಗಳನ್ನು ಕೆಡವಿಹಾಕಬೇಕೆಂದು ಬಿಜೆಪಿ ಹಾಗೂ ವಿಶ್ವ ಹಿಂದೂ ಪರಿಷತ್ ಬಿಗಿ ನಿಲುವು ತಾಳಿರುವ ಹಿನ್ನೆಲೆಯಲ್ಲಿ ಸಮಸ್ಯೆ ಸುಲಭವಾಗಿ ಇತ್ಯರ್ಥವಾಗುವ ಲಕ್ಷಣಗಳಿಲ್ಲ. ○

ಫ್ಯಾಸಿಸ್ಟರ ಪಥಸಂಚಲನ....

ಪುಟ 8 ರಿಂದ

ಭಾರತಕ್ಕೆ ಹೊರಗಿನಿಂದ ಬಂದಿದ್ದಲ್ಲ. ಇಲ್ಲಿಯ ಸ್ಥಳೀಯರೇ ಎಂದು ವಾದಿಸದೆ ಉಳಿಗಾಲವಿಲ್ಲ. ಆರ್ಯರು ಮತ್ತು ಹಿಂದೂಗಳೆಲ್ಲ ಒಂದೇ ಎಂದು ಆಚಾರಿತ್ರಿಕವಾಗಿ ಬಿಂಬಿಸಲು ಅದು ಪ್ರಯತ್ನಿಸದೆ ವಿಧಿಯಿಲ್ಲ. ಇಲ್ಲದಿದ್ದರೆ ಮುಸ್ಲಿಮರು, ಕ್ರಿಶ್ಚಿಯನ್ನರು ಹೊರಗಿನವರು ವಿದೇಶಿ ಆಕ್ರಮಣಕಾರು ಎಂದು ವಾದಿಸಲು ಅವಕಾಶವೇ ಇರುವುದಿಲ್ಲವಲ್ಲ. ಹಿಟ್ಲರನ ಪೂರ್ವಜರು ಸೇರಿ ಆರ್ಯರು ಭಾರತದಿಂದ ಯುರೋಪಿಗೆ ಹೋಗಿದ್ದು ಎಂದು ಚರಿತ್ರೆಯನ್ನು ತಿದ್ದಲು ಸಂಘ ಪರಿವಾರ ಶತ ಪ್ರಯತ್ನ ನಡೆಸಿದೆ.

ಕೋಮುವಾದಿ ಉದ್ರೇಕ ಬಡಿದೆಬ್ಬಿಸಿ, ಕೋಮುಗಲಭೆ-ಹಿಂಸಾಚಾರಗಳ ಮೂಲಕ ಕೋಮು-ಧ್ರುವೀಕರಣ ಸಾಧಿಸುವುದು 'ಹಿಂದೂ ರಾಷ್ಟ್ರ'ವಾದಿ ಫ್ಯಾಸಿಸ್ಟರ ಪ್ರಮುಖ ಆಯುಧ. ಸ್ವತಂತ್ರ ಭಾರತದ ಪ್ರತಿಯೊಂದು ಪ್ರಮುಖ ಕೋಮುಗಲಭೆಯ ತನಿಖೆ ಬಗ್ಗೆ ನೇಮಿಸಿದ ಆಯೋಗಗಳು ಆರೆಸ್ಸೆಸ್ ಈ ಎಲ್ಲಾ ಘಟನೆಗಳಲ್ಲಿ ಪ್ರಮುಖ ಅಪರಾಧಿ ಎಂದು ತೀರ್ಪಿತ್ತಿವೆ. ಸಂಘ ಪರಿವಾರದ ಈ ಭಯಾನಕ ಇತಿಹಾಸದಲ್ಲೂ ಕಳೆದ ಹತ್ತು ವರ್ಷಗಳು - ಅದರಲ್ಲೂ ಇತ್ತೀಚಿನ ಗುಜರಾತ್‌ನ ನರಮೇಧ ಅತ್ಯಂತ ಭೀಕರ ಅಧ್ಯಾಯ. 'ಹಿಂದೂ ರಾಷ್ಟ್ರ' ವಾದಿಗಳು ಅಂಧ ರಾಷ್ಟ್ರೀಯವಾದವನ್ನು ಹೊಸ ಆಯುಧವಾಗಿ ಬಳಸುತ್ತಿದ್ದಾರೆ. ಬಾಬ್ರಿ ಮಸೀದಿಯಿಂದ, ಅಣುಸ್ಫೋಟ(ಪ್ರೋಖ್ರಾನ್) ಮತ್ತು ಗುಜರಾತ್ ಹತ್ಯಾಕಾಂಡದ ವರೆಗೆ ಎಲ್ಲವೂ 'ರಾಷ್ಟ್ರೀಯ ಭಾವನೆ'ಗಳಿಂದಾಗಿ ಆಗಿದ್ದು. ಡಿಮಿಟ್ರೋವ್ ಹೇಳಿದಂತೆ ಫ್ಯಾಸಿಸ್ಟರು ಸಾಮ್ರಾಜ್ಯಶಾಹಿಗಳ ಅತ್ಯಂತ ದೊಡ್ಡ ಬಾಲಬಡುಕರಾಗಿದ್ದುಕೊಂಡೆ 'ರಾಷ್ಟ್ರೀಯ ಭಾವನೆ'ಗಳಿಗೆ ಆದ ಗಾಯದ ಬಗ್ಗೆ ಜನರನ್ನು ಬಡಿದೆಬ್ಬಿಸುತ್ತಾರೆ.

ಇಂತಹ 'ಹಿಂದೂ ರಾಷ್ಟ್ರ'ವಾದಿ ಫ್ಯಾಸಿಸ್ಟರ 'ಪಥಸಂಚಲನ' ನಿಲ್ಲಿಸುವುದು ಪ್ರತಿಯೊಬ್ಬ ದೇಶಭಕ್ತನ ಕರ್ತವ್ಯ. ವ್ಯಾಪಕ ರಾಜಕೀಯ ಐಕ್ಯತೆ ಮತ್ತು ಪ್ರಬಲ ಜನತಾ ಚಳುವಳಿಯೊಂದೇ ಈ ಅಪಾಯವನ್ನು ತಡೆ ಹಿಡಿಯಬಲ್ಲದು.

('ಬಾಬ್ರಿ ಮಸೀದಿಯ ನಂತರದ ಹತ್ತು ವರ್ಷಗಳು' ಮೇಲೆ ಪೀಪಲ್ಸ್ ಡೆಮಾಕ್ರಸಿಯ ವಿಶೇಷ ಸಂಚಿಕೆಯ ಸಂಪಾದಕೀಯದ ಸಾರ)

ಐ.ಟಿ. ರಾಜಧಾನಿ ಸಿಲಿಕಾನ್ ವ್ಯಾಲಿಯಲ್ಲಿ ಹಸಿವಿನಿಂದ ಸಾವು, ಹೈಟೆಕ್ ಆಡಳಿತದಲ್ಲಿ ನಿರುದ್ಯೋಗಿಯ ಆತ್ಮಹತ್ಯೆ

ಆತ್ಮಹತ್ಯೆ ಮಾಡಿಕೊಂಡ ಯುವಕ ಇದ್ದ ಉದ್ಯೋಗ ಕಳೆದುಕೊಂಡು ಉದ್ಯೋಗಕ್ಕಾಗಿ ಅಂಡಲೆದು ನಿರಾಶನಾಗಿ ಸಾವಿಗೆ ಶರಣಾದ. ಹೈಟೆಕ್ ರಾಕ್ಷಸರ ಆ ಕುಣಿತದ ಅಬ್ಬರದಲ್ಲಿ.... ಬೆಂಗಾಡಾಗುತ್ತಿರುವ ಬೆಂಗಳೂರಿನಲ್ಲಿ! ಕೈಗಾರಿಕೆಗಳು ಮುಚ್ಚಿ ಕಾರ್ಮಿಕರು ಬೀದಿ ಪಾಲಾಗುತ್ತಿದ್ದಾರೆ. ಎಲ್ಲೂ ನೆಲೆ ಸಿಗದೇ ನಲುಗುತ್ತಿದ್ದಾರೆ. ಈ ಸುಂದರ, ಬೆಂಗಳೂರು ಸಿಂಗಪೂರಾಗುತ್ತಿರುವ ಬೆಂಗಳೂರಿನ ಒಡಲೊಳಗಿನ ಈ ಧಾರುಣ 'ಹತ್ಯೆ'ಗಳ ಆರ್ತನಾದ ಇಲ್ಲಿದೆ. ಇದು ಎಚ್ಚರಿಕೆಯ ಗಂಟೆ

ಕೆ.ಎನ್.ಉಮೇಶ್


ಶನಿವಾರ ರಾತ್ರಿ ಅಂಗಡಿ ಬಳಿ ಬಂದು ಏನೋ ಕೇಳಿದ ಸಿಗರೇಟ್ ಕೇಳುತ್ತಿದ್ದಾನಲ್ಲ! ಊಟಕ್ಕೆ ಇರದಿದ್ದರೂ, ಎಂದು ರೇಗಿದೆ. ಆ ನಂತರ ಗೊತ್ತಾದದ್ದು ಅವನ ಕೇಳಿದ್ದು ರಟ್ಟು ಎಂದು. ಅಯ್ಯೋ ಪಾಪ ಚಳಿ ಬೀದಿಯಲ್ಲಿ ಮಲಗುತ್ತಾನಲ್ಲ ಎಂದು ಒಂದು ಡಬ್ಬಾ ಕಾಲಿ ಮಾಡಿ, ಅದನ್ನು ಅರಿದು ನೀಡಿದೆ. ಸಂತಸದಿಂದ ಅದನ್ನು ತೆಗೆದುಕೊಂಡು ಹೋದ. ಅಂಗಡಿ ಬಾಗಿಲು ಹಾಕುವಾಗ ಆಗಲೇ ನಾ ಕೊಟ್ಟ ರಟ್ಟನ್ನು ಹಾಸಿ ಮಲಗಿದ್ದ. ಮಾರನೆ ದಿನ ನೋಡಿದರೆ ಸತ್ತು ಹೋಗಿದ್ದ! ಯಾರು ಏನು ಅಂತ ಒಂದೂ ತಿಳಿಯದು ಸಾರ್, ಪಾಪ ಹೊಟ್ಟೆಯೆಲ್ಲಾ ಬೆನ್ನು ಹತ್ತಿತ್ತು. ಸರಿಸುಮಾರು 20 ರಿಂದ 25 ವರ್ಷ ಇರಬಹುದು ಸಾರ್ ಅವನಿಗೆ ಸತ್ತು ಹೋದ ಎಂದವರು ರಾಮಮೂರ್ತಿ ನಗರದ ಕಲ್ಕರೆ ಮುಖ್ಯ ರಸ್ತೆಯ ಆರಂಭದಲ್ಲೇ ಇರುವ ದಿನಸಿ ಅಂಗಡಿಯ ಒಡತಿ.

ಇಲ್ಲೆ ಸಾರ್ ನಮ್ಮ ಅಂಗಡಿ ಮುಂದೆನೆ ಮಲಗಿದ್ದ. ಸುಮಾರು ದಿನಗಳಿಂದ ಅವನು ಇಲ್ಲೆ ಸುತ್ತಾಡುತ್ತಿದ್ದ ಪ್ಲಾಸ್ಟಿಕ್ ಆಯುವಾತ. ಅನಾಥ ಸಾರ್. ಬೀದಿ ಬದಿಯಲ್ಲೆ ಮಲಗುತ್ತಿದ್ದ. ಬೆಳಿಗ್ಗೆ ನೋಡಿದರೆ ಸತ್ತ್ ಹೋಗಿದ್ದ. ಬಿಕ್ಷುಕನಲ್ಲ ಸಾರ್. ಕುಡಿಯೋದು, ಬಿಡಿ, ಸಿಗರೇಟ್ ಏನು ಸೇದುವುದನ್ನು ನಾನಂತು ನೋಡಿಲ್ಲಾ. ಹಿಂದೆ ಮುಂದೆ ಯಾರಿಲ್ಲಾ ಅನಿಸುತ್ತೆ. ಪೋಲಿಸೋರು, ಸಿ.ಎಂ.ಸಿ. ಯವರು ಬಂದು ಹೆಣ ತೆಗೆದುಕೊಂಡು ಹೋದರು ಎಂದವರು ಅದೆ ರಸ್ತೆಯಲ್ಲಿರುವ, ಆ ಯುವಕ ಸತ್ತ ಸ್ಥಳದೆದುರಿರುವ ಕೋಳಿ ಅಂಗಡಿ ಮಾಲೀಕರು.

ಅಲ್ಲೆ ಇರುವ ಆಟೋ ಸ್ಟಾಂಡ್‌ನಲ್ಲಿರುವ ಆಟೋ ಚಾಲಕರನ್ನು ವಿಚಾರಿಸಿದಾಗ, ಅದಾ ಸಾರ್ ಪಾಪ ಇನ್ನೂ ಹುಡುಗಾ ಸಾರ್, ಸದಾ ಇಲ್ಲೆ ಈ ಬಾರ್ ಎದುರಿಗೆ ಮಲಗುತ್ತಿದ್ದ. ಬಹಳ ದಿನದಿಂದ ಊಟನೆ ಮಾಡಿರಲಿಲ್ಲ ಅನ್ನಿಸುತ್ತೆ. ಶನಿವಾರ ಸಂಜೆ ನಾನೆ ಒಂದು ಬನ್ ಕೊಟ್ಟೆ, ಸ್ವಲ್ಪ ತಿಂದ, ತಿನ್ನಲಾಗದೆ ಸುಮ್ಮನಾದ. ಯಾರು ಏನು ಎಂದು ಏನೂ? ತಿಳಿಯದು ಸಾರ್. ಮಾರನೆ ದಿನ ಆಗಲೆ ಅವನು ರಸ್ತೆಯಲ್ಲಿ ಮಲಗಿರುವಲ್ಲೆ ಸತ್ತುಹೋಗಿದ್ದ. ಪೊಲೀಸೋರು, ಸಿಎಂಸಿಯವರು ಹೆಣ ಹೆತ್ತಲು ಪೇಚಾಡುತ್ತಿದ್ದರು. ನಾವೆ ಇಲ್ಲಿದ್ದವರೆಲ್ಲಾ ಹೆಣದ ಮೇಲೆ 5,10 ರೂಪಾಯಿ ಹಾಕಿದೆವು ಆನಂತರ ಪೋಲೀಸೋರು ಹೆಣ ಎತ್ತಿಕೊಂಡು ಹೋದರು ಎಂದರು.

ಹಸಿವಿನಿಂದ ಸತ್ತದ್ದು ಸಹಜ ಸಾವಂತೆ

ಸುಮಾರು 40 ವರ್ಷ ಇರಬೇಕು, ಅನಾಥ ಬಿಕ್ಷುಕ, ಹಿಂದೆ ಮುಂದೆ ಯಾರೂ ಇದ್ದಂಗಿಲ್ಲ, ರಸ್ತೆ ಬದಿ ಮಲಗಿದ್ದಲ್ಲೆ ಸತ್ತುಹೋಗಿದ್ದ. ಮಹಜರ್ ಮಾಡಿಸಿ, ಪಿಎಂ ಮಾಡಿಸಿ, 7 ದಿನ ಇಟ್ಟಿದ್ದೆವು, ಪತ್ರಿಕೆಗೂ ಹಾಕಿಸಿದೆವು ಯಾರೂ ವಾರಸುದಾರರು ಬರಲಿಲ್ಲ. ಕೊನೆಗೆ ಸಿಎಂಸಿಯೋರು ಧಫನ್ ಮಾಡಿದರು. ನನ್ನ ಕೈಯಿಂದ ಸುಮಾರು 5000 ರೂಪಾಯಿ ಖರ್ಚಾಯಿತು, ವಿಡಿಯೋ, ಫೋಟೋ, ಪಿ.ಎಂ. ಮಾಡೋರಿಗೆ ಅಂತ ಕೊಡಬೇಕಲ್ಲಾ ಸಾರ್. ಅದಿರಲಿ ನಿಮಗೆ ಏಕೆ ಸಾರ್ ಈ ವಿಷಯ? ಮೊನ್ನೆ ನೋಡಿದರೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯೋರು ಅಂತ ಬಂದಿದ್ದರು, ಕೇಂದ್ರ ರಾಜ್ಯ ಸರ್ಕಾರಕ್ಕೆ ವರದಿ ಕಳುಹಿಸಬೇಕು ಅಂತ, ಫೋಟೋ, ವಿವರ, ಪಿ.ಎಂ. ರಿಪೋರ್ಟ್ ಎಲ್ಲಾ ತೆಗೆದುಕೊಂಡು ಹೋದರು. ಈಗ ನೋಡಿದರೆ ನೀವು ಬಂದಿದ್ದೀರಿ ಎಂದರು ಕೆ.ಆರ್. ಪುರಂ ಪೋಲೀಸ್ ಠಾಣೆಯ ಉಪ ನಿರೀಕ್ಷಕರು, ಪಿ.ಎಂ.(ಮರಣೋತ್ತರ ಪರೀಕ್ಷೆ) ರಿಪೋರ್ಟ್ ಏನು ಹೇಳಿದೆ? ಎಂದು ಕೇಳಿದಾಗ ಅದೇ ಸಾರ್ ಸಹಜ ಸಾವು, ಬಹಳ ದಿನಗಳ ಕಾಲ ಊಟ ಮಾಡದಿದ್ದರೆ, ಸಹಜವಾಗಿ ಸಾಯುತ್ತಾರಲ್ಲ ಅದನ್ನೆ, ಹಸಿವಿನಿಂದ ಸಾವಾಗಿದೆ ಎಂದಿದೆ ಎಂದರು.


ಉದಾರೀಕರಣದ ಉರುಳಿನಲ್ಲಿ ಡೇವಿಡ್ ಜಾನ್

ನವೆಂಬರ್ 28ರ ಪ್ರಜಾವಾಣಿ ಬೆಂಗಳೂರು ಮುದ್ರಣದ 2ನೇ ಪುಟದಲ್ಲಿದ್ದ ಒಂದು ಸಣ್ಣ ಸುದ್ದಿ ನೋಡಿ. ಇದರ ಕುರಿತು ವಿವರ ತಿಳಿಯಲೆಂದು ಡಿವೈಎಫ್ಐನ ಕೆ.ಎನ್. ಉಮೇಶ್, ಲಕ್ಷ್ಮಣ ಕುಮಾರ್, ರಮೇಶ್ ಹಾಗೂ ಜೆ.ಎಂ.ಎಸ್. ನ ಗೌರಮ್ಮರನ್ನೊಳಗೊಂಡ ತಂಡ ಸಂಬಂಧಿತ ಸ್ಥಳಗಳಿಗೆ ಬೇಟಿ ನೀಡಿದ್ದಾಗ, ಸಂಬಂಧಿತರೊಂದಿಗೆ ಮಾತನಾಡಿದಾಗ ಅವರ ಪ್ರತಿಕ್ರಿಯೆಗಳು ಮೇಲಿನಂತಿದ್ದವು.

ಹೈಟೆಕ್ ಪಾರ್ಕ್‌ನ ಅಡಿ ಅಂತರದಲ್ಲಿ

ಆ ಯುವಕ ಸತ್ತ ಸ್ಥಳ ಕೆ.ಆರ್. ಪುರಂನ ಎಫ್.ಸಿ.ಐ ಗೋಡಾನ್‌ನಿಂದ ಕೇವಲ ಒಂದುವರೆ ಕಿ.ಮಿ.ನಷ್ಟೆ ದೂರದಲ್ಲಿದೆ. ಅಂತೆಯೆ ವೈಟ್ ಫೀಲ್ಡ್‌ನ ಅಂತರ ರಾಷ್ಟೀಯ ತಂತ್ರಜ್ಞಾನ ಪಾರ್ಕ್‌ನಿಂದ ಕೇವಲ 5 ಕಿ.ಮಿ. ನಷ್ಟು ದೂರದಲ್ಲಿರಬಹುದು. ರಾಷ್ಟದಲ್ಲಿ 60 ದಶಲಕ್ಷ ಟನ್‌ಗಳ ಆಧಾರ ಧಾನ್ಯ ಕೊಳೆಯುತ್ತಿವೆ. ಆದರ ನಿರ್ವಹಣೆ ವಾರ್ಷಿಕ 3000 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ. ಒಂದೆಡೆ ರಾಶಿ ರಾಶಿ ಆಹಾರ ಧಾನ್ಯಗಳ ಬೆಟ್ಟಗಳು ಇರುವಾಗಲೇ ರಾಜಸ್ಥಾನ, ಮಧ್ಯಪ್ರದೇಶ, ಚತ್ತಿಸ್‌ಗಡ್, ಒರಿಸ್ಸಾ ರಾಜ್ಯಗಳಲ್ಲಿ ಹಸಿವಿನಿಂದ ಸಾವಿಗಿರುವ ವಿಷಯ, ಸಂಸತ್ತಿನ ಎರಡೂ ಸದನಗಳಲ್ಲಿ ಚರ್ಚೆಗೆ ಬಂದಿವೆ. ಸರ್ಕಾರದ ಆಹಾರ ನಿಗಮ ಗೋಡಾನ್‌ಗಳಲ್ಲಿ ಲಕ್ಷಗಟ್ಟಲೇ ಟನ್‌ಗಳಷ್ಟು ಆಹಾರ ಸಾಮಗ್ರಿಗಳು ಕೊಳೆಯುತ್ತಿರುವಾಗ ಹಸಿವಿನಿಂದ ಸಾವು ಸಂಭವಿಸಿವೆ, ಪಡಿತರ ವ್ಯವಸ್ಥೆ ಲೋಪ ಕುರಿತಂತೆ ರಾಷ್ಟದ ಸುಪ್ರಿಂ ಕೋರ್ಟ್ ಕೂಡ ಕೇಂದ್ರ ಸರ್ಕಾರಕ್ಕೆ ಛೀಮಾರಿ ಹಾಕಿದೆ. ಇದುವರೆಗೆ ಸಾಲದ ಬಾದೆ ಹಾಗೂ ಬೆಲೆ ಕುಸಿತದಿಂದ ಕಂಗಾಲಾಗಿದ್ದ. ರೈತರ ಆತ್ಮಹತ್ಯೆ ಅವ್ಯಾಹತವಾಗಿ ರಾಜ್ಯದಲ್ಲಿ ನಡೆದಿದ್ದವು. ಈ ಸಾವಿನಿಂದಾಗಿ ಹಸಿವಿನಿಂದ ಸಾವು ಸಹಾ ರಾಜ್ಯದಲ್ಲಿ ಆರಂಭವಾಗಿವೆ. ಬೆಂಗಳೂರನ್ನು ಸಿಂಗಾಪುರ ಮಾಡುವ ನಿಟ್ಟಿನಲ್ಲಿ ರಾಜ್ಯದ ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಚುನಾವಣಾ ಪ್ರಚಾರದ ಸಮಯದಲ್ಲಿ ಊದಿದ ಪಾಂಚಜನ್ಯ, ಹಸಿವಿನಿಂದ ಸಾವಿಗೆ ಊದ್ಧಿದ ಪಾಂಚಜನ್ಯವಾಗಿದೆ.

ನಿರುದ್ಯೋಗದಿಂದ ಬೇಸತ್ತ ಯುವಕನ ಆತ್ಮಹತ್ಯೆ;

ಅದೇ ದಿನ ಪತ್ರಿಕೆಯಲ್ಲಿ, ಅದೇ ಪುಟದಲ್ಲಿ ಮೇಲಿನ ಸಾವು ಕುರಿತಷ್ಟೆ ಸಣ್ಣದಾಗಿ ಪ್ರಕಟವಾಗಿದ್ದ ಸುದ್ಧಿ ಎಂದರೆ, ನಿರುದ್ಯೋಗದಿಂದ ಬೇಸತ್ತು ಆತ್ಮಹತ್ಯೆ ಎಂಬ ವಿಷಯ ಈ ಸುದ್ಧಿ ಆಧರಿಸಿ, ಯುವಕ ಆತ್ಮಹತ್ಯೆ ಮಾಡಿಕೊಂಡ, ಕೆ.ಆರ್. ಪುರಂ ಸಿ.ಎಂ.ಸಿ. ವ್ಯಾಪ್ತಿಯ ಬಟ್ಟರ ಹಳ್ಳಿಗೆ ಮೇಲಿನ ತಂಡ ಬೇಟಿ ನೀಡಿತು.

ಬಟ್ಟರಹಳ್ಳಿಯ ಗೌಡರ ರಸ್ತೆಯ, ಒಂದು ಸಣ್ಣ ಮನೆಯನ್ನು ಹೊಕ್ಕಾಗ ಕಂಡದ್ದು, ಸಾವು ಕವಿದ ಮೌನದಲ್ಲಿ ಮುಳಿಗಿದ್ದ ಯುವಕನ ಹೆಂಡತಿ ಸ್ಟೆಲ್ಲಾ ಮತ್ತು ಆಕೆಯ ತಾಯಿ ಜೆಸೆಫಿನ್ ಸುಮಾರು 8x8 ಅಳತೆಯ ಎರಡು ಕೊಠಡಿಯ ಪುಟ್ಟ ಮನೆ. ಅದಕ್ಕೆ ಬಾಡಿಗೆ 600 ರೂಪಾಯಿ, ವಿದ್ಯುತ್ ಬಿಲ್ 200 ರೂಪಾಯಿ, ನೀರಿನದು 50 ರೂಪಾಯಿ, ಪ್ರತಿ ತಿಂಗಳು ನೀಡಲೇ ಬೇಕಾದ ಬಾಬ್ತು. ಮನೆಯಲಿದ್ದ ಸ್ಟೆಲಾ ಹೊರಗೆ ದುಡಿದು ತಂದು, ಮನೆಯಲ್ಲೂ ದುಡಿದು ತಿನ್ನಬೇಕಾದ ಹೆಣ್ಣು ಮಗಳು ಹೇಗೆ ಈ ಆತ್ಮಹತ್ಯೆ ಏಕೆ ಎಂದಾಗ ಮಾತು ಹೊರಡದೆ, ಕಣ್ಣುಗಳಲ್ಲಿ ನೀರು ಸುರಿದವು. ಆಗ ಆಕೆಯ ತಾಯಿ ಜೋಸೆಫಿನ್ ಅಳುತ್ತಲೇ ಒಡಲಾಳದ ನೊವನ್ನೆಲ್ಲಾ ತೋಡಿಕೊಂಡರು.

ಸುಮಾರು 35 ವರ್ಷದ ಡೇವಿಡ್ ಜಾನ್, ಹುಟ್ಟಿನಿಂದ ಅನಾಥ, ಯಾರೋ ಓದಿಸಿ ಬೆಳೆಸಿದರು. ಪಿಯುಸಿ ವರೆಗೆ ಓದಿದ್ದ ಆತನಿಗೆ ತನ್ನ ಮಗಳ ನೀಡಿ ಮದುವೆ ಮಾಡಿದೆವು. ಮೊದಲು ಕೆ.ಆರ್. ಪುರಂ ನಲ್ಲಿದ್ದ ಶರಾವತಿಯಲ್ಲಿ 10 ವರ್ಷ ಕೆಲಸಮಾಡಿದ್ದರು, ಕಾರ್ಖಾನೆ ಮುಚ್ಚಿಹೋಯಿತು. ಆನಂತರ ಅವಲಳ್ಳಿಯ ಸಿಪ್ಲೋದಲ್ಲಿ 2 ವರ್ಷ ಗುತ್ತಿಗೆ ಆಧಾರದಲ್ಲಿ ಕೆಲಸದಲ್ಲಿದ್ದರು, ಅದು ಇಲ್ಲದಾದಾಗ, ಏರಿಯಲ್ ಮಾರ್ಕೆಟಿಂಗ್‌ನಲ್ಲಿ ಕಛೇರಿ ಕೆಲಸಕ್ಕೆ ಸೇರಿಕೊಂಡರು. ಮೊದಲು 3000 ರೂಪಾಯಿ ಸಂಬಳ ಪಡೆಯುತ್ತಿದ್ದವರು 2000 ರೂಪಾಯಿಗಳಿಗೆ ತೃಪ್ತಿಪಡಬೇಕಾಯಿತು. ಕಳೆದ ಆರು ತಿಂಗಳಿಂದ ಅದು ಮುಚ್ಚಿ ನಿರುದ್ಯೋಗಿಯಾಗಿದ್ದ ಡೇವಿಡ್, ಎಲ್ಲೆಲ್ಲಿ ಅಲೆದರು ಕೆಲಸ ಮಾತ್ರ ಸಿಗಲಿಲ್ಲ 3 ಮಕ್ಕಳು. ಒಬ್ಬ ಮಗ 5ನೇ ತರಗತಿ ಮಗಳು, 2ನೇಯದು, ಮತ್ತೊಬ್ಬ ಮಗ 1ನೇ ತರಗತಿ.

ಹೆಂಡತಿ ಸ್ಟೇಲಾದು ಇನ್ನೊಂದು ಕಥೆ. ಮೊದಲು ವ್ಯಾಸ್ಪರ್‌ನಲ್ಲಿ 3000 ರೂಪಾಯಿಗೆ ಕೆಲಸಮಾಡುತ್ತಿದ್ದರು, ಅದು ಮುಚ್ಚಿದ ನಂತರ ಮಾರುತಿ ಫ್ಯಾಬ್ರಿಕೇಷನ್‌ನಲ್ಲಿ ಲ್ಯಾಮಿನೇಷನ್ ಕೆಲಸಕ್ಕೆ 2000 ರೂಪಾಯಿ ಸಂಬಳಕ್ಕೆ ಸೇರಿದ್ದಾರೆ. ಸಧ್ಯ ಕೆಲಸ ಮಾಡುತ್ತಿದ್ದಾರೆ. ಅದು ಯಾವಾಗ ಮುಚ್ಚಿ, ಇರುವ ನೌಕರಿಯೂ ಇಲ್ಲದಾಗುತ್ತದೋ ಎಂಬ ಆತಂಕ ಸದಾ ಅವರದಾಗಿದೆ. ಸ್ಟೇಲಾರ ಅಣ್ಣ ಬೇರೆ ಸಂಸಾರ ನಡೆಸುತ್ತಿದ್ದರು, ಆತನು ಕೆಲಸ ಇಲ್ಲದೆ, ಕಾರ್ಖಾನೆ ಮುಚ್ಚಿದ ಕಾರಣ, ನಿರುದ್ಯೋಗಿ ಆಗಿದ್ದಾನೆ. ಸ್ಟೆಲಾ ತಾಯಿ ಜೊಸೆಫಿನ್ ತನ್ನ ಚಿಕ್ಕ ವಯಸ್ಸಿನಲ್ಲೆ ಗಂಡನನ್ನು ಕಳೆದುಕೊಂಡು, ಆನಂತರ ಕಷ್ಟಪಟ್ಟು ಕೂಲಿ ನಾಲಿ ಮಾಡಿ, ಮೂರು ಮಕ್ಕಳನ್ನು ಸಾಕಿ ಬೆಳೆಸಿದೆ. ಇಂದೂ ದುಡಿತಿದ್ದೀನಿ. ನನ್ನ ಗತೀನೆ ನನ್ನ ಮಗಳಿಗೂ ಬಂತಲ್ಲಾ ಎಂಬ ಗೋಳು, ಎಂತವರ ಹೃದಯವನ್ನು ಹಿಂಡುವಂತಿತ್ತು.

ಎಲ್ಲಾ ಕಡೆ ಕೆಲಸಕ್ಕಾಗಿ ಅಲೆದರು, ಕೆಲಸ ಸಿಗಲಿಲ್ಲ, ಮಕ್ಕಳು ಇಂಗ್ಲೀಷ್ ಮೀಡಿಯಂನಲ್ಲಿ ಓದಿದರೆ, ಒಳಿತು ಎಂದು ಅಂದು ಇಬ್ಬರಿಗೂ

ಪುಟ 12 ಕ್ಕೆ

........ಕೊಡಗಿನ ಬೆಳೆಗಾರರಿಗೆ ಲಾಭವೇನೂ ಇಲ್ಲ

ಪುಟ 3 ರಿಂದ

ಉಪಯೋಗಿಸುವ ನಿತ್ಯೋಪಯೋಗಿ ಸಾಮಾಗ್ರಿಗಳ ಬೆಲೆ ಗಗನಕ್ಕೇರುತ್ತಿರುವಾಗ ಆತನ ಉತ್ಪನ್ನಗಳಾದ ಕಾಫಿ ಮೊದಲಾದವುಗಳ ಬೆಲೆ ಕ್ಷಣ ಕ್ಷಣಕ್ಕೂ ಪಾತಾಳಕ್ಕೆ ಕುಸಿಯುತ್ತಿದೆ. ಇದರಿಂದಾಗಿ ಸಾಮಾನ್ಯ ಬೆಳೆಗಾರ ಅಹನ್ಯಹನಿ ಜೀವನನಡೆಸುವಂತಾಗಿದ್ದು ತಮ್ಮ ನಿತ್ಯ ಜೀವನ ನಿರ್ವಹಣೆಯೇ ದುಸ್ತರವಾಗಿರುವುದರಿಂದ ತೋಟದ ನಿರ್ವಹಣೆಯ ಕಾರ್ಯವನ್ನು ಅನಿವಾರ್ಯವಾಗಿ ಕಡೆಗಣಿಸಿದ್ದು ತೋಟಗಳು ಪಾಳು ಬೀಳಲಾರಂಭವಾಗಿವೆ.

ಇಂತಹಾ ಸಂದರ್ಭದಲ್ಲಿ ತಾವು ತೆಗೆದುಕೊಂಡಿರುವ ಸಾಲದ ಬಡ್ಡಿ ಕಟ್ಟಲು ಬೆಳೆಗಾರರಿಗೆ ಸಾಧ್ಯವಾಗುತ್ತಿಲ್ಲ. ಅವರು ತೆಗೆದುಕೊಂಡಿರುವ ಸಾಲದ ಬಡ್ಡಿಯ ದರ ಶೇ. 12ರಿಂದ 14 ಎಂದಿದ್ದರೂ ವಾಸ್ತವವಾಗಿ ಅದು ಶೇ. 20 ರಿಂದ 22 ಆಗುತ್ತದೆ. ಹಾಗಿರುವಾಗ ಸಾಲದ ಬಡ್ಡಿ ಪ್ರತಿ 3 ತಿಂಗಳಿಗೊಮ್ಮೆ ಅಸಲಿನೊಂದಿಗೆ ಸೇರಿ, ಬಡ್ಡಿಯೊಂದಿಗೆ ಚಕ್ರ ಬಡ್ಡಿ ಸೇರಿ ಹನ್ನೊಂದು ವರ್ಷಗಳ ಅವಧಿಯ ಕೊನೆಯಲ್ಲಿ ಸಾಲ ಮೂರು ಪಟ್ಟಿಗಿಂತಲೂ ಹೆಚ್ಚಾಗಿ ಕೊನೆಯಲ್ಲಿ ಈ ಅಗಾಧ ಸಾಲದ ಮೊತ್ತ ತೀರಿಸಲು ಬೆಳೆಗಾರ ಸಿಕ್ಕ ಬೆಲೆಗೆ ತೋಟ ಮಾರಿ ಭಿಕಾರಿಯಾಗಿ ನಡೆಯಬೇಕಾದ ಸ್ಥಿತಿ ಬರುತ್ತದೆ.

ಆದ್ದರಿಂದ ಕೇಂದ್ರ ಸರಕಾರಕ್ಕೆ ಬೆಳೆಗಾರರ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ ಸಣ್ಣ ಮತ್ತು ಮಧ್ಯಮ ಬೆಳೆಗಾರ ಈ ವರೆಗೆ ತೆಗೆದುಕೊಂಡ ಎಲ್ಲಾ ಸಾಲಗಳ ಮೇಲಿನ ಬಡ್ಡಿಯನ್ನೂ ಸಂಪೂರ್ಣರದ್ದು ಮಾಡಬೇಕು ಮತ್ತು ಕೇವಲ ಅಸಲನ್ನು ಕಟ್ಟುವುದಕ್ಕಷ್ಟೇ ಕಾಲಾವಧಿಯನ್ನು ವಿಸ್ತರಿಸಬೇಕು ಮತ್ತು ಬೆಲೆ ಕುಸಿತವಿರುವವರೆಗೆ ಬೆಳೆಗಾರರಿಗೆ ಬಡ್ಡಿ ರಹಿತ ಸಾಲ ನೀಡಬೇಕು.

ಅಥವಾ ಪ್ರತಿ ಡಿಸೆಂಬರ್‌ನಲ್ಲಿ ಬೆಳೆಗಾರನ ಖರ್ಚು ಮತ್ತು ಅಗತ್ಯಗಳನ್ನು ಗಣನೆಗೆ ತೆಗೆದುಕೊಂಡು ಅದಕ್ಕನುಗುಣವಾಗಿ ದರ ನಿರ್ಣಯಿಸಿ ಆ ದರದಲ್ಲಿ ಬೆಳೆಗಾರನಿಂದ ಕಾಫಿ ಕೊಂಡುಕೊಂಡು ಆಂತರಿಕ - ಅಂತರ್ರಾಷ್ಟೀಯ ಮಾರುಕಟ್ಟೆಯಲ್ಲಿ ಮಾರಾಟ ವ್ಯವಸ್ಥೆಯನ್ನು ಕೇಂದ್ರ ಸರಕಾರವೇ ವಹಿಸಬೇಕು.

ಇದಲ್ಲದೆ ಜಾರ್ಜ್ ಫೆರ್ನಾಂಡಿಸ್, ಜಸ್ವಂತ್ ಸಿಂಗ್, ವಾಜಪೇಯಿ ಮೊದಲಾದವರು ಇಂದು ನೀಡುತ್ತಿರುವ ಪೊಳ್ಳು ಭರವಸೆಗಳು, ನಡೆಸುತ್ತಿರುವ ಕಸರತ್ತುಗಳಿಂದ ಬೆಳೆಗಾರರನ್ನು ತಾತ್ಕಾಲಿಕವಾಗಿ ಭ್ರಮೆಯ ಲೋಕದಲ್ಲಿರುವಂತೆ ಮಾಡಬಹುದಲ್ಲದೆ ಇನ್ನೇನೂ ಲಾಭವಿಲ್ಲ.

ಈ ಉದ್ದೇಶ ಸಾಧನೆಗೆ ಬೆಳೆಗಾರರ ಸಂಘಟಿತ ಹೋರಾಟವಲ್ಲದೆ ಬೇರೇನೂ ಮಾರ್ಗವಿಲ್ಲ.

- ಸತ್ಯಾ, ಕೊಡಗು

ಹಂಗೇರಿ ಉನ್ನತಿ-ಅವನತಿ

ಹಂಗೇರಿಯಲ್ಲಿ ಜನಿನಿ ಬೆಳೆದ ಲೇಖಕ ಜಾಸ್ಸನಾ ಕರ್ಕರವರು ಅಂದಿನ ಸಮಾಜವಾದಿ ವ್ಯವಸ್ಥೆಯ ಏ ಮತ್ತು ಅದರ ಕುಸಿತದ ನಂತರದ ಇಂದಿನ ಅಧೋಗತಿಯ ಸ್ಥಿತಿಯನ್ನು ಸ್ಪಷ್ಟವಾಗಿ ಬಿಡಿಸಿಟ್ಟಿದ್ದಾರೆ. ಸದ್ಯ ಇಂಗ್ಲೆಂಡಿನಂತಹ ಸಾಮ್ರಾಜ್ಯಶಾಹಿ ದೇಶದಲ್ಲಿದ್ದು ಹಂಗೇರಿಯಲ್ಲಿನ ವಿವಿಧ ರಂಗಗಳಲ್ಲಿನ ತೀವ್ರ ಬದಲಾವಣೆಯನ್ನು ನಿಖರವಾಗಿ ಗುರುತಿಸಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆ ಭೂಮಿ ಮೇಲಿನ ನರಕ ಎಂಬುದಕ್ಕೆ ಇಲ್ಲಿದೆ ನಿದರ್ಶನ

ಯಾರಾದರೂ ನನ್ನನ್ನು 1960-70ರ ಮಧ್ಯೆ ಪಾರ್ಸಿ ರಾಜ್ಯವಾದ ಹಂಗೇರಿಯ ಬೆಳವಣಿಗೆ ಹೇಗಿರಬಹುದೆಂದು ಪ್ರಶ್ನಿಸಿದರೆ, ಅದಕ್ಕೆ ನನ್ನ ಉತ್ತರವಾಗಿ ರಹಸ್ಯ ಪೊಲೀಸು, ಆಹಾರಕ್ಕಾಗಿ ಕಾದು ನಿಲ್ಲುವ ಜನರ ಸಾಲುಗಳು ಮತ್ತು ಇತರ ಅಹಿತಕರವಾದ ವಿವರಣೆಗಳನ್ನು ನಿರೀಕ್ಷಿಸಬಹುದು.

ಆದರೆ ಇಲ್ಲಿ ನಿಜಾಂಶ ಪೂರ್ತಿಯಾಗಿ ಬೇರೆಯೇ ಆಗಿದ್ದು ಕಮ್ಯುನಿಸ್ಟ್ ಹಂಗೇರಿ ಭೂಮಿ ಮೇಲಿನ ನರಕವೆಂದು ತಿಳಿದಿರುವುದಕ್ಕೆ ವಿರುದ್ಧವಾಗಿ, ಜೀವಿಸಲು ಅದು ಒಳ್ಳೆ ರಾಜ್ಯವೇ ಆಗಿತ್ತು ಎಂದು ತಿಳಿಸಿದರೆ ಅವರಿಗೆ ಪೂರ್ತಿಯಾಗಿ ನಿರಾಶೆ ಆಗಬಹುದು.

ಅಲ್ಲಿ ಆರೋಗ್ಯ, ಶಿಕ್ಷಣ, ಸಾರಿಗೆ ಮತ್ತು ಪ್ರಜೆಗಳ ಕಲ್ಯಾಣ ಮುಂತಾದ ಅದರ ಸಾದನೆಗಳ ಪಟ್ಟಿಯನ್ನು ಕೊಡುವ ಬದಲು ಕಮ್ಯುನಿಸಂ ಯುಗದಲ್ಲಿ ಜನರು ಜೀವಿಸುವ ರೀತಿ ಹೇಗಿತ್ತೆಂಬುದರ ನನ್ನ ಸ್ವ (ನೋಟ) ಅವಲೋಕನದಿಂದ ವಿವರಿಸುತ್ತೇನೆ.

ನನಗೆ ಜ್ಞಾಪಕವಿದ್ದಂತೆ ಹಂಗೇರಿಯಲ್ಲಿ ಎಲ್ಲಾ ಪಂಗಡ ಅಥವಾ ವರ್ಗ ರದ್ದು ಮಾಡುವ ರೀತಿ ಮತ್ತೆ ದೃಢವಾಗಿ ಒಗ್ಗಟ್ಟು ಪಡೆಯುವ ವಿಧಾನವನ್ನು ಮತ್ತೆ ಅಲ್ಲಿರುವ ವೃದ್ಧಾಪ್ಯ, ನಾನು ದತ್ತು ಹೋದ ಬ್ರಿಟನ್ ರಾಜ್ಯದಲ್ಲಿ ಪೂರ್ತಿಯಾಗಿ ಕೊರತೆ ಉಳ್ಳದಾಗಿತ್ತೆಂಬುದನ್ನು ನಾನು ಮತ್ತೆ ಹಂಗೇರಿಗೆ ವಾಪಸ್ಸು ಹೋದ ಮೇಲೆ ತಿಳಿದೆನು. ಪ್ರಜೆಗಳು ಏನು ಹೊಂದಿದ್ದರು (ಆಸ್ತಿ) ಎನ್ನುವುದಕ್ಕಿಂತ ಅವರು ಕ್ರಿಯಾತ್ಮಕವಾಗಿ ಹೇಗಿದ್ದರೆಂಬುದರ ಮೇಲೆ ಜನರ ಯೋಗ್ಯತೆಯನ್ನು ತೀರ್ಮಾನಿಸುತ್ತಿದ್ದರು.

ಕೆಲವು ಪ್ರಾಯದ ಮುಂದಾಳುಗಳು (ನಾಯಕರು) ವಿಸ್ತೃತವಾದ ರೀತಿಯಲ್ಲಿ ಸಮಾಜ ಮತ್ತು ಎಲ್ಲಾ ವರ್ಗಗಳ ಚಟುವಟಿಕೆಗಳಲ್ಲಿ ಗ್ರಾಮದ ಯುವ ಜನರನ್ನು ತೊಡಗಿಸುವ ಪ್ರಯತ್ನವನ್ನು ಲಿಬರಲ್ ಪಾರ್ಟಿಯವರು ಪರಿಹಾಸ್ಯ ಮಾಡಬಹುದು. ಆದರೆ ಆ ಚಟುವಟಿಕೆಗಳು ಈಗಿನ ಪ್ರಗತಿಪರ ರಾಜ್ಯಗಳ ದುರ್ಬಲತೆಯ ವಿರುದ್ಧವಾಗಿ ಒಂದು ಒಗ್ಗಟ್ಟಿನ ಸಮಾಜವನ್ನು ಪ್ರತಿಬಿಂಬಿಸಿತು. ನಾನು ಈ ಕೆಲಸದಲ್ಲಿ ಮುಂದಾಳು ಆಗಿರುವುದಕ್ಕೆ ಹೆಮ್ಮೆ ಪಡುತ್ತೇನೆ. ಹಾಡುಗಳನ್ನು ಹಾಡುತ್ತಾ ಕಾಲವನ್ನು ಕಳೆಯದೆ ನಾವು ಸಮಾಜದ ಹೊಂದಾಣಿಕೆಯ ಕೆಲಸಗಳು ಮತ್ತು ಸ್ನೇಹ (ಬಾಂಧವ್ಯ) ವನ್ನು ಬೆಳೆಸಲು ಬೇಕಾದ ನೈಪುಣ್ಯಗಳನ್ನು ಕಲಿತೆವು.

ಶಿಕ್ಷಣ ಮತ್ತು ಸಂಸ್ಕೃತಿಯ ಬೆಲೆಯನ್ನು ಅರಿತ ಸರ್ಕಾರದಲ್ಲಿನ ಒಂದು ಸಮಾಜದಲ್ಲಿ ಬೆಳೆಯುವ ಅವಕಾಶ ನನಗೆ ಸಿಕ್ಕಿತು.

ಯುದ್ಧಕ್ಕಿಂತ ಮುಂಚಿತವಾಗಿ ಅಂತಹ ಪ್ರತಿಗಾಮಿ ದಬ್ಬಾಳಿಕೆಯ ಭಾವನೆಯಿರುವ ಬರಹಗಾರರ ಕಾಲದ ಹಂಗೇರಿಯಲ್ಲಿ ಪ್ರೌಢ ವಿದ್ಯಾಭ್ಯಾಸ ಕೇವಲ ಧನವಂತರ ಪಾಲಾಗಿತ್ತು. ನನ್ನ ತಂದೆ ತಾಯಿಗಳು ತಮ್ಮ ಹನ್ನೊಂದನೇ ವಯಸ್ಸಿನಲ್ಲಿಯೇ ಶಿಕ್ಷಣವನ್ನು ನಿಲ್ಲಿಸಬೇಕಾಯಿತು. ಆದರೆ 'ಕಾಡರ್' ಆಳ್ವಿಕೆಯಲ್ಲಿ ಅವರು (ಮತ್ತೆ) ವಯಸ್ಕರ ಶಿಕ್ಷಣ ಪುನರಾರಂಭಿಸಲು ಅವಕಾಶ ಕೊಡಲಾಯಿತು. ಇದು ಸಮಾಜದ ಮುಂದುವರಿಕೆಯನ್ನು ವಿಸ್ತೃತಗೊಳಿಸಲು ನೆರವು ನೀಡಿತು.

ಸರ್ಕಾರದ ಶಿಕ್ಷಣ ನೀತಿಯು ಕಲೆಗೆ ರಕ್ಷಣೆಯ ಒಪ್ಪಂದವಾಗಿತ್ತು. ಮತ್ತೆ ಅದರಿಂದ ಲಾಭ ಸಾಧ್ಯವಾದಷ್ಟು ಹೆಚ್ಚು ಹೆಚ್ಚು ಜನರಿಗೆ ತಲುಪಬೇಕೆಂದು ಮತ್ತೆ ಬುಡಾಪೆಸ್ಟ್ (budapest)ನಲ್ಲಿರುವ ಶ್ರೀಮಂತರಿಗೆ ಮಾತ್ರ ಆಗಕೂಡದೆಂದು ಮಾಡಲಾಯಿತು. ಚಿತ್ರಮಂದಿರಗಳು, ರಂಗಮಂಟಪಗಳು ಮತ್ತು ಕಲಾಮಂದಿರಗಳಿಗೆ ಹೆಚ್ಚಿನ ಸಹಾಯಧನ ಒದಗಿಸಲಾಯಿತು. ಇದರಿಂದಾಗಿ ಅದರ ಬೆಲೆಗಳು ಸಾಮಾನ್ಯ ಜನರಿಗೆ ಎಟುಕುವಂತಾಯಿತು. ಮತ್ತೆ ಸರ್ಕಾರ ಪ್ರತಿಯೊಂದು ಜಿಲ್ಲಾವಾರು ರಂಗ ಮಂಟಪಗಳನ್ನು ನಿರ್ಮಿಸಿತು. ಆದರಿಂದಾಗಿ ನಮ್ಮ ತಂದೆ ತಾಯಿಯರಂತಹ ಪ್ರತಿಯೊಬ್ಬರಿಗೂ ಕಲೆಯ ಪರಿಚಯವಾಗಲು ಅನುಕೂಲವಾಯಿತು.

ಇದೇ ರೀತಿ ಪುಸ್ತಕ ಪ್ರಕಾಶಕರಿಗೂ ಸಹಾಯ ಒದಗಿಸಲಾಯಿತು. ಪುಸ್ತಕಗಳ ಬೆಲೆ ಕಡಿಮೆಯಾಗಿ. ಪುಸ್ತಕ ಮಾರುವವರಿಗೆ ಲಾಭವು ಸಿಗುವಂತಾಯಿತು. (ಐಎಸ್‌ಪಿ) ಬೆಲೆವುಳ್ಳ ಉತ್ತಮ ಮಟ್ಟದ ಪುಸ್ತಕಗಳು ಸಿಗುವಂತಾಯಿತು. ಹಿಂದೆ ಅಸ್ತಿತ್ವದಲ್ಲಿದ್ದ ಮುದ್ರಣಕ್ಕೆ ಮುಂಚಿತವಾಗಿ, ಪ್ರಕಟಣೆಗೆ ಮುನ್ನ ಪರಿಕ್ಷಿಸುವ ತೀವ್ರವಾದ ಅಭ್ಯಾಸದಿಂದಾಗಿ ಓದುಗರ ಕಷ್ಟ ಇದರಿಂದಾಗಿ ಒಂದು ವಿಧದಲ್ಲಿ ದಿಗ್ಭ್ರಮೆ(ಬ್ರಾಂತಿ) ಆಯಿತು. ಪರದೇಶದ ಬರಹಗಾರರಾದ p.g. wood house ahdu hulexy ಮತ್ತು somerset moughau ಅವರ ಪುಸ್ತಕಗಳು ಮುದ್ರಣವಾಗುತ್ತಿತ್ತು. ಮಾರ್ಕ್ಸ್‌ವಾದದ ಪ್ರಚಾರ ಮಾಡುವ ಬರಹಗಾರರ ಪುಸ್ತಕಗಳ ಪ್ರಕಟಣೆ ತೀರ ಕಡಿಮೆ ಆಯಿತು.

ಇವತ್ತು 13 ಪಕ್ಷಗಳ ಆಳ್ವಿಕೆಯ ಬದಲಾವಣೆ ನಂತರ ಪಾರಂಪರ್ಯವಾಗಿ ಬಂದ ಸಂಸ್ಕೃತಿಯು ಬಹಳವಾಗಿ ನಾಶಗೊಳಿಸಲ್ಪಟ್ಟಿದೆ ಇಂದಿನ ಹೊಸ ಆರ್ಥಿಕ ಪರಿಸ್ಥಿತಿಯಲ್ಲಿ ಪ್ರಾಣಿ ಸಂಗ್ರಹಾಲಯಗಳು, ಚಿತ್ರ ಮಂದಿರಗಳು, ಕಲಾಮಂದಿರಗಳು ಟಿಕೆಟುಗಳ ಸಹಾಯಧನ ನಿಲ್ಲಿಸಿರುವುದರಿಂದ ಹೊಸ ಆರ್ಥಿಕ ನೀತಿಯಲ್ಲಿ ಮುಳುಗಿಹೋದವು (ಮುಚ್ಚಲ್ಪಟ್ಟವು) ಧನವಂತರು ಮತ್ತು ಜರ್ಮನಿಯ ಪ್ರವಾಸಿಗರಿಗೆ ಚಿತ್ರ ಮಂದಿರಗಳನ್ನು ಪ್ರವೇಶಿಸಲು ಅನುಕೂಲವಾಯಿತು.

ಹಾಲಿವುಡ್ ಬಹುಮಿಶ್ರಿತ (Multi Complex) ಚಿತ್ರಗಳ ಪ್ರವೇಶದಿಂದಾಗಿ ಸಹಸ್ರಾರು ಚಿಕ್ಕ ಚಿಕ್ಕ ಚಿತ್ರಮಂದಿರಗಳು ಮುಚ್ಚಲ್ಪಟ್ಟವು. ಇದರ ಜೊತೆಗೆ ಟೆಲಿವಿಷನ್ ಬಂದೊದಗಿತು. ನಾನು ಚಿಕ್ಕವನಾಗಿದ್ದಾಗ ಶನಿವಾರದ ಸಂಜೆ ಕಾರ್ಯಕ್ರಮವೆಂದರೆ (jules vecn) ಜೂಲ್ಸ್ ವಿಸನ್‌ನ ಸಾಹಸಮಯ ಚಿತ್ರಗಳನ್ನು ನೋಡುವುದು. ಆದರೆ ಈಗ ಅದೇ ವಾರ ಆಟದ ಪ್ರದರ್ಶನಗಳು ಮತ್ತೆ ಅಮೇರಿಕದ ಚಿತ್ರಗಳು ಬ್ರಿಟನ್ನಿನಲ್ಲಿ ಇದ್ದಂತೆ ಇರುವುದನ್ನು ನೋಡಬೇಕು.

ಸುಧಾರಿತ ರಾಜಕಾರಣಿಗಳು 'ಕಾಡರ್'ನ ಆಳ್ವಿಕೆ ಅಥವಾ ದಿನಗಳನ್ನು ಸುಪ್ಪತ್ತಿಗೆಯ ಬಂದೀಖಾನೆ (veluet prison) ಎಂದು ವ್ಯಂಗ್ಯವಾಗಿ ಹೇಳುತ್ತಾರೆ. ಆದರೆ ಅವರು ನಿಜವಾಗಿಯೂ ತಮ್ಮ ಕಾರಾಗೃಹವನ್ನೇ ಸೃಷ್ಟಿಮಾಡಿಕೊಂಡಿದ್ದಾರೆ. ಇಲ್ಲಿದ್ದ ಬಹುತೇಕ ಜನ ಸಂಜೆಯನ್ನು ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮಾರಿಕೊಂಡಿದ್ದಾರೆ. ಈ ಸಂಸ್ಥೆಗಳು ದೇಶದ ಶೇ.70 ಉತ್ಪಾದನೆಯನ್ನು ನಿಯಂತ್ರಿಸುತ್ತವೆ. ಕೂಲಿಕಾರರ ವೇತನ ಹೆಚ್ಚಿಸುವ ಮತ್ತು ಕಾರ್ಮಿಕರ ಹಕ್ಕುಗಳನ್ನು ಸುಧಾರಿಸುವ ಪ್ರಯತ್ನ ನಡೆದರೆ ದೇಶದಿಂದ ತಮ್ಮ ಕಂಪನಿಗಳನ್ನು ಹೊರ ತೆಗೆಯುವುದಾಗಿ ಹೆದರಿಸುತ್ತಾರೆ.

ನನ್ನ ಸ್ನೇಹಿತೆಯ ಪತಿ ಇಂತಹದೇ ಒಂದು ಕಂಪೆನಿಯಲ್ಲಿ ಕೆಲಸ ಮಾಡುತ್ತಾರೆ. ಅಲ್ಲಿ ಶೌಚಾಲಯಕ್ಕೆ ಹೋಗಿ ಬರುವ ಸಮಯವನ್ನು ಕೂಡಾ ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಮತ್ತು ಊಟದ ಪೂರ್ಣ ವೇಳೆಯನ್ನು ಉಪಯೋಗಿಸಿಕೊಳ್ಳುವುದು, ತನ್ನ ಕಂಪನಿ ಬಗ್ಗೆ ಗೌರವವಿಲ್ಲದ ವರ್ತನೆ ಎಂದು


ಹಂಗೇರಿಯ ಇಂದಿನ ಪ್ರಧಾನಿ ಪೀಟರ್ ಮಾಡ್ಗೆಸ್ಸಿ

ಪರಿಗಣಿಸಲಾಗುತ್ತದೆ. ಈಗ್ಗೆ 20 ವರ್ಷಗಳ ಹಿಂದಿನ ರಾಜ್ಯದ ಹೆಸರಾಂತ ಸಂಸ್ಥೆಗಳಲ್ಲಿ ಇದ್ದ ಕಡಿಮೆ ಬೆಲೆಗೆ ಆಹಾರ ಒದಗಿಸುವ ಕ್ಯಾಂಟಿನ್ ಸೌಲಭ್ಯ ರಜಾ ಕಳೆಯಲು ವಸತಿಗಳು ಮತ್ತು ಅನುಕೂಲಗಳು ಮತ್ತು ಆಟ ಪಾಟಗಳ ಅಭಿವೃದ್ಧಿಗೆ ಉಚಿತ ಅವಕಾಶಗಳಂತಹ ಅನುಕೂಲಗಳು ಇವತ್ತಿನ ದಿನದಲ್ಲಿ ನೆನೆಸಲೂ ಸಾಧ್ಯವಿಲ್ಲ.

ಇತರ ಸೋಸಿಯಲಿಸ್ಟ್ ದೇಶಗಳಿಗೆ ಪ್ರವಾಸದ ಮೇಲಿನ ನಿರ್ಬಂಧಗಳು ಕಡಿಮೆಯಾದಂತೆ ಹಂಗೇರಿ ಕಮ್ಯುನಿಸಂ ನ ಏಳಿಗೆ ಕಡಿಮೆ ಆಗಲು ಶುರುವಾಗಿ ಕೆಳಮಟ್ಟಕ್ಕೆ ಇಳಿಯತೊಡಗಿತು. ಪಶ್ಚಿಮ ದೇಶದ ಪ್ರಯಾಣ ಸ್ವಲ್ಪ ಸಮಸ್ಯೆಗಳುಳ್ಳದ್ದಾಗಿ ಪ್ರತಿ ಎರಡು ವರ್ಷಕೊಂದು ಬಾರಿ ಪ್ರಯಾಣಿಸಲು ಅನುಕೂಲವಾಯಿತು.

ನನ್ನಂತೆಯೇ ಕೆಲವು ಹಂಗೇರಿಯ ಪ್ರಜೆಗಳು ಉಚಿತವಾಗಿ ಕಲಿಸುವ ರಷ್ಯನ್ ಭಾಷೆಯ ಪಾಠಗಳನ್ನು ಕಲಿಯಲು ಸಂತೋಷ ಪಡುತ್ತಿದ್ದೆವು. ಅದರಲ್ಲಿ ತುಂಬಾ ನಿರ್ಭಂದಗಳಿದ್ದವು. ನಾವು ಒಂದು ಪಾರ್ಟಿ (party) ಸರ್ಕಾರದಲ್ಲಿದ್ದರಿಂದ ನಮಗೆ ಸರ್ಕಾರವನ್ನು ಟೀಕಿಸುವ ಅಧಿಕಾರ ಕಡಿಮೆ ಆಗಿತ್ತು.

ಈ ಎಲ್ಲಾ ವ್ಯತ್ಯಾಸಗಳ ನಡುವೆಯೂ ಒಂದು ನಿರ್ದಿಷ್ಟ ಹಾದಿಯ ಮುಂದುವರಿಕೆ ಆಗುತ್ತದೆ ಹೊರತು ಅನಿರ್ದಿಷ್ಟದ್ದಲ್ಲ. (positive - not negetive)

ಹೀಗೆ ಹಂಗೇರಿಯವರಿಗೆ ಪಶ್ಚಿಮ ದೇಶಗಳಿಗೆ ಹೋಗಲು ಮುಕ್ತ ಅವಕಾಶವಿದೆ. ಆದರೆ ಕಡಿಮೆಯಾದ ಸಂಬಳದಿಂದಾಗಿ ಪಕ್ಕದ "ಲೇಕಬಾಲಿವಾನ್"ಗೆ ಹೋಗಲು ಕೂಡ ಕೆಲವರಿಗೂ ಸಾಧ್ಯವಾಗದಾಗಿದೆ. ವಿದೇಶಗಳಿಂದ ಹಂಗೇರಿಯನ್ನು ಸ್ವಾಧೀನ ಪಡಿಸಿಕೊಂಡಿದ್ದನ್ನು ಕೆಲವು ದೇಶ ಪ್ರೇಮಿ ರಾಜಕಾರಣಿಗಳು ಹೊಗಳುತ್ತಿದ್ದವರು ನ್ಯೂಯಾರ್ಕಿನ ಹಣಕಾಸು ಸಂಸ್ಥೆಗಳು ಮತ್ತು 'ಬ್ರುಸಲ್ಸ್'ನ (Brussel) ಚುನಾಯಿತರಲ್ಲದ ಅಧಿಕಾರಶಾಹಿಗಳ ಅಧಿಕಾರದಲ್ಲಿದ್ದವರು ಮಾತಿಲ್ಲದೇ ಸುಮ್ಮನೆ ಇದ್ದಾರೆ.

ಹಂಗೇರಿಯಲ್ಲಿ ಒಬ್ಬ ಪ್ರೌಢ ವ್ಯಕ್ತಿಯಾಗಿ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಆಳ್ವಿಕೆ ಮತ್ತು ಅದರ ವಿಶ್ವದ ಮೇಲಿನ ಅಧಿಕಾರ ಅಥವಾ ಪ್ರಭುತ್ವ ಮತ್ತು ವಿಶ್ವದ ಸಂಪನ್ಮೂಲಗಳ ಮೇಲಿನ ಹಿಡಿತಕ್ಕಾಗಿ ಮಾಡುವ ಕೆಟ್ಟ ಉಪಾಯಗಳ ಬಗ್ಗೆ ಕಥೆಗಳನ್ನು ಸುದ್ಧಿ ಸಮಾಚಾರಗಳಿಂದ ತಿಳಿಯುವ ವಾಡಿಕೆ ಉಳ್ಳವರಾಗಿದ್ದೆವು. ನಮಗೆ ಇದೆಲ್ಲಾ ಅಧಿಕಾರವರ್ಗದ ಪ್ರಚಾರವಾಗಿ ಇದರ ಪರಿಣಾಮಕ್ಕೆ ಮಿತಿ ಇದೆ ಎಂದು ತಿಳಿದಿತ್ತು.

ಈ ಹತ್ತು ವರ್ಷಗಳಿಂದ ಯು.ಎಸ್. ಮತ್ತು ಜರ್ಮನಿಯರು ಯುಗೋಸ್ಲೋವಿಯಾದ ವಿಭಜನೆಯನ್ನು ಉಪೇಕ್ಷಿಸಿ, ಇದು ಅಫ್ಘಾನಿಸ್ತಾನವನ್ನು ತನ್ನ ಕಾಲೋನಿಯನ್ನಾಗಿಸಿಕೊಂಡು ಮತ್ತೆ ಇರಾಕ್‌ನ ಮೇಲೆ ದಾಳಿ ಮಾಡಿ ಅದರ ತೈಲ ಸಂಪತ್ತಿನ ಮೇಲೆ ಹಿಡಿತ ಸಾಧಿಸುವ ಮೂಲಕ ವಿಶ್ವದ ತೈಲ ಸಾಗಾಣಿಕೆಯ ಮೇಲೆ ತನ್ನ ಹಿಡಿತ ಸಾದಿಸಲು ಪ್ರಯತ್ನಿಸುತ್ತಿದೆ. ಇದರಿಂದ ನಮಗೆ ಪಶ್ಚಿಮದೇಶದವರ ಉದ್ದೇಶಗಳೇನೆಂಬುದರ ಸತ್ಯ ತಿಳಿಯುತ್ತದೆ.

ನಾನು ಕಮ್ಯೂನಿಸ್ಟ್ ಮತ್ತು ಪಾಶ್ಚಿಮಾತ್ಯ ಶಕ್ತಿಯ ಆಡಳಿತಗಳಲ್ಲಿ ಯಾವುದು ಹೆಚ್ಚು ಪರಿಣಾಮಕಾರಿಯೆಂದು ತಿಳಿದಿದ್ದೇನೆ. ನಾನು ಪ್ರಚಾರಮಾಧ್ಯಮಗಳು ಅಧಿಕಾರಗಳೊಂದಿಗೆ ಹೆಚ್ಚು ಕೆಲಸವನ್ನು ಮಾಡುವುದನ್ನು ಕಂಡಿದ್ದೇನೆ. ಇತ್ತೀಚಿಗೆ 'ಯುದ್ಧ ನಿಲ್ಲಲಿ' ಮೆರವಣಿಗೆಯಲ್ಲಿ 1,50,000 ಜನ ಭಾಗವಹಿಸಿದ್ದನ್ನು ಕಂಡಿದ್ದೇನೆ. ಆದರೆ ಸುದ್ದಿ ಮಾಧ್ಯಮಗಳಲ್ಲಿ ಅದರ ಅತಿಯಾದ ವಿವರಣೆಗಳನ್ನು ಕೊಡಲ್ಪಟ್ಟಿದ್ದನ್ನು ಕಂಡಿದ್ದೇನೆ.

ಸಮಾಜದ ಉನ್ನತಿಗಾಗಿ ಶಿಕ್ಷಣದ ಅವಕಾಶದ ಪ್ರಯತ್ನವು ಒಂದು ರೀತಿ ಗೋರ್ಬಚ್ಚೆವ್ ಅವರ 10 ವರ್ಷದ ಕಮ್ಯೂನಿಸ್ಟ್ ಆಳ್ವಿಕೆಯಲ್ಲಿ ಶಿಕ್ಷಣ ಉನ್ನತ ಮಟ್ಟದ ಸಾಧನೆಯಾಗಿದೆ. ಆದರೆ ಅದು ಕಮ್ಯೂನಿಸ್ಟ್ ಆಳ್ವಿಕೆಯ ಅವನತಿಗೂ ಕಾರಣವಾಯಿತು. ಕಮ್ಯುನಿಸ್ಟ್ ಆಳ್ವಿಕೆ ಪ್ರಜೆಗಳನ್ನು ಎಲ್ಲಿಯವರೆಗೆ ವಿದ್ಯಾವಂತರನ್ನಾಗಿ ಮಾಡಿದರೆಂದರೇ ಅವರು ಎಲ್ಲವನ್ನೂ ಟೀಕಿಸುವಂತಹ ಒಂದು ಗುಂಪನ್ನು ತಯಾರಿಸಿ ಕೊನೆಗೆ ಈ ಪದ್ಧತಿಯನ್ನು ಕಿತ್ತೆಸೆಯುವಂತಾಯಿತು. ಬ್ರಿಟೀಷ್ ದೇಶದಲ್ಲಿ ಮೂರು ವರ್ಷ ಇದ್ದ ನಂತರ ಇಲ್ಲಿನ ಪರಿಸ್ಥಿತಿ ಅಪಾಯಕರವಾದದ್ದಲ್ಲ ಎಂದು ತಿಳಿಯಿತು.

ಅನು: ಯಶೋಧಾ ಎಸ್.
ಸೂರ್ಯನಾರಾಯಣ ರಾವ್

(ಕೃಪೆ: ಗಾರ್ಡಿಯನ್' ಪತ್ರಿಕೆಯಿಂದ ಡೆಕನ್ ಹೆರಾಲ್ಡ್)

ಜನಕಾಳಜಿಯ ಟಿ.ವಿ. ಜಾಲ 'ಕೈರಳಿ' ಚಾನಲ್

ಇಂದಿನ ಜಾಗತಿಕ ಯುಗದಲ್ಲಿ ನಾಯಿಕೊಡೆಗಳಂತೆ ಬೆಳೆದ ನೂರಾರು ಟಿ.ವಿ. ಚಾನಲ್‌ಗಳ ಅಬ್ಬರ ಇಳಿಯತೊಡಗಿದೆ. ಮುಖ್ಯವಾಗಿ ಜೀವಸಂಕುಲದ, ಜನಜೀವಗಳ ವೈವಿಧ್ಯಮಯ ವಿದ್ಯಮಾನಗಳ, ಜನರ ಬದುಕಿನ ಬವಣೆಗಳ, ಸಾಂಸ್ಕೃತಿಕ ಆಯಾಮಗಳ ಒಟ್ಟಾರೆ ಜನರ ಅಭಿವೃದ್ಧಿಯ ಪಥಕ್ಕೆ ಕೊಂಡೊಯ್ಯುವ ಬದಲು ಬರೀ ಭ್ರಮೆಗಳಲ್ಲಿ ಮುಳುಗಿಸಿದ್ದಾರೆ. ಇಡೀ ಮಾನವ ಕುಲವನ್ನೇ ಸಿನಿಮೀಯಗೊಳಿಸಿ,ಜನ ಜೀವನದ ಭಾವೈಕ್ಯತೆಯನ್ನು ಮಲಿನಗೊಳಿಸಿದ್ದಾರಲ್ಲದೆ, ಕೆಲವೇ ಶಕ್ತಿಗಳ ಹಿಡಿತದಲ್ಲಿ ಮಾಧ್ಯಮಗಳು ಸಿಲುಕಿವೆ.



ಇಡೀ ಕುಟುಂಬ ಇಂದು ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳನ್ನು ನೋಡಲು ಸಾಧ್ಯವಾಗುತ್ತಿಲ್ಲ. ಅಶ್ಲೀಲ, ಅನೈತಿಕ, ಅವೈಜ್ಞಾನಿಕ, ದ್ವೇಷ, ಹಿಂಸೆ, ಮತಾಂಧತೆಗಳನ್ನು ಪೋಷಿಸುತ್ತಿವೆ. ಸಾವಿರಾರು ವರ್ಷಗಳಿಂದ ತಮ್ಮ ಜೀವನದ ಅಂಗವಾಗಿ ಆಚರಿಸಿಕೊಂಡು ಬರುತ್ತಿದ್ದ ಸಾಂಸ್ಕೃತಿಕ ಕಲೆಗಳನ್ನು ಮರೆ ಮಾಚಿದಲ್ಲದೆ, ಇಂದಿನ ವಿಜ್ಞಾನ ಯುಗದಲ್ಲೂ ಮೌಢ್ಯತೆಗಳನ್ನು ತುಂಬಲು ದಿನನಿತ್ಯವೂ ಪ್ರಯತ್ನಗಳು ನಡೆಯುತ್ತಿದೆ. ಉದಾಹರಣೆ ದೈವಶಕ್ತಿಯ ಪರಿಣಾಮದಿಂದ ಕೋತಿ, ಆನೆ, ನಾಯಿಗಳಿಂದ ಕಂಪ್ಯೂಟರ್ ಗ್ರಾಫಿಕ್ಸ್ ಆಪರೇಟ್ ಮಾಡಿಸಿ ದೇವರ ಚಿತ್ರಗಳನ್ನು ಕಂಪ್ಯೂಟರ್ ಪರದೆಯ ಮೇಲೆ ಕಾಣುವಂತೆ ಸನ್ನಿವೇಶಗಳನ್ನು ಜನರಿಗೆ ತೋರಿಸುತ್ತಿದ್ದಾರೆ. ಇಂತಹ ಸಾವಿರಾರು ನಿರ್ದಶನಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಸಾಮಾನ್ಯ ಜನರಿಗೆ ಉಣಬಡಿಸುತ್ತಿದ್ದಾರೆ.

ಇಂಥ ಸಂದರ್ಭದಲ್ಲಿ ಪ್ರಗತಿಪರ ಚಿಂತನೆಯುಳ್ಳ, ವೈಜ್ಞಾನಿಕ ದೃಷ್ಟಿಯುಳ್ಳ ಜವಾಬ್ದಾರಿಯುತ ಟಿ.ವಿ. ಚಾನೆಲ್ ಉದಯಿಸಿದೆ ಅದೇ ಕೇರಳದ 'ಕೈರಳಿ' ಮಲೆಯಾಳಂ ಚಾನಲ್.

ಉದಯಿಸಿತು ಜನರ ಕೈರಳಿ

ಮೊದಲೇ ಕೇರಳ ಸಾಂಸ್ಕೃತಿಕವಾಗಿ, ಸಮೃದ್ಧ ರಾಜ್ಯ. ದುಡಿವ ಜನರ ಸಹಕಾರದಿಂದ ಜನರ ಅಭಿವ್ಯಕ್ತಿಯನ್ನು ಪ್ರದರ್ಶಿಸಲು, ಪ್ರಗತಿಪರವಾದ ಆರೋಗ್ಯಕಾರಿ ಮೌಲ್ಯ ಪ್ರಸಾರಿಸಲು ಕೈರಳಿ ಮಲಯಾಳಂ ಚಾನಲ್ ಉದಯಿಸಿತ್ತು. ಪ್ರಾರಂಭದಲ್ಲಿ ಎಡರು-ತೊಡರುಗಳನ್ನು ಎದುರಿಸಿ ಇಂದು ಸಮಸ್ತವಾಗಿ ಬೆಳೆದಿದೆ. ಮಿಗಿಲಾಗಿ ಮಲಯಾಳಂ ಚಾನಲ್‌ಗಳಲ್ಲಿ ಕೈರಳಿ ಮೇಲುಗೈ ಸಾಧಿಸಿದೆ. ಬರೀ ಸಿನಿಮಾ, ಸೀರಿಯಲ್‌ಗಳಲ್ಲಿಯೇ ಬಹಳಷ್ಟು ಮುಳುಗಿದ್ದ ಇತರೆ ಮಲಯಾಳಂ ಚಾನಲ್‌ಗಳು ನಡುಗತೊಡಗಿವೆ.

ದುಡಿವ ಜನರ ಕೈರಳಿ ಜನರಿಗಾಗಿ ಉದಯಿಸಿ ಜನರ ದಿನನಿತ್ಯದ ಬವಣೆಗಳ ರಸದೂಟವನ್ನು ನೀಡುತ್ತಿದೆ. ಎಲ್ಲರ ಮನಸ್ಸುಗಳನ್ನು ಗೆಲ್ಲುತ್ತಿದೆ.ಎಂಬುದಕ್ಕೆ ಈಗಿನ ಅದರ ಬೆಳವಣಿಗೆಯೇ ಸಾಕ್ಷಿಯಾಗಿದೆ. ಜನರೊಳಗೆ ಹುದುಗಿರುವ ಕಲೆಗಾರಿಕೆಯನ್ನು ಹೊರಗೆಳೆದು ಉರಿದುಂಬಿಸುತ್ತಿದೆ. ಪ್ರತಿಯೊಂದು ಕಾರ್ಯಕ್ರಮ ವಿಶೇಷ, ವೈವಿಧ್ಯಮಯ. ತುಂಬಾ ಆದ್ಯತೆಯಾಗಿ ಜನರು ಸ್ವೀಕರಿಸುವ ಕಾರ್ಯಕ್ರಮಗಳೆಂದರೆ ಪ್ರವಾಸಲೋಕಮ್, ಮಾಧ್ಯಮ ವಿಚಾರಮ್, ಹಾಗೆಯೇ ಸಾಂಸ್ಕೃತಿಕ ಮನೋರಂಜನೆಯ ಕಾರ್ಯಕ್ರಮಗಳು. ವಾಸ್ತವತೆಯೆಂದರೆ ಇದೊಂದು ವಿಶ್ವವಿದ್ಯಾಲಯವೆಂದೇ ಹೇಳಬಹುದು. ಶಿಕ್ಷಣ, ಉದ್ಯೋಗ, ಆರೋಗ್ಯ, ವಿಜ್ಞಾನ, ತಂತ್ರಜ್ಞಾನ, ಪರಿಸರ, ಸಂಗೀತ, ಮಕ್ಕಳ ವಿವೇಚನ ಶಕ್ತಿ ಹೆಚ್ಚಿಸುವ ಕಾರ್ಯಕ್ರಮಗಳು, ಮಹಿಳೆಯರ ಬಗ್ಗೆ ಹೀಗೆ ಪ್ರಸಕ್ತ ವಿದ್ಯಮಾನಗಳು.... ಅಲ್ಲದೆ ಪ್ರತಿಭಾವಂತರನ್ನು ಗುರುತಿಸುವುದು, ಪ್ರೋತ್ಸಾಹಿಸುವುದು ಕೂಡ ಕೈರಳಿಯ ಪ್ರಮುಖ ಕೆಲಸವಾಗಿದೆ.

ಬೆಂಗಳೂರಿನಲ್ಲಿ ಕೈರಳಿ ಉತ್ಸವ

ಹೀಗಾಗಿ ನಮ್ಮ ಜೀವನದ ಅನುಭವಗಳು ನಮ್ಮ ಕೈರಳಿ ಎಂಬಂತೆ ಜನರು ಆಕರ್ಷಿತರಾಗಿದ್ದಾರೆ. ಕೇರಳ ಸರ್ಕಾರದ 23 ಪ್ರಶಸ್ತಿಗಳಲ್ಲಿ 17 ಪ್ರಶಸ್ತಿ ಗಳನ್ನು 'ಕೈರಳಿ'ಯೇ ಬಾಚಿಕೊಂಡಿದೆ.

ಬೆಂಗಳೂರಿನಲ್ಲಿ ಕೈರಳಿ ಉತ್ಸವ

ಕೈರಳಿ ಅನೇಕ ಜನಪ್ರಿಯ ಕಾರ್ಯಕ್ರಮಗಳನ್ನು ಕೇರಳದ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ನಡೆಸಿಕೊಂಡು ಬಂದಿದೆ. ಜನರಿಂದ ಸಹಕಾರ, ಬೆಂಬಲ ಪಡಿದಿದೆ. ಜನರು ಉತ್ಸುಕತೆ ಹೊಂದಿದ್ದಾರಲ್ಲದೆ ಕೈರಳಿಯನ್ನು ಪ್ರೋತ್ಸಾಹಿಸಿದ್ದಾರೆ. ಇದರ ಮುಂದಿನ ಹೆಜ್ಜೆಯಾಗಿ ಹೊರರಾಜ್ಯದ ಜನರತ್ತ


KAIRALI
THE MALAYALAM CHANNEL

ತಲುಪಲು ಬೆಂಗಳೂರಿನಲ್ಲಿ ಕೈರಳಿ ಉತ್ಸವ 202 ಕಾರ್ಯಕ್ರಮ ಏರ್ಪಡಿಸಿತ್ತು. ಬೆಂ.ನಗರದ ಹೃದಯ ಭಾಗದಲ್ಲಿರುವ ಟೌನ್‌ಹಾಲ್‌ನಲ್ಲಿ ದಿನಕ್ಕೊಂದು ಕಾರ್ಯಕ್ರಮದಂತೆ ಐದು ದಿನಗಳ ಕಾಲ ನವೆಂಬರ್ 27 ರಿಂದ ಡಿಸೆಂಬರ್ 1 ರ ವರೆಗೆ ಕಾರ್ಯಕ್ರಮ ನಡೆಯಿತು. ಮೊದಲಿಗೆ ಮಹಿಳೆಯರಿಗಾಗಿ 'ಭಾಗ್ಯಲಕ್ಷ್ಮಿ' ಎಂಬ ಹೆಸರಿನಲ್ಲಿ ಕ್ವಿಜ್ ಕಾರ್ಯಕ್ರಮವನ್ನು ನಡೆಸಲಾಯಿತು. ಇದರಲ್ಲಿ ಪ್ರಮುಖವಾಗಿ ಮಹಿಳೆಯರ ವಿಷಯ ಕುರಿತಾಗಿತ್ತು. ಹೊಸ ರೀತಿಯ ಸುವ್ಯವಸ್ಥಿತವಾಗಿ ಆಯೋಜಿಸಿ ಅಶ್ವಮೇಧಂ, ಗಾಂಧರ್ವ ಪ್ರಶಸ್ತಿ, ಸಮೂಹ ಪಾಠಂ ಕಾರ್ಯಕ್ರಮಗಳನ್ನು ಟೌನ್ ಹಾಲ್‌ನಲ್ಲಿ ನಡೆಸಲಾಯಿತು. ಕೊನೆಯದಾಗಿ ನಗರದ ಸೆಂಟ್ ಜೋಸೆಫ್ ಹೈಸ್ಕೂಲ್ ಮೈದಾನದಲ್ಲಿ 'ರಂಗೋತ್ಸವ' ಕಾರ್ಯಕ್ರಮವನ್ನು ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಉದ್ಘಾಟಿಸಿದರು. ಮುಖ್ಯಅತಿಥಿಗಳಾಗಿ ಎಂ.ಎಸ್.ಸತ್ಯು, ಹೆಸರಾಂತ ಸಾಹಿತಿ ಚಂದ್ರಶೇಖರ ಕಂಬಾರ, ಕಲೆಗಾರ ಯೂಸಬ್ ಅರಕಾಲ್, ಸ್ವಾತಂತ್ರ್ಯ ಹೋರಾಟಗಾರರಾದ ಎಂ.ಸಿ.ಕೃಷ್ಣನುನಿನಾಯರ್ ಮುಂತಾದವರು ಭಾಗವಹಿಸಿದ್ದರು.

ಹೆಸರಾಂತ ಸಂಗೀತಗಾರ ಜಯಚಂದ್ರ ಮತ್ತು ಕವಲಂ ಶ್ರೀ ಕುಮಾರ್‌ರವರು ರಾಘವಿ ಸಿಂಧೂ ಭೈರವಿ ಸಂಗೀತದ ಕಾರ್ಯಕ್ರಮದ ನೀಡಿ ಕಿಕ್ಕಿರಿದ ಜನರಿಗೆ ಸಂತಸ ನೀಡಿದರು. ಇದೊಂದು ಬಹುಅಪರೂಪದ ಉಪಯುಕ್ತ ಕಾರ್ಯಕ್ರಮವಾಗಿತ್ತು.

- ಬಿ.ರಾಜಶೇಖರ ಮೂರ್ತಿ


ಜನಪ್ರಿಯ ಅಶ್ವಮೇಧ ಕಾರ್ಯಕ್ರಮ


ಜನಪ್ರಿಯ ಧಾರಾವಾಹಿ

ಹೈಟೆಕ್ ಆಡಳಿತದಲ್ಲಿ ನಿರುದ್ಯೋಗಿ ಆತ್ಮಹತ್ಯೆ....

ಪುಟ 10 ರಿಂದ

ಸಂಬಳ ಬರುತ್ತಿದ್ದ ಕಾರಣ ಮಗಳ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಸೇರಿಸಿದರು. ಅದೇ ವಿಷಯಕ್ಕೆ ಬೇಸರ ಪಟ್ಟುಕೊಂಡು "ನಾನು ಹೇಳಿದರು ಕೇಳಲಿಲ್ಲ, ಕನ್ನಡ ಶಾಲೆಗೆ ಸೇರಿಸಿದ್ದರೆ ಆಗುತ್ತಿತ್ತು, ಈಗ ನೋಡು ನನಗೆ ಕೆಲಸವಿಲ್ಲ, ನಿನಗೆ ಸಂಬಳ ಕಡಿಮೆ ಅದೂ ಯಾವಾಗ ನಿಲ್ಲುತ್ತದೋ ಗೊತ್ತಿಲ್ಲ. ಮಕ್ಕಳಿಗೆ ಫೀಸ್, ಬಾಡಿಗೆ, ಕರಂಟು, ನೀರಿನ ಬಿಲ್ಲು, ಊಟ ತಿಂಡಿಗೆ ಹಣ, ಕ್ರಿಸ್‌ಮಸ್‌ಗೆ ಬಟ್ಟೆ ಎಲ್ಲಿಂದ ತರುವುದು ಎದು ಗೊಣಗುತ್ತಿದ್ದ. ಸದಾ ಚಿಂತಿಸುತ್ತಿದ್ದ" ನಾನು ಕೂಡ ಎಷ್ಟೋ ಹೇಳಿದೆ, ಈಗ ಹೀಗಿದೆ, ನಾಳೆ ಸರಿಯಾಗುತ್ತೆ, ದೇವರು ಕರುಣೆ ತೋರುತ್ತಾನೆ ಎಂದು, ಆದರೂ ನೋಡಿ ಕೊನೆಗೂ ನೇಣು ಹಾಕಿಕೊಂಡು ಸತ್ತು ಹೋದ. ನನ್ನ ಮಗಳು, ಮೊಮ್ಮಕ್ಕಳನ್ನು ಅನಾಥರಾಗಿಸಿ ಬಿಟ್ಟ ಎಂದು ಜೋಸೆಫಿನ್ ರೋಧಿಸಿದರು.

ಕಾರ್ಖಾನೆ ಮುಚ್ಚುವಿಕೆ, ದಿವಾಳಿ, ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕುವಿಕೆ, ಸ್ವಯಂ ನಿವೃತ್ತಿ, ಸೆಟ್ಲಮೆಂಟ್ ಇತ್ತೀಚೆಗೆ ಸಾಮಾನ್ಯ ವಿಷಯ. ದಶಕದ ಉದಾರೀಕರಣ ಆಧಾರಿತ ಆರ್ಥಿಕ ನೀತಿಗಳಿಂದಾಗಿ ಇದು ಹೆಚ್ಚುತ್ತಿದೆ. ಇದರಿಂದ ಏನಾಗುತ್ತದೆ, ಆಗುವುದೆಲ್ಲಾ ಒಳಿತಿಗಾಗಿ, ಅಮೇರಿಕಾವಾಗಿ ಭಾರತವನ್ನು ಮಾರ್ಪಡಿಸುತ್ತೇವೆ, ಅದಕ್ಕಾಗಿ ಈ ನೀತಿ. "ಕನಸು ಕಾಣಿರಿ ಅದರ ನೆನೆಸಿಗಾಗಿ ದುಡಿಯಿರಿ" ಎಂಬ ಘೋಷಣೆ ಕೊಡುತ್ತಿದ್ದಾರೆ. ನಮ್ಮನ್ನಾಳುವ ಮಂದಿ. ಆದರೆ ಡೇವಿಡ್ ನವೆಂಬರ್ 27 ರಂದು, ಹೆಂಡತಿ ಕೆಲಸಕ್ಕೆ, ಮಕ್ಕಳು ಶಾಲೆಗೆ ತೆರಳಿದ ನಂತರ, ನೇಣಿಗೆ ಕುತ್ತಿಗೆ ನೀಡಿ, ಹೆಂಡತಿ ಮಕ್ಕಳು, ಹಿಂತಿರುಗುವ ಒಳಗಾಗಿ ಹೆಣವಾಗುವ ಮೂಲಕ ಮೇಲಿನ ನೀತಿಗಳ ಪರಿಣಾಮವೇನು ಎನ್ನುವುದನ್ನು ಜಗತ್ತಿಗೆ ಸಾರಿದ್ದಾರೆ.

ಬೆಂಗಳೂರಿನ ರಾಮಮೂರ್ತಿ ನಗರದಲ್ಲಿ ಸಂಭವಿಸಿರುವ ಹಸಿವಿನಿಂದ ಸಾವು, ಅದಕ್ಕೆ ಎರಡು ದಿನ ಮುನ್ನ ಚಾಮರಾಜಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿರುವ ಇಂತಹದೆ ಇನ್ನೊಂದು ಸಾವು ಹಾಗು ಬೆಟ್ಟರ ಹಳ್ಳಿಯ ಯುವಕ ನಿರುದ್ಯೋಗದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಗಳು ಕೇವಲ ಸಣ್ಣ ಪ್ರತ್ಯೇಕ ಘಟನೆಗಳಾಗಿದ್ದರೂ ಮುಂದಿನ ದಿನಗಳಲ್ಲಿ ಉಂಟಾಗಬಹುದಾದ ಇಂತಹದೆ ಘಟನೆಗಳ ಸೂಚಕವಾಗಿವೆ. ಹಿಂದೊಮ್ಮೆ ಬೆಂಗಳೂರು ವಿ.ವಿ.ಯ ಉಪಕುಲಪತಿಗಳು ಬೆಂಗಳೂರು ಐ.ಟಿ. ರಾಜರ ಬ್ಯೂಟಿ ರಾಣೀಯರ (i.t. kings and beauty queens) ತಾಣವೆಂದು ಬಹಿರಂಗ ಸಮಾರಂಭದಲ್ಲಿ ಹೇಳುತ್ತಿದ್ದರು. ಅದರ ಜೊತೆಯಲ್ಲಿ ಹಸಿವಿನಿಂದ ಸಾಯುವವರ ನಿರುದ್ಯೋಗದಿಂದ ಆತ್ಮಹತ್ಯೆ ಮಾಡಿಕೊಳ್ಳುವವರ ತಾಣವೆಂದೂ ಸಹಾ ಕರೆಯಬೇಕಾಗಿದೆ ಎಂದು ಅವರಿಗೆ ಅರಿವಾದರೆ ಒಳಿತು. ಬೆಂಗಳೂರು ಐ.ಟಿ. ರಾಜಧಾನಿ ಸಿಲಿಕಾನ್ ವ್ಯಾಲಿ, ದೇಶ ವಿದೇಶಗಳ ಪ್ರಧಾನಿ ಅಧ್ಯಕ್ಷರನ್ನು ಆಕರ್ಷಿಸುವ, ಬಿಲ್ ಗೇಟ್ಸ್ ನಂತವರು ಬಂದು ಹೋಗುವ ಸುಂದರ ನಗರ ಎಂದು ಕರೆಯುವಾಗಲೆ, ಹಸಿವಿನಿಂದ ಇರುವವರಿಗೆ ನಿರುದ್ಯೋಗಿಗಳಿಗೆ ಸಾವೇ ದಾರಿಯೆಂದು ತೋರುವ ನಗರವಾಗಿದೆ. ಕಾರ್ಖಾನೆಗಳನ್ನು ಮುಚ್ಚಲು ಅವ್ಯಾಹತ ಸ್ವತಂತ್ರ ನೀಡಬೇಕೆನ್ನುವ 2 ನೇ ರಾಷ್ಟ್ರೀಯ ಕಾರ್ಮಿಕ ಆಯೋಗದ ಶಿಫಾರಸ್ಸು, ಅದಕ್ಕನುಗುಣವಾಗಿ ಕಾರ್ಮಿಕ ಕಾನೂನನ್ನು ತರಲು ಮುಂದಾಗಿರುವ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ, ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚುವ ಇಲ್ಲ ಮಾರುವ ಶೇರು ವಿಕ್ರಯ ಸಚಿವರಾದ ಅರುಣ್ ಶೌರಿ, ಉದ್ಯೋಗ ಕಡಿತದ ಮಾತನಾಡುವ ಆರ್ಥಿಕ ತಜ್ಞರು, ಅದಕ್ಕನುಗುಣವಾಗಿ ನೀತಿ ನಿರೂಪಿಸುತ್ತಿರುವ ಕೃಷ್ಣರ ನೇತೃತ್ವದ ಕಾಂಗ್ರೆಸ್‌ಗೆ ಹೈ-ಟೆಕ್ ಸರ್ಕಾರ ಡೇವಿಡ್ ನಂತಹ ನೂರಾರು ಯುವ ಜನರ ಪ್ರಾಣಕ್ಕೆ ಕಂಟಕವಾಗಿ ದುಃಖತಪ್ತ ಸ್ಥೆಲಾ ಮತ್ತು ಮಕ್ಕಳಿಗೆ ಇದಿಯೆ ಇವರ ಬಳಿ ಸಾಂತ್ವನ....

PRB DECR' 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. [illegible]
ಮುದ್ರಣ: ಹರಿ ಪ್ರಿಂಟರ್ಸ್, ಕ್ರೆಸೆಂಟ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH